# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 8 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 83 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4




# ಕೆಆರ್‌ಎಸ್, ಕಬಿನಿ, ಹೇಮಾವತಿ ಜಲಾಶಯಗಳು ಸದ್ಯದಲ್ಲೇ ಭರ್ತಿ

● ಕೆಆರ್‌ಎಸ್, ಕಬಿನಿ ಅಣೆಕಟ್ಟೆಗಳ ಹಾಲಿ ನೀರಿನ ಮಟ್ಟ ಕ್ರಮವಾಗಿ 118, 2278 ಅಡಿ; ಎರಡೂ ತುಂಬಲು ಇನ್ನು ಕೇವಲ 6 ಅಡಿ ಬಾಕಿ ● ನಾಲ್ಕೇ ದಿನದಲ್ಲಿ ಕೆಆರ್‌ಎಸ್ ಜಲಾಶಯದ ನೀರಿನ ಪ್ರಮಾಣ 10 ಅಡಿ ಏರಿಕೆ ● ನದಿ ದಂಡೆ, ತಗ್ಗು ಪ್ರದೇಶಗಳ ವಾಸಿಗಳು ಸುರಕ್ಷಿತ ಸ್ಥಳಕ್ಕೆ ತೆರಳಲು ಸೂಚನೆ

ಮೈಸೂರು, ಜು.7(ಆರ್‌ಕೆ)–ಕೊಡಗು ಮತ್ತು ಹಾಸನ ಜಿಲ್ಲೆಯಲ್ಲಿ ಭಾರೀ ಮಳೆ ಸುರಿಯುತ್ತಿರುವ ಪರಿಣಾಮ ಕೃಷ್ಣರಾಜಸಾಗರ (ಕೆಆರ್‌ಎಸ್), ಕಬಿನಿ ಮತ್ತು ಹೇಮಾವತಿ ಜಲಾಶಯಗಳಿಗೆ ಅಧಿಕ ಪ್ರಮಾಣದ ನೀರು ಹರಿದು ಬರುತ್ತಿದೆ. ಒಂದೇ ದಿನದಲ್ಲಿ ಕೆಆರ್‌ಎಸ್ ನೀರಿನ ಮಟ್ಟ ಬರೋಬ್ಬರಿ 10 ಅಡಿಗಳಷ್ಟು ಹೆಚ್ಚಳವಾಗಿದೆ.

ಇಂದು 36,608 ಕ್ಯೂಸೆಕ್ ಪ್ರಮಾಣದ ನೀರು ಕೆಆರ್‌ಎಸ್‌ಗೆ ಹರಿದು ಬರುತ್ತಿದೆ. ಜು.3ರಂದು 108.80 ಅಡಿ ನೀರು ಸಂಗ್ರಹವಾಗಿತ್ತು. ಆದರೆ ಇಂದು ಅದರ ಪ್ರಮಾಣ 118 ಅಡಿಗಳಿಗೆ ಏರಿಕೆಯಾಗಿದ್ದು, ಗರಿಷ್ಠ ಮಟ್ಟ 124.80 ಅಡಿ ತಲುಪಲು ಕೇವಲ 6 ಅಡಿಯಷ್ಟೇ ಬಾಕಿ ಉಳಿದಿದೆ. ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಒಳ ಹರಿವಿನ ಪ್ರಮಾಣ ಇನ್ನೂ ಹೆಚ್ಚಾಗುವ ಸಾಧ್ಯತೆಯಿದ್ದು, ಯಾವುದೇ ಸಂದರ್ಭದಲ್ಲಾದರೂ ನದಿಗೆ ಹೆಚ್ಚುವರಿ ನೀರನ್ನು ಬಿಡಲಾಗುವುದು ಎಂದು ಕಾವೇರಿ ನೀರಾವರಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಶಂಕರೇಗೌಡ ತಿಳಿಸಿದ್ದಾರೆ. ಕೆಆರ್‌ಎಸ್‌ಗೆ 36,608 ಕ್ಯೂಸೆಕ್ ಒಳ ಹರಿವಿದ್ದು, ಪ್ರಸ್ತುತ 3,712 ಕ್ಯೂಸೆಕ್ ನೀರನ್ನು ಹೊರ ಬಿಡಲಾಗುತ್ತಿದೆ. ಒಳ ಹರಿವಿನ ಪ್ರಮಾಣ ಹೆಚ್ಚಾದಲ್ಲಿ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟವೂ ಏರಲಿದ್ದು, ಮುಖ್ಯಮಂತ್ರಿಗಳ ಸಲಹೆ ಪಡೆದು ಕಾವೇರಿ ಮಾತೆಗೆ ಬಾಗಿನ ಸಮರ್ಪಣೆಗೆ ಸಿದ್ಧತೆ ಮಾಡಿಕೊಳ್ಳಲಾಗುವುದು ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ. ಜಲಾಶಯದಿಂದ ಅಧಿಕ ನೀರನ್ನು ನದಿಗೆ ಬಿಟ್ಟಲ್ಲಿ ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಪಾಲಹಳ್ಳಿ ಬಳಿಯ ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರವನ್ನು ಸ್ಥಗಿತಗೊಳಿಸಲಾಗುತ್ತದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿ ದ್ದಾರೆ. 15,000 ಕ್ಯೂಸೆಕ್‌ವರೆಗೆ ಜಲಾಶಯದಿಂದ ನದಿಗೆ ನೀರು ಬಿಟ್ಟರೆ ರಂಗನತಿಟ್ಟು ದೋಣಿ ವಿಹಾರ ನಡೆಸಲು ತೊಂದರೆಯಾಗುವುದಿಲ್ಲ. ಆದರೆ 20,000 ಕ್ಯೂಸೆಕ್‌ಗಿಂತ ಹೆಚ್ಚು ನೀರು ಹರಿಸಿದ್ದಲ್ಲಿ ಮಾತ್ರ ದೋಣಿ ವಿಹಾರವನ್ನು ಸ್ಥಗಿತಗೊಳಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.







> “ಕಾವೇರಿ, ಕಬಿನಿ, ಹೇಮಾವತಿ ಜಲಾಶಯಗಳಿಂದ ಯಾವುದೇ ಸಂದರ್ಭದಲ್ಲಿ ಹೆಚ್ಚುವರಿ ನೀರನ್ನು ನದಿಗೆ ಬಿಡಲಾಗುವುದು. ಆದ್ದರಿಂದ ಎರಡು ನದಿ ದಂಡೆಗಳಲ್ಲಿ ಇರುವ ಸಾರ್ವಜನಿಕರು ತಮ್ಮ ಆಸ್ತಿ–ಪಾಸ್ತಿ ಹಾಗೂ ಜಾನುವಾರುಗಳ ರಕ್ಷಣೆಗೆ ಎಚ್ಚರಿಕೆ ವಹಿಸಿ, ಮುಂಜಾಗ್ರತೆಯಾಗಿ ಸುರಕ್ಷಿತ ಸ್ಥಳಗಳಿಗೆ ತೆರಳಬೇಕು.
>
> –ನೀರಾವರಿ ಇಲಾಖೆ ಇಂಜಿನಿಯರ್‌ಗಳು

ಕಬಿನಿ ಜಲಾಶಯದ ನೀರಿನ ಮಟ್ಟ ಗರಿಷ್ಠ 2,284 ಅಡಿಗಳಾಗಿದ್ದು, ಇಂದು 2,278 ಅಡಿ ನೀರು ಸಂಗ್ರಹವಾಗಿದೆ. ಜಲಾಶಯಕ್ಕೆ 19,000 ಕ್ಯೂಸೆಕ್‌ನಷ್ಟು ನೀರು ಹರಿದು ಬರುತ್ತಿದ್ದು, ಈಗಾಗಲೇ 5,000 ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ. ಒಳ ಹರಿವಿನ ಪ್ರಮಾಣ ಹೆಚ್ಚಾಗುವ ಸಾಧ್ಯತೆಯಿದೆ. ಹೇಮಾವತಿ ಜಲಾಶಯದ ಗರಿಷ್ಠ ನೀರಿನ ಮಟ್ಟ 2922 ಅಡಿಗಳಾಗಿದ್ದು, ಇಂದು 2913.60 ಅಡಿ ನೀರು ಸಂಗ್ರಹವಾಗಿದೆ. ಇಂದು 16,600 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಹೀಗಾಗಿ ಹೆಚ್ಚಿನ ಪ್ರಮಾಣದ ನೀರನ್ನು ಹೊರ ಬಿಡಲಾಗುತ್ತಿದೆ.



## ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಂತೆ ಎ–ಖಾತಾ ಬೆನ್ನಲ್ಲೇ ಈಗ ಕೆಹೆಚ್‌ಬಿಯಿಂದ

# 6 ಸಾವಿರ ನಿವೇಶನ ಹಂಚಿಕೆ ಘೋಷಣೆ

● ತಿಂಗಳಲ್ಲಿ ಪ್ರಕ್ರಿಯೆ ಪೂರ್ಣ ● ಇದರ ಜೊತೆಗೆ 20 ಸಾವಿರ ಮನೆಗಳ ಹಂಚಿಕೆ ● ಮೈಸೂರಲ್ಲಿ ಇಂದಿನಿಂದ ಕೆಆರ್‌ಎಸ್ ನಿಸರ್ಗ ಬಡಾವಣೆಯಲ್ಲಿ 523 ನಿವೇಶನ ಹಂಚಿಕೆ ● ವಸತಿ ಸಚಿವ ಸೋಮಣ್ಣ ಘೋಷಣೆ



ಬೆಂಗಳೂರು, ಜು.7(ಕೆಎಂಶಿ)– ಲಕ್ಷಾಂತರ ಮಂದಿ ಬಿ–ಖಾತಾ ನಿವೇಶನದಾರರಿಗೆ ಎ–ಖಾತಾ ಒದಗಿಸಲು ಸರ್ಕಾರ ಪ್ರಕಟಿಸಿರುವ ಬೆನ್ನಲ್ಲೆ ಆರು ಸಾವಿರ ನಿವೇಶನಗಳನ್ನು ಗೃಹ ಮಂಡಳಿ ವತಿಯಿಂದ ಇನ್ನೊಂದು ತಿಂಗಳೊಳಗಾಗಿ ಹಂಚುವುದಾಗಿ ವಸತಿ ಇಲಾಖೆ ಪ್ರಕಟಿಸಿದೆ.

ವಸತಿ ಸಚಿವ ವಿ.ಸೋಮಣ್ಣ ಸುದ್ದಿಗಾರರಿಗೆ ವಿಷಯ ತಿಳಿಸಿದ್ದಲ್ಲದೆ, ಇನ್ನು ಮುಂದೆ ಕರ್ನಾಟಕ ಗೃಹ ಮಂಡಳಿ ವತಿಯಿಂದ ಸ್ವತಂತ್ರವಾಗಿ ಹೊಸ ಬಡಾವಣೆ ನಿರ್ಮಾಣ ಇಲ್ಲ ಎಂದು ಸ್ಪಷ್ಟಪಡಿಸಿದರು. ಬಡಾವಣೆ ನಿರ್ಮಾಣಕ್ಕೆ ಭೂ ಸ್ವಾಧೀನ ಪ್ರಕ್ರಿಯೆ ಕ್ಲಿಷ್ಟಕರವಾಗಿರುವುದರಿಂದ ಸ್ವತಂತ್ರವಾಗಿ ಬಡಾವಣೆ ನಿರ್ಮಿಸುವ ಕಾರ್ಯ ಕೈಗೆತ್ತಿಕೊಳ್ಳುವುದಿಲ್ಲ. ರೈತರು ಮುಂದೆ ಬಂದರೆ ಅವರ ಸಹಭಾಗಿತ್ವದಲ್ಲಿ ಬಡಾವಣೆಗಳನ್ನು ನಿರ್ಮಿಸಲಾಗುವುದು. ಇನ್ನೊಂದು ತಿಂಗಳೊಳಗಾಗಿ 6015 ನಿವೇಶನಗಳನ್ನು ಹಾಗೂ 20 ಸಾವಿರ ಮನೆಗಳನ್ನು ಇಡೀ ರಾಜ್ಯಾದ್ಯಂತ ಹಂಚಲಾಗುವುದು. ಭೂ ಸ್ವಾಧೀನ ಕಾರ್ಯದಲ್ಲಿ ಉಂಟಾದ ವಿಳಂಬದಿಂದ ಕಳೆದ ಹಲವು ಕಾಲದಿಂದ ಜನರಿಗೆ ಮನೆ, ನಿವೇಶನ ನೀಡುವ ಕೆಲಸವಾಗಿರಲಿಲ್ಲ ಎಂದು ಸ್ಪಷ್ಟಪಡಿಸಿದರು. ಇಷ್ಟಾದರೂ ನಾನು ▶ 8ನೇ ಪುಟಕ್ಕೆ

# ಈ ಸಲ ಅದ್ಧೂರಿ ದಸರಾ

## ಆಗಸ್ಟ್‌ನಲ್ಲಿ ಪುರ ಪ್ರವೇಶಿಸಲಿರುವ ಗಜಪಡೆ

● ಆನೆಗಳ ಆಯ್ಕೆ ಪ್ರಕ್ರಿಯೆಗೆ ಚಾಲನೆ
● ಜು.30ರೊಳಗೆ ಅಂತಿಮ ಪಟ್ಟಿ



> “ಈ ಬಾರಿ ದಸರಾ ಮಹೋತ್ಸವ 10 ದಿನ ಮುಂಚಿತವಾಗಿ ಬಂದಿದೆ. ಅ.5ರಂದು ಜಂಬೂಸವಾರಿ ನೆರವೇರಲಿದೆ. ಸರ್ಕಾರ ಈ ಬಾರಿ ದಸರಾ ಮಹೋತ್ಸವವನ್ನು ಅದ್ಧೂರಿಯಾಗಿ ನಡೆಸಲು ನಿರ್ಧರಿಸಿದರೆ, ಅರಮನೆಯಿಂದ ಬನ್ನಿಮಂಟಪದವರೆಗೆ ಜಂಬೂಸವಾರಿ ಸಾಗಲಿದೆ. ಹಾಗಾಗಿ 55 ದಿನ ಮುಂಚಿತವಾಗಿ ಆನೆಗಳನ್ನು ಮೈಸೂರಿಗೆ ಕರೆತರಬೇಕಾಗುತ್ತದೆ.

ಮೈಸೂರು, ಜು.7(ಎಂಟಿವೈ)– ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಅರಮನೆ ಆವರಣಕ್ಕೆ ಸೀಮಿತಗೊಂಡಿದ್ದ ನಾಡಹಬ್ಬ ದಸರಾ ಮಹೋತ್ಸವವನ್ನು ಈ ಬಾರಿ ಸರ್ಕಾರ ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಿದ್ದು, ಜಂಬೂಸವಾರಿ ಪ್ರಮುಖ ಆಕರ್ಷಣೆಯ ಕೇಂದ್ರ ಬಿಂದುವಾದ 'ಗಜಪಡೆ' ಆಗಸ್ಟ್ ಮೊದಲ ವಾರದೊಳಗೆ ಸಾಂಸ್ಕೃತಿಕ ನಗರಿ ಮೈಸೂರು ಪ್ರವೇಶಿಸುವುದು ಖಚಿತವಾಗಿದೆ. ಕೊರೊನಾ ನಂತರದ ದಸರಾ ಮಹೋತ್ಸವ ಈ ಬಾರಿ ವೈಭವದ ಕಳೆಯನ್ನು ಮೈದುಂಬಿಕೊಳ್ಳಲಿದ್ದು, ಅದಕ್ಕಾಗಿ ಕೂಂಬಿಂಗ್ ಸ್ಪೆಷಲಿಸ್ಟ್ ಅಭಿಮನ್ಯು ನೇತೃತ್ವದಲ್ಲಿ ಗಜಪಡೆಗೆ 14ರಿಂದ 15 ಆನೆಗಳ ಆಯ್ಕೆ ಪ್ರಕ್ರಿಯೆ ಆರಂಭಿಸುವಂತೆ ಸೂಚನೆ ನೀಡಲಾಗಿದ್ದು, ಅ.5ರಂದು ನಡೆಯಲಿರುವ ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳಲು ಆ.5ರಿಂದ 8ರೊಳಗೆ ಮೊದಲ ತಂಡದ ಆನೆಗಳನ್ನು ಕರೆತರಲು ನಿರ್ಧರಿಸಲಾಗಿದೆ.

**ಜು.30ರೊಳಗೆ ಅಂತಿಮ ಪಟ್ಟಿ:** ದಸರಾ ಗಜಪಡೆ ಆಯ್ಕೆ ಪ್ರಕ್ರಿಯೆ ಕುರಿತಂತೆ ಡಿಸಿಎಫ್ ಡಾ.ವಿ.ಕರಿಕಾಳನ್ ▶ 8ನೇ ಪುಟಕ್ಕೆ



### ಮೂರನೇ ಬಾರಿ ಅಂಬಾರಿ ಹೊರಲಿರುವ ಅಭಿಮನ್ಯು

ಅರಣ್ಯ ಇಲಾಖೆಯ ಕೂಂಬಿಂಗ್ ಸ್ಪೆಷಲಿಸ್ಟ್ ಅಭಿಮನ್ಯು 3ನೇ ಬಾರಿ ಅಂಬಾರಿ ಹೊರುವುದು ಖಚಿತ. ಕಳೆದ ಎರಡು ವರ್ಷದಿಂದ ಚಿನ್ನದ ಅಂಬಾರಿ ಹೊರುವ ಜವಾಬ್ದಾರಿ ನಿಭಾಯಿಸಿರುವ ಅಭಿಮನ್ಯು, ಕೊರೊನಾ ಹಿನ್ನೆಲೆಯಲ್ಲಿ ಕೇವಲ ಅರಮನೆ ಅಂಗಳದಲ್ಲೇ ಅಂಬಾರಿ ಹೊತ್ತಿತ್ತು. ನೂರಾರು ಕಾಡಾನೆ, 45ಕ್ಕೂ ಹೆಚ್ಚು ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು, ಕರ್ನಾಟಕ ಅರಣ್ಯ ಇಲಾಖೆಯ ಎಕೆ–47 ಬಿರುದಾಂಕಿತ ಅಭಿಮನ್ಯು ಕರ್ನಾಟಕ ಮಾತ್ರವಲ್ಲದೆ, ಮಹಾರಾಷ್ಟ್ರ, ತಮಿಳುನಾಡು, ಕೇರಳ ಸೇರಿದಂತೆ ಉತ್ತರ ಭಾರತದ ಕೆಲ ರಾಜ್ಯಗಳಲ್ಲೂ ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಭುಜಬಲ ಮೆರೆದಿದ್ದಾನೆ.

## ಇಂದು ಎರಡನೇ ಆಷಾಢ ಶುಕ್ರವಾರ

### ಚಾಮುಂಡೇಶ್ವರಿಗೆ ವಿಶೇಷ ಪೂಜೆ



ಮೈಸೂರು, ಜು.7(ಎಂಕೆ)– ಆಷಾಢ ಮಾಸದ 2ನೇ ಶುಕ್ರವಾರ ಚಾಮುಂಡಿ ಬೆಟ್ಟದಲ್ಲಿ ಮುಂಜಾನೆ 5.30ರಿಂದಲೇ ತಾಯಿ ಚಾಮುಂಡೇಶ್ವರಿ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಮೊದಲ ಆಷಾಢ ಶುಕ್ರವಾರದಂತೆಯೇ 2ನೇ ಆಷಾಢ ಶುಕ್ರವಾರ ದೇವಿ ದರ್ಶನಕ್ಕೆ ಅವಕಾಶವಿದ್ದು, ಬೆಳಗಿನ ಜಾವ 3.30ರಿಂದಲೇ ಉಚಿತ ಬಸ್ ಸೇವೆ ಇರಲಿದೆ ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ತಿಳಿಸಿದ್ದಾರೆ. ಲಲಿತ ಮಹಲ್ ಪ್ಯಾಲೆಸ್ ಪಕ್ಕದಲ್ಲಿರುವ ಪ್ರವಾಸೋದ್ಯಮ ಇಲಾಖೆಯ ಮೈದಾನದಲ್ಲಿ ಭಕ್ತರ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದ್ದು, ಅಲ್ಲಿಂದಲೇ ಸಾರಿಗೆ ಬಸ್‌ಗಳಿಂದ ಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯಬಹುದಾಗಿದೆ. ಅಲ್ಲದೆ ಪ್ರಸಾದ ಸೇವೆಯೂ ಎಂದಿನಂತಿರಲಿದೆ ಎಂದು ಮುಜರಾಯಿ ಇಲಾಖೆ ತಹಸಿಲ್ದಾರ್ ಕೃಷ್ಣ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

## ಶೌಚಾಲಯ ನಿರ್ಮಾಣಕ್ಕೆ ಮೈಸೂರು ಮಹಾನಗರಪಾಲಿಕೆಯಿಂದಲೇ

# ಪಾರಂಪರಿಕ ಚಾಮುಂಡಿ ಗೆಸ್ಟ್ ಹೌಸ್ ಕಾಂಪೌಂಡ್ ಧ್ವಂಸ



ಮೈಸೂರು, ಜು.7(ಜಿಎ)–ಬೇಲಿಯೇ ಎದ್ದು ಹೊಲ ಮೇಯ್ದಂತೆ ಮೈಸೂರು ಮಹಾನಗರ ಪಾಲಿಕೆಯೇ ಪಾರಂಪರಿಕ ಕಟ್ಟಡವೊಂದರ ಕಾಂಪೌಂಡ್ ಧ್ವಂಸಗೊಳಿಸಿ, ಶೌಚಾಲಯ ನಿರ್ಮಿಸಲು ಮುಂದಾಗಿದೆ.

'ಚಾಮುಂಡಿ ಗೆಸ್ಟ್ ಹೌಸ್' 1920ರಲ್ಲಿ ಸುಂದರವಾಗಿ ನಿರ್ಮಿಸಲಾದ ಕಟ್ಟಡವಾಗಿದ್ದು, ನೂರು ವರ್ಷ ಕಳೆದಿದ್ದರೂ, ಈ ಕಟ್ಟಡವಂತೂ ಗಟ್ಟಿಮುಟ್ಟಾಗಿಯೇ ಇದೆ. ಇದೊಂದು ಪಾರಂಪರಿಕ ಕಟ್ಟಡ. ಇಲ್ಲಿ ಹಲವಾರು ಮುತ್ಸದ್ದಿ ರಾಜಕಾರಣಿಗಳು ಕೆಲ ವರ್ಷದ ಹಿಂದೆ ಸುದ್ದಿಗೋಷ್ಠಿಗಳನ್ನು ನಡೆಸುತ್ತಿದ್ದರು. ಗಣ್ಯರು ಮೈಸೂರಿಗೆ ಆಗಮಿಸಿದಾಗ ಚಾಮುಂಡಿ ಗೆಸ್ಟ್ ಹೌಸ್‌ನಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಈಗಲೂ ಚಾಮುಂಡಿ ಗೆಸ್ಟ್ ಹೌಸ್‌ನ ಒಂದು ಭಾಗದಲ್ಲಿ 'ನ್ಯಾಯ ನಿವಾಸ್' ಹೆಸರಿನಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಅತಿಥಿ ಗೃಹವಿದೆ. ಮೈಸೂರಿಗೆ ಆಗಮಿಸಿದ ಹೈಕೋರ್ಟ್ ನ್ಯಾಯಮೂರ್ತಿಗಳು ಇಲ್ಲಿ ವಾಸ್ತವ್ಯ ಹೂಡುತ್ತಾರೆ. ಜೆಎಲ್‌ಬಿ ರಸ್ತೆ ಹಾಗೂ ದಿವಾನ್ಸ್ ರಸ್ತೆ ಮಧ್ಯೆ ಚಾಮುಂಡಿ ಗೆಸ್ಟ್ ಹೌಸ್ ಇದೆ. ಅದಕ್ಕೆ ಜೆಎಲ್‌ಬಿ ರಸ್ತೆಯಲ್ಲಿ ಪ್ರವೇಶ ದ್ವಾರವಿದೆ. ಇಂತಹ ಇತಿಹಾಸವಿರುವ ▶ 8ನೇ ಪುಟಕ್ಕೆ



# ರೈಲಲ್ಲಿ ಟಿಕೆಟ್‌ರಹಿತ ಪ್ರಯಾಣಿಕರಿಂದ ಹಣ ವಸೂಲಿ: ನಕಲಿ ಟಿಟಿಇ ಬಂಧನ

ಮೈಸೂರು, ಜು. 7 (ಆರ್‌ಕೆ)–ರೈಲಿನಲ್ಲಿ ಟಿಕೆಟ್ ರಹಿತ ಪ್ರಯಾಣಿಕರಿಂದ ದಂಡ ರೂಪದಲ್ಲಿ ಹಣ ವಸೂಲಿ ಮಾಡುತ್ತಿದ್ದ ನಕಲಿ ಟಿಟಿಇ ಇಂದು ಸಿಕ್ಕಿ ಬಿದ್ದಿದ್ದಾನೆ.

ಕನಕಪುರ ನಿವಾಸಿ ಕರಿಯಪ್ಪನ ಮಗ ಮಲ್ಲೇಶ್ (35) ಬಂಧಿತ ನಕಲಿ ರೈಲ್ವೆ ಅಧಿಕಾರಿಯಾಗಿದ್ದು, ಈಗ ಆರ್‌ಪಿಎಫ್ ವಶದಲ್ಲಿದ್ದಾನೆ. ಬೆಂಗಳೂರಿನಿಂದ ಮೈಸೂರಿಗೆ ಬರುತ್ತಿದ್ದ ಟಿಪ್ಪು ಎಕ್ಸ್‌ಪ್ರೆಸ್ ರೈಲಿನಲ್ಲಿ ಮಲ್ಲೇಶ್, ನಕಲಿ ರೈಲ್ವೆ ಟ್ಯಾಗ್, ಅರ್ಧ ಸಮವಸ್ತ್ರ ಧರಿಸಿ ವಾಕಿ–ಟಾಕಿಯೊಂದಿಗೆ ಟಿಕೆಟ್ ಪರಿಶೀಲನೆ ನಡೆಸುವ ನೆಪದಲ್ಲಿ ಟಿಕೆಟ್ ಇಲ್ಲದ ಪ್ರಯಾಣಿಕರ ಹೆದರಿಸಿ ಹಣ ವಸೂಲಿ ಮಾಡುತ್ತಿದ್ದ.

ಮಾಸ್ಕ್ ಧರಿಸಿದ್ದ ಈತನನ್ನು ರೈಲ್ವೆ ಇಲಾಖೆ ಅಧಿಕಾರಿಗಳು ಅನುಮಾನ ಬಂದು ವಿಚಾರಿಸಿದ್ದಾರೆ. ಮೊದಲು, ತಾನು ಎಸಿ ಮೆಕ್ಯಾನಿಕ್ ಎಂದು ಹೇಳಿದ್ದಾನೆ. ಆದರೆ ಎಸಿ ಮೆಕ್ಯಾನಿಕ್ ಎಸಿ ಕೋಚ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂಬುದನ್ನು ಖಚಿತಪಡಿಸಿಕೊಂಡು, ಅಷ್ಟರಲ್ಲೇ ಪರಾರಿಯಾಗಲೆತ್ನಿಸಿದ ಈ ನಕಲಿ ಅಧಿಕಾರಿಯನ್ನು ವಶಕ್ಕೆ ಪಡೆದಿದ್ದಾರೆ. ರೈಲು ಮೈಸೂರು ನಿಲ್ದಾಣ ತಲುಪಿದಾಗ ಆತನನ್ನು ವಿಚಾರಣೆ ನಡೆಸಿದ ಅಸಿಸ್ಟೆಂಟ್ ರೈಲ್ವೆ ಕಮರ್ಷಿಯಲ್ ಮ್ಯಾನೇಜರ್ ರಂಗನಾಥರೆಡ್ಡಿ, ಟಿಟಿಇ ಸೋಗಿನಲ್ಲಿ ಪ್ರಯಾಣಿಕರಿಂದ ಹಣ ವಸೂಲಿ ಮಾಡಿರುವುದು ದೃಢಪಟ್ಟಿತು.



ಮಲ್ಲೇಶ್ ರೈಲು ಬೋಗಿಗಳಲ್ಲಿ ತಾನು ಟಿಟಿಇ ಎಂದು ಹೇಳಿ, ಟಿಕೆಟ್ ತಪಾಸಣೆ ಮಾಡಿ ಟಿಕೆಟ್ ರಹಿತ ಪ್ರಯಾಣಿಕರಿಂದ ಹಣ ವಸೂಲಿ ದಂಧೆಯಲ್ಲಿ ತೊಡಗಿದ್ದು ವಿಚಾರಣೆ ವೇಳೆ ತಿಳಿದುಬಂದಿದೆ. ಸುಲಭ ಸಂಪಾದನೆ ಕಂಡುಕೊಂಡು, ▶ 8ನೇ ಪುಟಕ್ಕೆ

## ನಕಲಿ ಟಿಟಿಇ ಕರಾಮತ್ತು! ಅಸಲಿ ಟಿಟಿಇ ಅಮಾನತು!!

ಮೈಸೂರು, ಜು.7(ಆರ್‌ಕೆ)– ರೈಲು ಬೋಗಿಗಳಲ್ಲಿ ಪ್ರಯಾಣಿಕರ ಟಿಕೆಟ್ ಪರಿಶೀಲನೆ ನೆಪದಲ್ಲಿ, ಟಿಕೆಟ್ ರಹಿತ ಪ್ರಯಾಣಿಕರಿಂದ ಹಣ ವಸೂಲಿ ಮಾಡಿದ್ದ ನಕಲಿ ಟಿಟಿಇ ಮಲ್ಲೇಶ್‌ನಿಂದಾಗಿ ರೈಲ್ವೆ ಇಲಾಖೆ ಅಸಲಿ ಟಿಟಿಇಯನ್ನು ಕಳೆದ ತಿಂಗಳು ಅಮಾನತು ಮಾಡಿದೆ. ಜೂನ್ 23ರಂದು ತಾನು ರೈಲ್ವೆ ಇಲಾಖೆ ಟಿಟಿಇ ಎಂದು ಹೇಳಿ, ಅಜ್ಮೀರ್ ರೈಲು ಗಾಡಿಯಲ್ಲಿ ಎಲ್ಲಾ ಸೀಟ್ ಬುಕ್ ಆಗಿದ್ದರೂ ಒಂದೇ ಕುಟುಂಬದ 7 ಮಂದಿ ಪ್ರಯಾಣಿಕರಿಗೆ ಮೈಸೂರಿಂದಲೂ ಆಸನ ವ್ಯವಸ್ಥೆ ಮಾಡಿಕೊಡುವುದಾಗಿ ಹೇಳಿ 7000 ರೂ. ಹಣ ವಸೂಲಿ ಮಾಡಿದ್ದ. ಆದರೆ ಮೈಸೂರಿಂದ ಆಸನ ವ್ಯವಸ್ಥೆ ಇಲ್ಲದೆ, ಪೇಚಾಡಿದ ಆ ಕುಟುಂಬ ಸದಸ್ಯರು ಹುಬ್ಬಳ್ಳಿವರೆಗೂ ಪ್ರಯಾಸದಿಂದಲೇ ಪ್ರಯಾಣಿಸಿದ್ದಾರೆ. ಅಲ್ಲಿವರೆಗೂ ಅವರ ಜೊತೆಯಲ್ಲೇ ಇದ್ದ ಇದೇ ನಕಲಿ ಟಿಟಿಇ ಮಲ್ಲೇಶ್, ರೈಲು ಹುಬ್ಬಳ್ಳಿ ತಲುಪುತ್ತಿದ್ದಂತೆಯೇ ನಾಪತ್ತೆಯಾಗಿದ್ದ.

ಈ ಸಂಬಂಧ ಅವರು ರೈಲ್ವೆ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ, ಟಿಟಿಇ ಎಂದು ಹೇಳಿ ನಮ್ಮಿಂದ ಹಣ ಪಡೆದು, ರಶೀದಿಯನ್ನೂ ಕೊಡಲಿಲ್ಲ. ಕಡೆಗೆ ಸೀಟ್ ವ್ಯವಸ್ಥೆಯನ್ನೂ ಮಾಡಿಲ್ಲ ಎಂದು ದೂರು ನೀಡಿದ್ದರು. ಆದರೆ ಈ ಕಾರಣಕ್ಕಾಗಿ ಅಂದು ಆ ರೈಲಿನಲ್ಲಿ ಟಿಟಿಇಯಾಗಿ ಕರ್ತವ್ಯ ನಿರ್ವಹಿಸಿದ್ದ ಅಧಿಕಾರಿಯನ್ನು ಅಮಾನತುಪಡಿಸಿ, ವಿಚಾರಣೆಗೆ ಆದೇಶಿಸಲಾಗಿತ್ತು. ವಿಚಾರಣೆ ಪ್ರಗತಿಯಲ್ಲಿರುವಾಗಲೇ ಈಗ ಸಿಕ್ಕಿ ಬಿದ್ದಿರುವ ಮಲ್ಲೇಶ್‌ನನ್ನು ತನಿಖೆಗೊಳಪಡಿಸಿದಾಗ ಕಳೆದ ತಿಂಗಳು ಅಜ್ಮೀರ್ ರೈಲು ಗಾಡಿಯಲ್ಲಿ ಪ್ರಯಾಣಿಕರಿಂದ 7000 ರೂ. ವಸೂಲಿ ಮಾಡಿರುವುದು ಬೆಳಕಿಗೆ ಬಂದಿದೆ. ಮಲ್ಲೇಶ್‌ನನ್ನು ತೀವ್ರ ವಿಚಾರಣೆಗೊಳಪಡಿಸಿರುವ ರೈಲ್ವೆ ಪೊಲೀಸರು, ಆತ ಎಷ್ಟು ಕಾಲದಿಂದ ಈ ಕೃತ್ಯ ಮಾಡುತ್ತಿದ್ದ ಎಂಬ ಮಾಹಿತಿ ಕಲೆ ಹಾಕುತ್ತಿದ್ದಾರೆ. ಅಜ್ಮೀರ್ ರೈಲಿನಲ್ಲಿ 7000 ರೂ. ಹಣ ವಸೂಲಿ ಮಾಡಿರುವುದು ಮಲ್ಲೇಶ್ ಎಂಬುದು ದೃಢಪಡುತ್ತಿದ್ದಂತೆಯೇ, ಅದರ ಸಮಗ್ರ ವರದಿ ಬಂದ ತಕ್ಷಣ ಸಸ್ಪೆಂಡ್ ಆಗಿದ್ದ ಅಸಲಿ ಟಿಟಿಇ ಅಮಾನತು ರದ್ದು ಮಾಡಲಾಗುವುದು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

# ಜು.11ರಿಂದ ಮೂರು ದಿನ ನೂಪುರೋತ್ಸವ–2022

ಮೈಸೂರು,ಜು.7– ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದಲ್ಲಿ ಜು.11, 12, 13ರಂದು ಮೈಸೂರಿನ ಆದಿಚುಂಚನಗಿರಿ ರಸ್ತೆಯ ವೀಣೆ ಶೇಷಣ್ಣ ಭವನದಲ್ಲಿ 'ನೂಪುರೋತ್ಸವ–2022' ನೃತ್ಯೋತ್ಸವ ಏರ್ಪಡಿಸಲಾಗಿದೆ.



ಜು.11ರಂದು ಸೋಮವಾರ ಸಂಜೆ 6ರಿಂದ 6.45ರವರೆಗೆ ಮೈಸೂರಿನ ಭರತಾಂಜಲಿ ನೃತ್ಯಶಾಲೆ ನಿರ್ದೇಶಕಿ ಡಾ.ಶೀಲಾ ಶ್ರೀಧರ್ ಅವರ ಶಿಷ್ಯೆಯರಿಂದ ಭರತನಾಟ್ಯ.



ಸಂಜೆ 6.45ರಿಂದ 7.30 ರವರೆಗೆ ಧಾರವಾಡದ ಸಾಕೇತ್ ಸ್ಕೂಲ್ ಆಫ್ ಡ್ಯಾನ್ಸ್ ನಿರ್ದೇಶಕ ವಿದುಷಿ ಸೀಮಾ ಕುಲಕರ್ಣಿ ತಂಡದವರಿಂದ ಭರತನಾಟ್ಯ.



ಸಂಜೆ 7.30ರಿಂದ 8.15ರವರೆಗೆ ಮೈಸೂರಿನ ನೂಪುರ ಕಲಾವಿದರು, ಸಾಂಸ್ಕೃತಿಕ ಟ್ರಸ್ಟ್ ನಿರ್ದೇಶಕ ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್ ಅವರ ಪುತ್ರ ಹಾಗೂ ಶಿಷ್ಯ ವಿದ್ವಾನ್ ಕೆ.ಆರ್. ವಿಶ್ವದೀಪ್ ಅವರಿಂದ ಭರತನಾಟ್ಯ.



ಜು.12ರಂದು ಮಂಗಳವಾರ ಸಂಜೆ 6 ಗಂಟೆಗೆ 6.45 ರವರೆಗೆ ಮೈಸೂರಿನ ನಂದನಾ ಪ್ರದರ್ಶಕ ಕಲೆಗಳ ಕೇಂದ್ರದ ನಿರ್ದೇಶಕಿ ವಿದುಷಿ ಎಂ.ಎಲ್.ವಾರಿಜಾ ನಲಿಗೆ ಅವರ ಶಿಷ್ಯೆಯರಿಂದ ಭರತನಾಟ್ಯ



ಸಂಜೆ 6.45ರಿಂದ 7.30ರವರೆಗೆ ಮೈಸೂರಿನ ಸೌಮ್ಯ ನೃತ್ಯಶಾಲೆಯ ನಿರ್ದೇಶಕಿ ವಿದುಷಿ ಎಸ್.ಸೌಮ್ಯರಾಣಿ ಅವರ ಶಿಷ್ಯರಿಂದ ಭರತನಾಟ್ಯ



ಸಂಜೆ 7.30ರಿಂದ 8.15ರವರೆಗೆ ಮೈಸೂರಿನ ನೃತ್ಯಗಿರಿ ಪ್ರದರ್ಶಕ ಕಲೆಗಳ ಕೇಂದ್ರದ ನಿರ್ದೇಶಕಿ ಡಾ.ಕೃಪಾ ಫಡ್ಕೆ ಅವರ ಶಿಷ್ಯರಿಂದ ಭರತನಾಟ್ಯ.



ಜು.13ರಂದು ಬುಧವಾರ ಸಂಜೆ 6ರಿಂದ 6.45ರವರೆಗೆ ಮೈಸೂರಿನ ಶ್ರೀ ನಟರಾಜ ಪರ್‌ಫಾರ್ಮಿಂಗ್ ಆರ್ಟ್ಸ್ ಸೆಂಟರ್‌ನ ನಿರ್ದೇಶಕಿ ನಾಗಶ್ರೀ ಫಣೀಂದ್ರಕುಮಾರ್ ಅವರ ಶಿಷ್ಯೆಯರಿಂದ ಭರತನಾಟ್ಯ .



ಸಂಜೆ 6.45ರಿಂದ 7.30ರವರೆಗೆ ಮೈಸೂರಿನ ನೃತ್ಯ ವಿದ್ಯಾಪೀಠದ ನಿರ್ದೇಶಕಿ ವಿದುಷಿ ಅನಿತಾ ಸಿ.ಎನ್. ಅವರ ಶಿಷ್ಯೆಯರಿಂದ ಭರತನಾಟ್ಯ.



ಸಂಜೆ 7.30ರಿಂದ 8.15 ರವರೆಗೆ ಭೂಷಣ್ ಪ್ರದರ್ಶಕ ಕಲೆಗಳು ಮತ್ತು ನೃತ್ಯ ಪ್ರಸ್ತುತಿ ಕೇಂದ್ರದ ನಿರ್ದೇಶಕ ಅಂತಾರಾಷ್ಟ್ರೀಯ ಖ್ಯಾತಿಯ ಭರತನಾಟ್ಯ ಕಲಾವಿದ ಆಚಾರ್ಯ ನಾಟ್ಯಶ್ರೀ ಬದರಿ ದಿವ್ಯಭೂಷಣ್ ಅವರ ತಂಡದವರಿಂದ ನೃತ್ಯ ಪ್ರದರ್ಶನ


## ಮಹಾತ್ಮರ ಚರಿತಾಮೃತ ಕೃತಿ ನಾಳೆ ಬಿಡುಗಡೆ



ಮೈಸೂರು,ಜು.7(ಎಂಟಿವೈ)– ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ರಾಜೇಂದ್ರ ಭವನದಲ್ಲಿ ಜು.9ರಂದು ಬೆಳಗ್ಗೆ 11ಕ್ಕೆ 'ಮಹಾತ್ಮರ ಚರಿತಾಮೃತ' ಕೃತಿಯ ಲೋಕಾರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಥಣಿ ಮೋಟಗಿ ಮಠಾಧ್ಯಕ್ಷ ಹಾಗೂ ಕೃತಿ ಕರ್ತೃ ಶ್ರೀ ಪ್ರಭುಚನ್ನಸ್ವಾಮಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವರ್ಗಭೇದ, ಜಾತಿಭೇದ ಹಾಗೂ ಲಿಂಗಭೇದಗಳನ್ನೆಲ್ಲಾ ಬದಿಗೊತ್ತಿ ಮಾನವ ಕಲ್ಯಾಣ ಮತ್ತು ಭಾವೈಕ್ಯತೆ ಬಲಪಡಿಸುವ ಉದ್ದೇಶದಿಂದ ಈ ಕೃತಿ ರಚಿಸಲಾಗಿದೆ. ದೇಶದ ವಿವಿಧ ಧರ್ಮಗಳ 216 ಮಹಾನ್ ವ್ಯಕ್ತಿಗಳ ಸಮಾಜ ಸೇವೆಯನ್ನು ತಿಳಿಸುವ ಉದ್ದೇಶದಿಂದ ಈ ಕೃತಿ ರಚಿಸಲಾಗಿದೆ. ಇಡೀ ಪ್ರಪಂಚಕ್ಕೆ ಮಾನವೀಯ ಮೌಲ್ಯ ಸಾರಿದ ದೇಶದ ಎಲ್ಲಾ ಧರ್ಮದ ಮಹಾತ್ಮರ ಸಂದೇಶವನ್ನು ಈ ಕೃತಿಯಲ್ಲಿ ತಿಳಿಸಲಾಗಿದೆ ಎಂದರು.

ಈ ಕೃತಿಯು ಒಟ್ಟು 1100 ಪುಟ ಹೊಂದಿದೆ. ಅವುಗಳಲ್ಲಿ 980 ಏಕವರ್ಣ ಹಾಗೂ 70 ಬಹುವರ್ಣ ಪುಟಗಳಿವೆ. ಜು.9ರಂದು ಬೆಳಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದಾರೆ. ಸಾಹಿತಿ ಕುಂ.ವೀರಭದ್ರಪ್ಪ ಕೃತಿ ಲೋಕಾರ್ಪಣೆ ಮಾಡಲಿದ್ದು, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಎಂ.ಎನ್.ನಂದೀಶ್ ಹಂಚೆ ಕೃತಿ ಕುರಿತು ಮಾತನಾಡಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು.ಸದಾನಂದಯ್ಯ, ಕೆಪಿಟಿಸಿಎಲ್ ಮುಖ್ಯ ಇಂಜಿನಿಯರ್ ಶಂಕರ ದೇವನೂರು, ಶಿವಶಂಕರ ಹಾಗೂ ಮಹಂತಸ್ವಾಮಿ ಇದ್ದರು.



ಬೆಂಗಳೂರಿನ ವಿಶ್ವಮಾನವ ರಾಷ್ಟ್ರಕವಿ ಕುವೆಂಪು ಕಲಾನಿಕೇತನ ವತಿಯಿಂದ 118ನೇ ಕುವೆಂಪು ಜಯಂತಿ ಹಾಗೂ ದೇಜಗೌ ಜಯಂತಿ ಅಂಗವಾಗಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಒಂಟಿಕೊಪ್ಪಲು ಗುರುರಾಜ್ ಅವರಿಗೆ ಕುವೆಂಪು ವಿಶ್ವಮಾನವ ಪ್ರಶಸ್ತಿ ನೀಡಿ, ಗೌರವಿಸಲಾಯಿತು. ಸಮಾರಂಭದಲ್ಲಿ ನಾಡೋಜ ಡಾ.ಮಹೇಶ್ ಜೋಶಿ, ಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ಕುವೆಂಪು ಪ್ರಕಾಶ್ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

## ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ



ಮೈಸೂರು, ಜು.7(ಎಸ್‌ಪಿಎನ್)– ಪ್ರತಿಭಾವಂತ ವಿದ್ಯಾರ್ಥಿಗಳ ಭವಿಷ್ಯ ಹಾಗೂ ಉನ್ನತ ಶಿಕ್ಷಣ ಪ್ರೋತ್ಸಾಹಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದು, ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಮಾಲತಿ ಸಲಹೆ ನೀಡಿದರು.

ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪಿಯು ಕಾಲೇಜು ಸಭಾಂಗಣದಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ 2021–22ನೇ ಸಾಲಿನ ಪಿಯು ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಎಸ್ಸಿ–ಎಸ್ಟಿ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಿಸಿ ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆ ಮೂಲಕ ಬಡ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಸೇರಿದಂತೆ ಇತರೆ ಸವಲತ್ತುಗಳನ್ನು ಸರ್ಕಾರ ಒದಗಿಸಿದೆ. ಸಾಮಾಜಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಪೂರಕ ವಾತಾವರಣ ನಿರ್ಮಿಸುವುದು ಎಲ್ಲರ ಜವಾಬ್ದಾರಿ ಎಂದರು.

ಪ್ರತಿಭಾವಂತ ವಿದ್ಯಾರ್ಥಿಗಳಾದ ಎಂ.ಎಂ.ರಕ್ಷಿತಾ 592, ಅನುಷಾ 582, ಎನ್.ಅಶ್ವಿನಿ 554, ಹೆಚ್.ಎಸ್.ಪುಟ್ಟರಾಜನಾಯಕ 555, ಎಂ.ಜಯಶ್ರೀ 541, ಆರ್.ಲಾವಣ್ಯ 531, ಎಂ.ಶಿಲ್ಪಾ 531, ಕೆ.ಆರ್.ಮಧುನಾಯಕ 564, ಆರ್.ಅಭಿಷೇಕ್ 546, ಜಿ.ರಚನಾ 546, ಎಂ.ವರಲಕ್ಷ್ಮಿ 541, ಆರ್.ಜ್ಯೋತಿ 588, ಸ್ನೇಹ 587, ಸುಧಾಮಣಿ 571, ಕಾಂಚನ 556, ಎಸ್.ಆದಿತ್ಯ 550, ಹೆಚ್.ಎಂ.ಐಶ್ವರ್ಯ 549, ಹೆಚ್.ಎನ್.ಭಾರತಿದೇವಿ 548, ಎಂ.ಶೋಭಾ 543, ಮಂಜು 540, ಸಿ.ಪಿ.ಜ್ಯೋತಿಕಾ 538, ಎಚ್.ಆರ್.ದೀಕ್ಷಿತ 573, ಕೆ.ವಿ.ಚಂದನ 556, ಆರ್.ಕೋಮಲ 555, ಹೆಚ್.ಬಿ.ತನುಜಾ 555, ಬಿ.ಅನುಷಾ 554, ಎನ್.ಎಸ್.ಚಂದನ 551 ಅವರಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು. ಈ ವೇಳೆ ಡಿಡಿಪಿಯು ಡಿ.ಕೆ.ಶ್ರೀನಿವಾಸ ಮೂರ್ತಿ, ದೇವರಾಜ ಪಿಯು ಕಾಲೇಜು ಪ್ರಾಂಶುಪಾಲ ಕೆ.ಶಿವೇಗೌಡ, ರಮಾನಂದ್, ಸುದೀಪ್, ರಾಹುಲ್ ಇತರರಿದ್ದರು.

# ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಕಟ್ಟಡ ಕಾರ್ಮಿಕರ ಪ್ರತಿಭಟನೆ

ಮೈಸೂರು,ಜು.7(ಪಿಎಂ)–ರಾಜ್ಯ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿನ ಭ್ರಷ್ಟಾಚಾರ ಆರೋಪ ಸಂಬಂಧ ನ್ಯಾಯಾಂಗ ತನಿಖೆ ನಡೆಸಬೇಕು ಎಂಬುದೂ ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರು ಗುರುವಾರ ಪ್ರತಿಭಟನೆ ನಡೆಸಿದರು.



ಮೈಸೂರಿನ ಕುವೆಂಪುನಗರದ ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ ಎದುರು ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರು ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಕುವೆಂಪುನಗರದ ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ ಎದುರು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, 2019 ಮತ್ತು 2020ರಲ್ಲಿ ಕೋವಿಡ್ ಪರಿಹಾರದ ನೆಪದಲ್ಲಿ ನೂರಾರು ಕೋಟಿ ಖರ್ಚು ಮಾಡಿ ಕಳಪೆ ಸಾಮಗ್ರಿಗಳನ್ನು ಖರೀದಿಸಿ ನಿರ್ಮಾಣ ಕಾರ್ಮಿಕರಿಗೆ ಹಂಚಲಾಗಿದೆ ಎಂದು ಆರೋಪಿಸಿದರು.

ಪ್ರಕರಣ ಸಂಬಂಧ ನ್ಯಾಯಾಂಗ ತನಿಖೆಗೆ ಆದೇಶಿಸಿ, ಭ್ರಷ್ಟಾಚಾರದಲ್ಲಿ ಭಾಗಿಯಾದ ಅಧಿಕಾರಿಗಳು ಹಾಗೂ ರಾಜಕಾರಣಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಅಲ್ಲದೆ, ಭ್ರಷ್ಟಾಚಾರದಿಂದ ಉಂಟಾಗಿರುವ ನಷ್ಟವನ್ನು ಅವರಿಂದಲೇ ವಸೂಲಿ ಮಾಡಬೇಕು. ನಿವೃತ್ತಿ ವೇತನ, ಹೆರಿಗೆ ಭತ್ಯೆ, ವಿದ್ಯಾರ್ಥಿ ವೇತನ ಮತ್ತು ಇತರೆ ಸಹಾಯಧನ ಬಿಡುಗಡೆಗೆ ಶೀಘ್ರವೇ ಕ್ರಮ ವಹಿಸಬೇಕು. ಬಾಕಿ ಉಳಿದಿರುವ ಎಲ್ಲಾ ರೀತಿಯ ಸಹಾಯಧನದ ಅರ್ಜಿಗಳನ್ನು ಈ ಕೂಡಲೇ ಇತ್ಯರ್ಥಪಡಿಸಬೇಕು. ಅಲ್ಲದೆ, ವಿವಿಧ ಸಹಾಯಧನಕ್ಕಾಗಿ ಅರ್ಜಿಗಳನ್ನು ಸಲ್ಲಿಸಲು ಆನ್‌ಲೈನ್ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ನೈಜ ಕಟ್ಟಡ ಕಾರ್ಮಿಕರು ಸ್ವಂತ ನಿವೇಶನದಲ್ಲಿ ಮನೆ ನಿರ್ಮಿಸಲು 5 ಲಕ್ಷ ರೂ. ಸಹಾಯಧನ ನೀಡಬೇಕು. ಅನಾರೋಗ್ಯ ಕಾರಣ ಉನ್ನತ ಚಿಕಿತ್ಸೆಗೆ ನಗದು ರಹಿತ ವ್ಯವಸ್ಥೆ ಮಾಡಬೇಕು. ಜೊತೆಗೆ ಇವರು ಕರ್ತವ್ಯಕ್ಕೆ ಮರಳುವವರೆಗೆ ಪ್ರತಿದಿನ ಕನಿಷ್ಠ 500 ರೂ. ವಿಶ್ರಾಂತಿ ವೇತನ ನೀಡಬೇಕು. ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಈ ಕೂಡಲೇ ಭವಿಷ್ಯನಿಧಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಸಮನ್ವಯ ಸಮಿತಿ ಅಧ್ಯಕ್ಷ ಸೋಮರಾಜೇ ಅರಸ್, ಐಎನ್‌ಟಿಯುಸಿ ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್, ಸಿಐಟಿಯು ಮುಖಂಡ ಹೆಚ್.ಎಂ.ಬಸವಯ್ಯ, ಎಐಯುಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ, ಕಟ್ಟಡ ಕಾರ್ಮಿಕರಾದ ಮುಜಾಹಿದ್, ನಿಂಗಣ್ಣ, ಹೆಬ್ಬಾಳು ಶಿವು, ಲೋಕೇಶ್ ಹೊಸೂರು ಸೇರಿದಂತೆ ಹಲವು ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

**ಕಾರ್ಮಿಕರ ಸ್ವಾಭಾವಿಕ ಸಾವಿಗೆ 5 ಲಕ್ಷ ಹಾಗೂ ಅಪಘಾತದಿಂದ ಮೃತಪಟ್ಟವರ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ನೀಡಬೇಕು. ಮಂಡಳಿ ಹಣದಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಶಿಶು ಪಾಲನ ಕೇಂದ್ರ ಆರಂಭಿಸುವ ನಿರ್ಣಯ ಕೈಬಿಡಬೇಕು. 2019–20ರಲ್ಲಿ ಕೋವಿಡ್‌ನಿಂದ ಸಾವನ್ನಪ್ಪಿದ ಕಾರ್ಮಿಕರ ಕುಟುಂಬಕ್ಕೆ ಮಂಡಳಿ ಘೋಷಿಸಿದಂತೆ ತಲಾ 2 ಲಕ್ಷ ರೂ.ಗಳ ಪರಿಹಾರ ಮಂಜೂರು ಮಾಡಬೇಕು. ಮಂಡಳಿ ಸೌಲಭ್ಯಗಳ ಸಂಬಂಧ ಸಲ್ಲಿಕೆಯಾಗುವ ಅರ್ಜಿಗಳಲ್ಲಿ ನ್ಯೂನತೆ ಇದ್ದರೆ ಅರ್ಜಿದಾರರಿಗೆ ಮಾಹಿತಿ ನೀಡಿ ಮರು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಬೇಕು. ಕಾರ್ಮಿಕ ಸಂಹಿತೆ ಹಿಂಪಡೆದು, ಈ ಹಿಂದಿದ್ದ ಕಾರ್ಮಿಕ ಕಾಯ್ದೆಗಳನ್ನೇ ಮುಂದುವರೆಸಬೇಕು. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯ್ದೆ–1996 ಮತ್ತು ಸೆಸ್ ಕಾಯ್ದೆ–1996 ಈ ಎರಡೂ ಕಾನೂನುಗಳನ್ನು ಮರು ಸ್ಥಾಪಿಸಬೇಕು.**

**–ಪ್ರತಿಭಟನಾಕಾರರ ಒತ್ತಾಯ**



ಮೈಸೂರಿನ ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನ ವತಿಯಿಂದ ಅಶೋಕಪುರಂನ ಸರ್ಕಾರಿ ಬಾಲಕರ ಹಾಗೂ ಬಾಲಕಿಯರ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರಥಮ ಪಿಯುಸಿಗೆ ದಾಖಲಾದ ಮಕ್ಕಳಿಗೆ ಉಚಿತವಾಗಿ ವ್ಯಾಸಂಗ ಶುಲ್ಕ ಮತ್ತು ಪ್ರೋತ್ಸಾಹ ಧನವನ್ನು ಪ್ರತಿಷ್ಠಾನದ ಮಹಾಪೋಷಕರು ಹಾಗೂ ಸಂಸ್ಥಾಪಕರಾದ ವಿ.ಶ್ರೀನಿವಾಸ ಪ್ರಸಾದ್ ತಮ್ಮ ನಿವಾಸ ಭೀಮಸದನದಲ್ಲಿ ವಿತರಿಸಿದರು. ಈ ಸಂದರ್ಭದಲ್ಲಿ ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಸಿ.ಬಸವರಾಜು, ಗೌರವಾಧ್ಯಕ್ಷ ಡಾ. ನೀಲಗಿರಿ ತಳವಾರ, ಖಜಾಂಚಿ ಭರತ್ ರಾಮಸ್ವಾಮಿ, ಉಪಾಧ್ಯಕ್ಷ ಪಿ.ನಂದಕುಮಾರ್, ಟ್ರಸ್ಟಿಗಳಾದ ವೆಂಕಟರಾಜು, ಸಿ.ಜಿ.ಶಿವಕುಮಾರ್, ಶಾಲೆಯ ಮುಖ್ಯೋಪಾಧ್ಯಾಯ ಶಶಿಕಾಂತ್‌ರಾಜ್ ಅರಸು, ಮಂಜುನಾಥ್ ಹಾಗೂ ಪೋಷಕರು ಹಾಜರಿದ್ದರು.

## ಜು.10, ಮೈಸೂರಲ್ಲಿ ರಾಷ್ಟ್ರೀಯ ನೃತ್ಯೋತ್ಸವ

ಮೈಸೂರು,ಜು.7(ಎಂಟಿವೈ)– ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಜು.10ರಂದು ಬೆಳಿಗ್ಗೆ 9ರಿಂದ ರಾತ್ರಿ 10ರವರೆಗೆ '47ನೇ ರಾಷ್ಟ್ರೀಯ ನೃತ್ಯೋತ್ಸವ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹಾಸನದ ರಾಷ್ಟ್ರೀಯ ಶಾಸ್ತ್ರೀಯ ನೃತ್ಯ ಅಕಾಡೆಮಿ ಕಾರ್ಯದರ್ಶಿ ಡಾ. ಸ್ವಾತಿ ಪಿ. ಭಾರದ್ವಾಜ್ ತಿಳಿಸಿದ್ದಾರೆ.



**ನಶಿಸುತ್ತಿರುವ ಭಾರತದ ಶಾಸ್ತ್ರೀಯ ನೃತ್ಯ ಸಂರಕ್ಷಣೆ ಮಾಡುವ ಪ್ರಯತ್ನ**

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ ಜಿಲ್ಲೆಯ ಚನ್ನರಾಯಪಟ್ಟಣದಲ್ಲಿನ ರಾಷ್ಟ್ರೀಯ ಶಾಸ್ತ್ರೀಯ ನೃತ್ಯ ಅಕಾಡೆಮಿಯು ಕಳೆದ ಹಲವು ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿ ನಶಿಸಿ ಹೋಗುತ್ತಿರುವ ಭಾರತದ ವಿವಿಧ ರಾಜ್ಯಗಳ ಸುಮಾರು 8ರಿಂದ 10 ಬಗೆಯ ಶಾಸ್ತ್ರೀಯ ನೃತ್ಯವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ನಡೆಸುತ್ತಾ ಬಂದಿದೆ. ಶಾಸ್ತ್ರೀಯ ನೃತ್ಯಗಳ ಸಂರಕ್ಷಣೆಗಾಗಿ ನಿರಂತರ ಪ್ರಯತ್ನ ಮಾಡಲಾಗುತ್ತಿದೆ. ಅದರ ಒಂದು ಭಾಗವಾಗಿ ಮೈಸೂರಲ್ಲಿ ರಾಷ್ಟ್ರೀಯ ನೃತ್ಯೋತ್ಸವದ ಅಂಗವಾಗಿ ನೃತ್ಯ ಕಾರ್ಯಕ್ರಮ ನಡೆಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ 3 ವರ್ಷದವರಿಂದ 60 ವರ್ಷ ವಯಸ್ಸಿನ ಹಿರಿಯರು ಭಾಗವಹಿಸುತ್ತಿದ್ದಾರೆ ಎಂದು ಹೇಳಿದರು.

ಈ ನೃತ್ಯೋತ್ಸವದಲ್ಲಿ ದೇಶದ ವಿವಿಧ ರಾಜ್ಯದಿಂದ ಸುಮಾರು 350ಕ್ಕೂ ಹೆಚ್ಚು ಕಲಾವಿದರು ನೃತ್ಯ ಪ್ರದರ್ಶನ ಮಾಡಲಿದ್ದಾರೆ. ಈ ಕಾರ್ಯಕ್ರಮವನ್ನು ಹಿರಿಯ ನ್ಯಾಯವಾದಿ ಓ.ಶಾಮ್ ಭಟ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಆಧ್ಯಾತ್ಮಿಕ ಚಿಂತಕ ಡಾ.ಸೆಲ್ವ ಪಿಳ್ಳೈ ಐಯ್ಯರ್, ಉದ್ಯಮಿಗಳಾದ ಕೆ.ಆರ್.ಸತ್ಯನಾರಾಯಣ್, ಕೆ.ಆರ್.ಉದಯ ಕುಮಾರ್, ಹಿರಿಯ ನೃತ್ಯ ಕಲಾವಿದೆ ಸುಮಾ ರಾಮಪ್ರಸಾದ್, ಎಂ.ಎಸ್ ಶಶಿಕಲಾ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ರಾಷ್ಟ್ರೀಯ ಸಂಚಾಲಕ ಎಂ.ಕೆ.ಪ್ರಕಾಶ್ ಹಾಗೂ ನರಸಿಂಹಮೂರ್ತಿ ಇದ್ದರು.

## ನಾಳೆ ಸಮಾಜ ಸೇವಕರಿಗೆ ಸನ್ಮಾನ

ಮೈಸೂರು,ಜು.7(ಎಂಟಿವೈ)– ಮೈಸೂರಿನ ಐಶ್ವರ್ಯ ಪೆಟ್ರೋಲ್ ಬಂಕ್ ಸಮೀಪದ ಮುಲಕನಾಡು ಭವನದಲ್ಲಿ ಜು.9ರಂದು ಸಂಜೆ 5ಕ್ಕೆ ಸಮಾಜ ಸೇವಕರಿಗೆ ಅಭಿನಂದಿಸಲಾಗುತ್ತಿದೆ ಎಂದು ಮಾನವ ಹಕ್ಕುಗಳು ಹಾಗೂ ಭ್ರಷ್ಟಚಾರ ವಿರೋಧಿ ವೇದಿಕೆಯ ಅಧ್ಯಕ್ಷ ಶ್ರೀನಾಥ್ ಶೆಟ್ಟಿ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಅಭಿನಂದನಾ ಕಾರ್ಯಕ್ರಮದಲ್ಲಿ ನಾಡಿನ ನೆಲ, ಜಲ ಹಾಗೂ ಭಾಷೆಗಾಗಿ ದುಡಿಯುತ್ತಿರುವ 15 ಮಂದಿಯನ್ನು ಗುರುತಿಸಿ ಗೌರವಿಸಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮರ್ಚೆಂಟ್ಸ್ ಪ್ರೆಸಿಡೆಂಟ್ ಪ್ರವೀಣ್‌ಕುಮಾರ್, ಮೈಸೂರು ಮಹಿಳಾ ವೇದಿಕೆಯ ಉಪಾಧ್ಯಕ್ಷೆ ಅಮೃತ ಇದ್ದರು.

## ಹಾಸನ ಜಿಲ್ಲಾ ಬಳಗದಿಂದ ಪ್ರತಿಭಾ ಪುರಸ್ಕಾರ

ಮೈಸೂರು,ಜು.7–ಇತ್ತೀಚೆಗೆ ನಡೆದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯಂತ ಹೆಚ್ಚು ಅಂಕ ಪಡೆದ ಹಾಸನ ಜಿಲ್ಲಾ ವಿದ್ಯಾರ್ಥಿಗಳನ್ನು ಹಾಸನ ಜಿಲ್ಲಾ ಬಳಗದ ವತಿಯಿಂದ ಸನ್ಮಾನಿಸಲಾಗುವುದು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಪಡೆದವರು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸುವವರು ಹಾಸನ ಜಿಲ್ಲೆಯವರಾಗಿದ್ದು, ಮೈಸೂರು ಜಿಲ್ಲೆಯಲ್ಲಿ ಪರೀಕ್ಷೆಗೆ ಹಾಜರಾಗಿರಬೇಕು. ಹಾಗೂ ಆ ವಿದ್ಯಾರ್ಥಿಯ ಪೋಷಕರು ಹಾಸನ ಜಿಲ್ಲಾ ಬಳಗದ ಖಾಯಂ ಸದಸ್ಯರಾಗಿರಬೇಕು. ಅಂತಹ ವಿದ್ಯಾರ್ಥಿಗಳು ಬಿ.ಜಿ.ರಂಗೇಗೌಡ, ನಂ: 11488, ವಿಜಯನಗರ 4ನೇ ಹಂತ, ಮೈಸೂರು–570032 ಅವರಿಗೆ ಅರ್ಜಿಯೊಂದಿಗೆ ಅಂಕ ಪಡೆದ ದೃಢೀಕೃತ ಪ್ರತಿ ಹಾಗೂ ಖಾಯಂ ಸದಸ್ಯತ್ವ ಹೊಂದಿರುವ ರಶೀದಿ ನಕಲು ಪ್ರತಿಯನ್ನು ಆ.10ರೊಳಗೆ ಕಳುಹಿಸಲು ಕೋರಲಾಗಿದೆ. ಮಾಹಿತಿಗೆ ಮೊ.ನಂ: 9886647852 ಸಂಪರ್ಕಿಸಿ.

## ಜು.11ರಿಂದ ಓಶೋ ಡೈನಾಮಿಕ್ ಮೆಡಿಟೇಷನ್

ಮೈಸೂರು,ಜು.7–ಮೈಸೂರಿನ ಓಶೋ ಗ್ಲಿಮ್ಸೆ ವತಿಯಿಂದ ನಂ.349, 6ನೇ ಮುಖ್ಯ ರಸ್ತೆ, 16ನೇ ಕ್ರಾಸ್, ಗೋಕುಲಂ 2ನೇ ಹಂತ ಇಲ್ಲಿ ಜು.11ರಿಂದ 16ರವರೆಗೆ ಓಶೋ ಡೈನಾಮಿಕ್ ಮೆಡಿಟೇಷನ್ ಹಮ್ಮಿಕೊಳ್ಳಲಾಗಿದೆ. ಮೆಡಿಟೇಷನ್ ಬೆಳಗ್ಗೆ 6ರಿಂದ 7ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 8296960058, 9482889462 ಸಂಪರ್ಕಿಸಬಹುದು.

# ಬೇಡ ಜಂಗಮ ಸಮುದಾಯಕ್ಕೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡಲು ಆಗ್ರಹಿಸಿ ಪ್ರತಿಭಟನೆ

ಮೈಸೂರು, ಜು.7(ಪಿಎಂ)–ಬೇಡ ಜಂಗಮ ಸಮುದಾಯದವರಿಗೆ 'ಪರಿಶಿಷ್ಟ ಜಾತಿ ಪ್ರಮಾಣ ಪತ್ರ' ನೀಡಬೇಕು. ಜೊತೆಗೆ ಈಗಾಗಲೇ ಪಡೆದವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಒತ್ತಾಯಿಸಿ ಅಖಿಲ ಭಾರತ ಬೇಡ ಜಂಗಮ ಕ್ಷೇಮಾಭಿವೃದ್ಧಿ ಸಮಾಜ ಸಂಸ್ಥೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಗುರುವಾರ ಜಮಾಯಿಸಿದ ಪ್ರತಿಭಟನಾಕಾರರು, ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆಯುವುದು ಬೇಡ ಜಂಗಮರ ಸಂವಿಧಾನಬದ್ಧ ಹಕ್ಕು. ಆದರೆ ನಮ್ಮ ಸಮುದಾಯಕ್ಕೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡದೇ ಸಂವಿಧಾನ ನೀಡಿರುವ ಹಕ್ಕಿನಿಂದ ನಮ್ಮನ್ನು ವಂಚಿಸಲಾಗುತ್ತಿದೆ. ಜೊತೆಗೆ ಈಗಾಗಲೇ ಜಾತಿ ಪ್ರಮಾಣ ಪತ್ರ ಪಡೆದವರ ವಿರುದ್ಧ ಕ್ರಮಕ್ಕೆ ಮುಂದಾಗಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೇಡ ಜಂಗಮರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡಲು ಒತ್ತಾಯಿಸಿ ಬೆಂಗಳೂರಿನಲ್ಲಿ ಪ್ರತಿಭಟನಾ ಮೆರವಣಿಗೆ ಮಾಡಲು ಮುಂದಾದ ಅಖಿಲ ಕರ್ನಾಟಕ ಬೇಡ ಜಂಗಮ ಒಕ್ಕೂಟದ ರಾಜ್ಯಾಧ್ಯಕ್ಷ ಬಿ.ಡಿ.ಹಿರೇಮಠ ಹಾಗೂ ಸಮುದಾಯದ ಸ್ವಾಮೀಜಿಗಳನ್ನು ಪೊಲೀಸರು ತಡೆದು ವಶಕ್ಕೆ ಪಡೆದಿದ್ದು ಸರಿಯಲ್ಲ ಎಂದು ಕಿಡಿಕಾರಿದರು. ವೀರಶೈವ ಧರ್ಮದಲ್ಲಿದ್ದರೂ ಬೇಡ ಜಂಗಮರು ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆಯಲು ಅರ್ಹರೆಂದು ಹೈಕೋರ್ಟ್ ಸಹ ತೀರ್ಪು ನೀಡಿದೆ. 2010ರ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರ ಸುತ್ತೋಲೆ ಉಲ್ಲೇಖದಲ್ಲೂ ವೀರಶೈವ ಜಂಗಮರೇ ಬೇಡ ಜಂಗಮ ಜಾತಿಯವರು ಎಂದು ಹೇಳಲಾಗಿದೆ. ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಬೇಡ ಜಂಗಮ ಸಮುದಾಯವೂ ಸೇರಿದ್ದು, ನಮಗೆ ಯಾವುದೇ ಅಡೆತಡೆ ಇಲ್ಲದೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡಲು ಸರ್ಕಾರ ಶೀಘ್ರ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಸಂಘಟನೆಯ ಪ್ರಧಾನ ಕಾರ್ಯದರ್ಶಿ ಹೆಚ್.ಕೆ.ನಾಗರಾಜು, ಉಪಾಧ್ಯಕ್ಷರಾದ ಕೆಂಡಗಣ್ಣಸ್ವಾಮಿ, ಕೆ.ವಿ.ಮಹದೇವಸ್ವಾಮಿ, ಕೋಶಾಧ್ಯಕ್ಷ ಎಸ್.ಎನ್.ಪ್ರಕಾಶ್, ಮುಖಂಡರಾದ ಚನ್ನಬಸವಸ್ವಾಮಿ, ವೀರಭದ್ರಸ್ವಾಮಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


## ವಿವಿ ಸಂಜೆ ಕಾಲೇಜಲ್ಲಿ ಪ್ರವೇಶಾತಿ ಪ್ರಾರಂಭ

ಮೈಸೂರು,ಜು.7–ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜಿನಲ್ಲಿ 2022–23ನೇ ಸಾಲಿಗೆ ಬಿ.ಎ., ಬಿ.ಕಾಂ ಮತ್ತು ಬಿಬಿಎ ಪದವಿ ತರಗತಿಗಳಿಗೆ ಜೂ.18ರಿಂದ ಪ್ರವೇಶಾತಿ ಪ್ರಾರಂಭವಾಗಿದ್ದು, ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)–2020ರನ್ವಯ ಆನ್‌ಲೈನ್ ಮೂಲಕ ಯುಯುಸಿ ಎಂಎಸ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–2419244 ಸಂಪರ್ಕಿಸಬಹುದು.

## ನಾಳೆ ಮೂಳೆ ಸಾಂದ್ರತೆ ತಪಾಸಣೆ ಶಿಬಿರ

ಮೈಸೂರು,ಜು.7–ಮೈಸೂರಿನ ದಟ್ಟಗಳ್ಳಿಯಲ್ಲಿರುವ ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರದ ವತಿಯಿಂದ ಜು. 9ರಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಮೂಳೆ ಸಾಂದ್ರತೆ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8277888524 ಸಂಪರ್ಕಿಸಬಹುದು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**08.07.2022 ಶುಕ್ರವಾರ, ಮಳೆ ನಕ್ಷತ್ರ : ಪುನರ್ವಸು 06.07.2022 ರಿಂದ 19.07.2022**
**ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ**
**ತಿಥಿ: ನವಮಿ, ನಕ್ಷತ್ರ : ಚಿತ್ತ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ**

■ **ಜೆಎಸ್‌ಎಸ್ ಅರ್ಬನ್ ಹಾತ್:** ಗುಜರಾತ್ ಕರಕುಶಲ ಮೇಳ–2022, ಪ್ರದರ್ಶನ, ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೊಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ರವರೆಗೆ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ, ರಾತ್ರಿ ಔಪಾಸನೆ ಉಯ್ಯಾಲೋತ್ಸವ, ಶುಕ್ರ ಕಾಲ ಹೊರೆಯಲ್ಲಿ ಪಾಕಿನಿ ಉತ್ಸವ, ಸ್ಥಳ: ಅರಮನೆ ಆವರಣದಲ್ಲಿರುವ ಕೋಟೆ ತ್ರಿಣೇಶ್ವರ ದೇವಾಲಯ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾಂಸರಾದ ಪಂಡಿತ್ ಖೇಡಾ ವೇದವ್ಯಾಸ ಚಾರ್ಯರಿಂದ ಶ್ರೀ ವಾದಿರಾಜ ಗುರುಗಳ ವಿರಚಿತ 'ಶ್ರೀ ರುಕ್ಮಿಣೀಶ ವಿಜಯ' ಕುರಿತು ವಿಶೇಷ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮೀಪುರಂ, ಸಂಜೆ 5 ರಿಂದ.

■ **ಶ್ರೀ ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ ಸೇವಾ ಸಮಿತಿ :** ಬೆಣ್ಣೆ ಅಲಂಕಾರ, ಸ್ಥಳ: ದೇವಸ್ಥಾನ, ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ– ಪ್ರೊ.ಎನ್.ವೆಂಕೋಬರಾವ್, 6.40 ಭಾವಗೀತೆ, 6.50 ವನಮಹೋತ್ಸವ, ಪ್ರಾಯೋಜಕರು–ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಆರ್.ರಂಗಸ್ವಾಮಿ ಮತ್ತು ಸಂಗಡಿಗರಿಂದ ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಸುಧಾ ಮಧುಸೂದನ್, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ–ಶಾಂತಲಾ ವಟ್ಟಂ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ.ರವೀಂದ್ರಕುಮಾರ್, 4.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ, ನಿರೂಪಣಾ ಸಾಹಿತ್ಯ–ಪ್ರೊ.ಆರ್. ವಿಶ್ವೇಶ್ವರನ್ ಪರಿಕಲ್ಪನೆ ಗೀತಾ ರಮಾನಂದ್, 4.30 ವೃತ್ತಿ ಮಾರ್ಗದರ್ಶನ– ಮಾಲಿಕ್ಯುಲರ್ ಬಯಲಜಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ದೇವಕಿ ನೀರ್ಕಜೆ ಎಸ್. ಅವರೊಂದಿಗೆ ಮಾತುಕತೆ, 6.50ಕೃಷಿರಂಗ–ಕಿಸಾನ್‌ವಾಣಿ, ಲಾಭದಾಯಕ ತೋಟಗಾರಿಕೆ ಕೃಷಿ ಕ್ರಮಗಳು ಕುರಿತು ಎಂ.ಪಿ ನರಸಿಂಹೇಗೌಡ ಅವರೊಡನೆ ಸಂದರ್ಶನ, 7.45 ಈಸಿ ಇಂಗ್ಲೀಷ್– ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣೀ, ರಚನೆ ಮತ್ತು ಪ್ರಸ್ತುತಿ– ಸಿ.ಕೆ. ವಿಜಯನಾರಸಿಂಹ, ನಿರ್ಮಾಣ– ಎಸ್.ಲಕ್ಷ್ಮೀನಾರಾಯಣ, 9.00 ಕನ್ನಡ ಭಾರತಿ, 10.30 ಸವಿನೆನಪು

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ಶೃಂಗೇರಿ :** ಆಷಾಢ ಶುಕ್ರವಾರಗಳ ವಿಶೇಷ ಮಹೋತ್ಸವ, ಬೆಳಗ್ಗೆ 8ಕ್ಕೆ ಮಹಾಸಂಕಲ್ಪ, ಅಭಿಷೇಕ, 8.30ಕ್ಕೆ ಸರಸ್ವತಿ ಹೋಮ, 11.30 ರಿಂದ ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಶ್ರೀ ವೀಣಾಶಾರದಾ ಅಲಂಕಾರ, ಕಲಾಂಬಿಕಾ ಸಹೋದರಿಯರು ಮತ್ತು ವೃಂದದವರಿಂದ ಹಾಡುಗಾರಿಕೆ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಗಾನಭಾರತೀ :** ವಿದ್ವಾನ್ ಚಕ್ರಕೋಡಿ ನಾರಾಯಣಶಾಸ್ತ್ರಿ ಸಂಸ್ಮರಣಾ ಸಂಗೀತ ಕಛೇರಿ, ವಿದುಷಿ ದಿವ್ಯ ಗಿರಿಧರ್ ಅವರಿಂದ ಹಾಡುಗಾರಿಕೆ, ವಿದುಷಿ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ಕೃಷ್ಣಮೂರ್ತಿ ಎಚ್.ಎಸ್.–ಮೃದಂಗ, ವಿದ್ವಾನ್ ರಮೇಶ್ ವಿ.ಎಸ್.–ಮೋರ್ಚಿಂಗ್, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

### ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ

# ಸರ್ಕಾರದ ವಿವಿಧ ಯೋಜನೆಗಳ ಸಾಲದ ಅರ್ಜಿಗಳನ್ನು ವಿನಾಕಾರಣ ತಿರಸ್ಕರಿಸಬೇಡಿ

### ಬ್ಯಾಂಕ್ ಅಧಿಕಾರಿಗಳಿಗೆ ಡಿಸಿ ಡಾ.ಬಗಾದಿ ಗೌತಮ್ ಸೂಚನೆ

ಮೈಸೂರು, ಜು.7(ಆರ್‌ಕೆಬಿ)– ಸರ್ಕಾರದ ವಿವಿಧ ಯೋಜನೆಗಳಡಿ ಸಾಲ ಮಂಜೂರಾತಿಗೆ ಬರುವ ಅರ್ಜಿಗಳನ್ನು ಬ್ಯಾಂಕ್ ಅಧಿಕಾರಿಗಳು ಸರಿಯಾದ ಕಾರಣವಿಲ್ಲದೆ ತಿರಸ್ಕರಿಸಬಾರದು ಎಂದು ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಗುರುವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಿದರು.

> ಸಮಸ್ಯೆಗಳನ್ನು ಕೂಡಲೇ ಪರಿಹರಿಸಿಕೊಳ್ಳಬೇಕು. ಜನರಿಗೆ ಅನುಕೂಲ ಮಾಡಿಕೊಡಬೇಕು. ವಿವಿಧ ಇಲಾಖೆಗಳ ಫಲಾನುಭವಿಗಳ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಆಗುವಂತೆ ನೋಡಿಕೊಳ್ಳಬೇಕು. ಸಮಸ್ಯೆಗಳು ಗಮನಕ್ಕೆ ಬರುತ್ತಿದ್ದಂತೆಯೇ ಪರಿಹರಿಸಲು ಮಾರ್ಗದರ್ಶಿ ಬ್ಯಾಂಕ್‌ನವರು ಕ್ರಮ ಕೈಗೊಳ್ಳಬೇಕು.
> – ಡಾ.ಬಗಾದಿ ಗೌತಮ್, ಡಿಸಿ

ಸಾಲ ಮಂಜೂರು ಮಾಡುವಾಗ ಅನಗತ್ಯವಾಗಿ ವಿಳಂಬ ಮಾಡುವುದು, ಅಲೆದಾಡಿಸುವುದು ಸರಿಯಲ್ಲ. ಸ್ವಸಹಾಯ ಗುಂಪುಗಳಿಗೆ ಬ್ಯಾಂಕ್ ಖಾತೆ ತೆರೆಯುವ ಸಂದರ್ಭದಲ್ಲೂ ಕೆಲವು ಬ್ಯಾಂಕ್‌ಗಳು ತೊಂದರೆ ಕೊಡುತ್ತಿರುವುದು ಸರಿಯಲ್ಲ. ಅಧಿಕಾರಿಗಳು ಸಮಸ್ಯೆಗಳಿದ್ದಲ್ಲಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯವರೆಗೂ ಕಾಯಬಾರದು. ಸರ್ಕಾರ ಹಾಗೂ ಬ್ಯಾಂಕ್‌ಗಳ ನಡುವಿನ ಸಮನ್ವಯದ ಜವಾಬ್ದಾರಿ ಹೊತ್ತಿರುವ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವ್ಯವಸ್ಥಾಪಕರ ಗಮನಕ್ಕೆ ತರಬೇಕು ಎಂದು ತಿಳಿಸಿದರು. ವಿನಾಕಾರಣ ಅರ್ಜಿಗಳನ್ನು ತಿರಸ್ಕರಿಸಿದರೆ ಸರ್ಕಾರಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಹೇಗೆ? ಅರ್ಜಿ ತಿರಸ್ಕರಿಸುವುದು ಗಂಭೀರ ಲೋಪವಾಗುತ್ತದೆ ಎಂದು ತರಾಟೆಗೆ ತೆಗೆದುಕೊಂಡರು. ಸಕಾರಣವಿಲ್ಲದೆ ಅರ್ಜಿ ತಿರಸ್ಕರಿಸಿದರೆ ಅಂತಹ ಬ್ಯಾಂಕ್ ಶಾಖೆ ವಿರುದ್ಧ ಕ್ರಮಕ್ಕೆ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆಯಲಾಗುವುದು, ಇದಕ್ಕೆ ಯಾವ ಹಿಂಜರಿಕೆಯೂ ಇಲ್ಲ. ನೀವೇನು ಉಪಕಾರ ಮಾಡುತ್ತಿಲ್ಲ. ನಿಯಮದ ಪ್ರಕಾರ ಸಾಲ ಕೊಡುತ್ತೀರಿ ಅಷ್ಟೇ ಎಂದರು.

ಸಭೆಯಲ್ಲಿ ಜಿಪಂ ಉಪಕಾರ್ಯದರ್ಶಿ ಪ್ರೇಮಕುಮಾರ್, ಎಸ್‌ಬಿಐ ಬೆಂಗಳೂರು ಉಪಪ್ರಧಾನ ವ್ಯವಸ್ಥಾಪಕ ರಾಜೇಶ್‌ಕುಮಾರ್ ಚೌಧರಿ, ಆರ್‌ಬಿಐ ಬೆಂಗಳೂರು ಸಹಾಯಕ ಮುಖ್ಯ ವ್ಯವಸ್ಥಾಪಕ ಪ್ರೊಶೆಂಜಿತ್ ಬಿಸ್ವಾಸ್, ನಬಾರ್ಡ್ ಮೈಸೂರು ಸಹಾಯಕ ಮುಖ್ಯ ವ್ಯವಸ್ಥಾಪಕಿ ಹಿತಾ ಜಿ.ಸುವರ್ಣ, ಲೀಡ್ ಬ್ಯಾಂಕ್ ಮೈಸೂರು ಮುಖ್ಯ ವ್ಯವಸ್ಥಾಪಕ ಪಿ.ದಿನೇಶ್, ಹಿರಿಯ ಸಹಾಯಕ ಕುಮಾರಸ್ವಾಮಿ ಉಪಸ್ಥಿತರಿದ್ದರು.

# ಬಡ ಶಾಲಾ ಮಕ್ಕಳು ಶೂ–ಸಾಕ್ಸ್ ಹಾಕಲೇಬಾರದಾ...

### ಪ್ರಾಥಮಿಕ, ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್‌ಗೆ ವಿಪಕ್ಷ ನಾಯಕ ಸಿದ್ದರಾಮಯ್ಯ ತರಾಟೆ

ಬೆಂಗಳೂರು, ಜು.7(ಕೆಎಂಶಿ)– ಶಾಲಾ ಮಕ್ಕಳಿಗೆ ಶೂ ಮತ್ತು ಸಾಕ್ಸ್ ನೀಡುವ ವಿಚಾರದಲ್ಲಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ನೀಡಿರುವ ಹೇಳಿಕೆ ಅಮಾನವೀಯ. ಅವರ ಮಾತುಗಳು ಬೇಜವಾಬ್ದಾರಿತನದಿಂದ ಕೂಡಿದೆ ಎಂದು ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಚುನಾವಣೆಗಳು ಹತ್ತಿರ ಬಂದಂತೆಲ್ಲ ಬಿಜೆಪಿಗೆ ಸುಳ್ಳು ಹೇಳುವ ದೆವ್ವ ಮೈಮೇಲೆ ಹತ್ತಿ ಕುಣಿಯಲಾರಂಭಿಸುತ್ತದೆ. ತಾವು ಮಾತನಾಡಬೇಕಾದರೆ ಕನಿಷ್ಠ ಮಟ್ಟದ ಪ್ರಜ್ಞೆ, ಲಜ್ಜೆ, ನೈತಿಕತೆ ಇವ್ಯಾವುಗಳೂ ಇಲ್ಲದಂತೆ ವರ್ತಿಸಲು ಪ್ರಾರಂಭಿಸುತ್ತಾರೆ. ಅದರ ಭಾಗವಾಗಿ ಕಲ್ಬುರ್ಗಿಯಲ್ಲಿ ನಿನ್ನೆ ಮಾತನಾಡಿದ್ದಾರೆ ಎಂದರು. ಸಚಿವರು 'ಮಕ್ಕಳು ಶಾಲೆಗೆ ಬರುವುದು ಕಲಿಯುವುದಕ್ಕೇ ಹೊರತು, ಶೂ–ಸಾಕ್ಸ್ ಹಾಕಿಕೊಳ್ಳುವುದಕ್ಕೆ ಅಲ್ಲ' ಎಂದಿದ್ದಾರೆ. ನಾನು ನಾಗೇಶ್ ಅವರನ್ನು ಕೇಳಬಯಸುತ್ತೇನೆ, ನಿಮ್ಮ ಮಕ್ಕಳಾಗಲೀ ಅಥವಾ ನೀವಾಗಲೀ ಎಂದಾದರೂ ಕಾಲಿಗೆ ಚಪ್ಪಲಿ ಇಲ್ಲದೆ ಓಡಾಡಿದ ಅನುಭವ ಇದೆಯೆ, ಅದರ ಅವಮಾನ, ಕೀಳರಿಮೆಗಳನ್ನು ಅನುಭವಿಸಿದ ಉದಾಹರಣೆಗಳಿವೆಯೇ ಎಂದಿದ್ದಾರೆ.

ಕಾನ್ವೆಂಟ್ ಸ್ಕೂಲಿಗೆ ಹೋಗುವ ಮಕ್ಕಳು ಶುಭ್ರ ಬಟ್ಟೆ, ಟೈ, ಕಾಲಿಗೆ ಶೂ, ಸಾಕ್ಸ್ ಹಾಕಿಕೊಂಡು ನಡೆದಾಡುವುದನ್ನು ನೋಡಿದಾಗ ಅದೇ ಬೀದಿಯಲ್ಲಿ, ಅದೇ ಹಳ್ಳಿಯಲ್ಲಿ ಆಟವಾಡುವ ಬಡವರ ಮಕ್ಕಳು ಬರಿಗಾಲಲ್ಲಿ, ಹರಿದ ಬಟ್ಟೆಯಲ್ಲಿದ್ದರೆ ನಿಮಗೆ ಏನೂ ಅನ್ನಿಸುವುದಿಲ್ಲವೆ ಅಥವಾ ಆ ಕಷ್ಟದಲ್ಲಿರುವ ಮಕ್ಕಳಿಗೆ ಏನನ್ನಿಸುತ್ತದೆ ಎಂಬ ಅರಿವಾದರೂ ಇದೆಯೆ ನಿಮಗೆ? ಅವರು ಹಾಗೆಯೇ ಬರಿಗಾಲಿನಲ್ಲಿ ಇರಬೇಕೆಂದು ರಾಷ್ಟ್ರಭಕ್ತಿಯ ಬಗ್ಗೆ ಮಾತನಾಡುವ ಸಂಘ ನಿಮಗೆ ಹೇಳಿಕೊಟ್ಟಿದೆಯೆ? ಹೇಳಿಕೊಟ್ಟಿರಲು ಸಾಧ್ಯವಿದೆ. ಶೂದ್ರರ ಬಳಿ ವಿದ್ಯೆ, ಹಣ, ಅಧಿಕಾರಗಳು ಇರಬಾರದೆಂಬ ಕಾರಣಕ್ಕೆ ತಾನೆ ಈ ಸಂಘ ಹುಟ್ಟಿ ಕೊಂಡು ನಮ್ಮ ಮಕ್ಕಳ ಮೆದುಳಿಗೆ ವಿಷ ಹಾಕುತ್ತಿರುವುದು.

ದಲಿತರು, ಅಲೆಮಾರಿಗಳು, ಹಿಂದುಳಿದವರ ಹಾಗೂ ಎಲ್ಲ ಜಾತಿಯ ಬಡವರ ಮಕ್ಕಳಿಗೆ ಸಣ್ಣ ಸ್ವಾಭಿಮಾನ ಇರಲಿ, ಕಲಿಯುವ ಶಾಲೆಗೆ ಹೋಗುವ ಹುಮ್ಮಸ್ಸು ಬರಲಿ ಎಂಬ ಕಾರಣಕ್ಕೆ ನಾವು ಮಕ್ಕಳ ಸ್ನೇಹಿಯಾದ ಯೋಜನೆಗಳನ್ನು ಜಾರಿಗೆ ತಂದಿದ್ದೆವು. ನಿಮ್ಮ ಸರ್ಕಾರಕ್ಕೆ ಮಕ್ಕಳಿಗೆ ಕೊಡಬೇಕಾದ್ದನ್ನು ಕೊಡುವ ಯೋಗ್ಯತೆ ಇಲ್ಲದಿದ್ದರೆ ಅವರನ್ನು ಹಂಗಿಸುವ ಸಾಹಸ ಮಾಡಬೇಡಿ ಎಂದಿದ್ದಾರೆ.



# ಸರಳವಾಗಿ ಮನೆಯಲ್ಲೇ ಎರಡನೇ ಮದುವೆಯಾದ ಪಂಜಾಬ್ ಸಿಎಂ


**ಚಂಡೀಗಢ:** ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಮತ್ತು ಡಾ. ಗುರುಪ್ರೀತ್ ಕೌರ್ ಗುರುವಾರ ಸಪ್ತಪದಿ ತುಳಿದರು. ಚಂಡೀಗಢ್‌ನಲ್ಲಿರುವ ಭಗವಂತ್ ಮಾನ್ ಅವರ ನಿವಾಸದಲ್ಲಿ ಮದುವೆ ಸಮಾರಂಭ ಸರಳವಾಗಿ ನೆರವೇರಿತು.



ಎಎಪಿ ನಾಯಕ ಹಾಗೂ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಸೇರಿದಂತೆ ಪಕ್ಷದ ಪ್ರಮುಖ ನಾಯಕರು ವಿವಾಹ ಸಮಾರಂಭದಲ್ಲಿ ಪಾಲ್ಗೊಂಡಿದ್ದಾರೆ. ಇದೊಂದು ಖಾಸಗಿ ಸಮಾರಂಭವಾಗಿದ್ದು, ಕೆಲವೇ ಗಣ್ಯರು ಹಾಗೂ ಎರಡು ಕುಟುಂಬಗಳ ಆಪ್ತರ ಸಮ್ಮುಖದಲ್ಲಿ ಭಗವಂತ್ ಮಾನ್ ಮತ್ತು ಗುರುಪ್ರೀತ್ ಕೌರ್ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದಾರೆ.

ವಧು ಗುರುಪ್ರೀತ್ ಕೌರ್ ಕಡುಗೆಂಪು ಬಣ್ಣದ ಲೆಹೆಂಗಾದಲ್ಲಿ ಕಂಗೊಳಿಸಿದರೆ, ಸಿಎಂ ಭಗವಂತ್ ಮಾನ್ ಅವರು ಹೊಂಬಣ್ಣದ ಶೆರ್ವಾನಿಯಲ್ಲಿ ಮಿಂಚಿದರು. ಮಾನ್ ಅವರು ಖಡ್ಗ ಹಿಡಿದು ಕ್ಯಾಮರಾಗೆ ಪೋಸ್ ನೀಡಿರುವ ಫೋಟೋವೊಂದು ಜಾಲತಾಣದಲ್ಲಿ ಸಿಕ್ಕಾಪಟ್ಟೆ ಸದ್ದು ಮಾಡುತ್ತಿದೆ. 48 ವರ್ಷದ ಮುಖ್ಯಮಂತ್ರಿ ಭಗವಂತ್ ಮಾನ್ ಈ ಹಿಂದೆ ಸ್ಟ್ಯಾಂಡ್ ಅಪ್ ಕಾಮಿಡಿಯನ್ ಆಗಿದ್ದರು. 6 ವರ್ಷಗಳ ಹಿಂದೆ ತಮ್ಮ ಮೊದಲ ಪತ್ನಿಯಿಂದ ಡಿವೋರ್ಸ್ ಪಡೆದುಕೊಂಡಿದ್ದಾರೆ. ಇದು ಅವರ ಎರಡನೇ ಮದುವೆಯಾಗಿದ್ದು, 32 ವರ್ಷದ ಗುರುಪ್ರೀತ್ ಕೌರ್ ಮತ್ತು 48 ವರ್ಷದ ಭಗವಂತ್ ಮಾನ್ ನಡುವೆ 16 ವರ್ಷಗಳ ವಯಸ್ಸಿನ ಅಂತರವಿದೆ.

# ಉಚಿತ ಹೊಲಿಗೆ ಯಂತ್ರ ವಿತರಣೆ



ಮೈಸೂರು, ಜು.7(ಎಂಕೆ)– ಮೈಸೂರು ನಗರ ಪಾಲಿಕೆಯ ನಗರ ಬಡತನ ನಿರ್ಮೂಲನಾ ಕೋಶದ 24.10ರ ಅನುದಾನದಡಿ ಪರಿಶಿಷ್ಟ ಜಾತಿ ಫಲಾನುಭವಿ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಣೆ ಮಾಡಲಾಯಿತು.

ವಾರ್ಡ್ ನಂ.28 ಗಾಂಧಿನಗರದಲ್ಲಿ 30 ಮಂದಿ ಮಹಿಳೆಯರಿಗೆ ಪಾಲಿಕೆ ಸದಸ್ಯೆ ಅಶ್ವಿನಿ ಶರತ್ ಹಾಗೂ ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಹೊಲಿಗೆ ಯಂತ್ರ ವಿತರಿಸಿದರು. ಬಳಿಕ ಪಾಲಿಕೆ ಸದಸ್ಯೆ ಅಶ್ವಿನಿ ಶರತ್ ಮಾತನಾಡಿ, ಮಹಿಳೆಯರ ಸಬಲೀಕರಣಕ್ಕಾಗಿ ಪಾಲಿಕೆಯಲ್ಲಿ ಹಲವು ಸಾಲ–ಸೌಲಭ್ಯ ಹಾಗೂ ತರಬೇತಿ ಕಾರ್ಯಕ್ರಮಗಳಿದ್ದು, ಅವುಗಳ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು. ವಲಯ ಸಹಾಯಕ ಆಯುಕ್ತ ನಂಜುಂಡಯ್ಯ, ಮುಖಂಡರಾದ ಗಿರಿಧರ್, ಶರತ್, ಕರ್ಣ, ರಾಕೇಶ್, ಸುರೇಂದ್ರ, ಚೇತನ್, ಮೋಹನ ಮತ್ತಿತರರಿದ್ದರು.

### ಮೈಸೂರು ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಸಭೆ

### ಆರೋಗ್ಯ ಕಾರ್ಡ್ ವಿತರಣೆಯಲ್ಲಿ ವಿಳಂಬ: ಸಂಸದ, ಜಿಲ್ಲಾಧಿಕಾರಿ ಅಸಮಾಧಾನ

# ಪ್ರತೀ ಮಂಗಳವಾರ 'ಆರೋಗ್ಯ ಕಾರ್ಡ್ ವಿತರಣಾ ಮೇಳ': ಡಿಹೆಚ್‌ಓಗೆ ಡಿಸಿ ಸೂಚನೆ





ಮೈಸೂರಿನಲ್ಲಿ ಸಂಸದ ಪ್ರತಾಪ್‌ಸಿಂಹ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಸಭೆ ನಡೆಯಿತು. ಚಿತ್ರದಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ನಗರಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ಜಿಪಂ ಉಪಕಾರ್ಯದರ್ಶಿ ಡಾ.ಪ್ರೇಮ್‌ಕುಮಾರ್ ಅವರನ್ನು ಕಾಣಬಹುದು. ಮತ್ತೊಂದು ಚಿತ್ರದಲ್ಲಿ ಸಭೆಯಲ್ಲಿ ಭಾಗವಹಿಸಿರುವ ವಿವಿಧ ಇಲಾಖಾ ಅಧಿಕಾರಿಗಳು.

ಮೈಸೂರು, ಜು.7(ಆರ್‌ಕೆಬಿ)– ಮೈಸೂರು ಜಿಲ್ಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಹತ್ವಾಕಾಂಕ್ಷೆಯ ಯೋಜನೆಯಾದ ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ (ಎಬಿ–ಎಆರ್‌ಕೆ) ಆರೋಗ್ಯ ಕಾರ್ಡ್‌ಗಳ ವಿತರಣೆ ವಿಳಂಬವಾಗಿರುವ ಬಗ್ಗೆ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಮತ್ತು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಗುರುವಾರ ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಮೇಲ್ವಿಚಾರಣೆ ಸಮಿತಿ (ದಿಶಾ) ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ದಿಶಾ ಸಮಿತಿ ಅಧ್ಯಕ್ಷರೂ ಆಗಿರುವ ಸಂಸದ ಪ್ರತಾಪಸಿಂಹ ಅಧ್ಯಕ್ಷತೆ ವಹಿಸಿದ್ದ ಸಭೆ ಆರಂಭವಾಗುತ್ತಿದ್ದಂತೆ ಜಿಲ್ಲೆಯಲ್ಲಿ ಎಬಿ–ಎಆರ್‌ಕೆ ಆರೋಗ್ಯ ಕಾರ್ಡ್‌ಗಳ ವಿತರಣೆಯಲ್ಲಿ ಆಗಿರುವ ಪ್ರಗತಿಯ ಅಂಕಿ ಅಂಶಗಳನ್ನು ನೀಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಹೆಚ್. ಪ್ರಸಾದ್ ಅವರನ್ನು ಕೇಳಿ ಮಾಹಿತಿ ಪಡೆದರು. ಬಳಿಕ ಸಂಸದ ಪ್ರತಾಪ್‌ಸಿಂಹ, ಕಾರ್ಡ್ ವಿತರಣಾ ಕಾರ್ಯ ನಿರ್ವಹಿಸಲು ಅಗತ್ಯ ಮೂಲಸೌಕರ್ಯ ಮತ್ತು ಮಾನವಶಕ್ತಿ ಹೊಂದಿದ್ದರೂ ನಿಗದಿತ ಗುರಿ 26 ಲಕ್ಷದಲ್ಲಿ ಕೇವಲ 10 ಲಕ್ಷ ಕಾರ್ಡ್‌ಗಳನ್ನು ಮಾತ್ರ ವಿತರಿಸಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಉತ್ತರಿಸಿದ ಡಿಹೆಚ್‌ಓ ಡಾ.ಕೆಹೆಚ್.ಪ್ರಸಾದ್, ಜಿಲ್ಲೆಯಲ್ಲಿ ಇದುವರೆಗೆ 10 ಲಕ್ಷ ಕಾರ್ಡ್‌ಗಳನ್ನು ವಿತರಿಸಿದ್ದು, ಕೋವಿಡ್ ಲಸಿಕೆ ಅಭಿಯಾನ ಮತ್ತು ಇನ್ನಿತರೆ ಕಾರಣಗಳಿಂದ ವಿಳಂಬವಾಗಿದ್ದು, ಇನ್ನೂ 16 ಲಕ್ಷ ಕಾರ್ಡ್‌ಗಳು ನೀಡುವುದು ಬಾಕಿ ಇದೆ ಎಂದರು. ಡಿಹೆಚ್‌ಓ ಉತ್ತರದಿಂದ ಸಮಾಧಾನಗೊಂಡ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಪ್ರತೀ ಮಂಗಳವಾರ ಜಿಲ್ಲೆಯಾದ್ಯಂತ 'ಎಬಿ–ಎಆರ್‌ಕೆ ಆರೋಗ್ಯ ಕಾರ್ಡ್‌ಗಳ ವಿತರಣಾ ಮೇಳ ನಡೆಸಿ, ಇನ್ನು ಮೂರು ತಿಂಗಳಲ್ಲಿ ನಿಗದಿತ ಗುರಿ ಸಾಧಿಸುವಂತೆ ಸೂಚಿಸಿದರು. ಇದರ ಸಂಪೂರ್ಣ ಯಶಸ್ಸಿಗೆ ಈ ವಿತರಣಾ ಮೇಳಕ್ಕೆ ವ್ಯಾಪಕ ಪ್ರಚಾರ ನೀಡುವಂತೆ ನಿರ್ದೇಶನ ನೀಡಿದರು.

> “ನೀವು ತುಂಬಾ ವರ್ಷ ಆಯಿತು. ಮೈಸೂರಲ್ಲೇ ಇದ್ದೀರಿ. ಇಲ್ಲೇ ಆ ಕಡೆ, ಈ ಕಡೆ ಜಂಪ್ ಹೊಡೆಯುತ್ತಿರುತ್ತೀರಿ... ಇದ್ದಾಗ ಚೆನ್ನಾಗಿ ಕೆಲಸ ಮಾಡಿ, ಮೈಸೂರಲ್ಲಿ ಆರಾಮವಾಗಿ ಇರಬೇಕು ಅಂತೀರಿ. ಬೆಂಗಳೂರಲ್ಲಿ ಹೋಗಿ ಕುಡಿದುಕೊಂಡು ಇರುವುದು ಬೇಡ ಎನ್ನುತ್ತೀರಿ. ಕೆಲಸ ಕ್ವಿಕ್ ಆಗಿ ಮಾಡಬೇಕು.
> – ಪ್ರತಾಪ್‌ಸಿಂಹ, ಸಂಸದ

ಕೆಆರ್‌ಎಸ್ ರಸ್ತೆಯಲ್ಲಿರುವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸ್ಥಿತಿ ಮತ್ತು ಕೆ.ಆರ್.ಆಸ್ಪತ್ರೆಯ ನವೀಕರಣ ಕಾಮಗಾರಿಯ ಪ್ರಗತಿಯನ್ನು ಉಲ್ಲೇಖಿಸಿದ ಸಂಸದ ಪ್ರತಾಪ್‌ಸಿಂಹ, ಮಾಹಿತಿ ಕೇಳಿದರು. ಕೆ.ಆರ್. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಬಿ.ಎಲ್. ನಂಜುಂಡಸ್ವಾಮಿ ಅವರು ಅಗತ್ಯವಿರುವ ಸಿಬ್ಬಂದಿ ಮತ್ತು ಎಲ್ಲಾ ಉಪಕರಣಗಳ ವಿವರವಾದ ಪಟ್ಟಿಯನ್ನು ತಯಾರಿಸಿ ಸಂಸದರಿಗೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದರು. ಅವರು ಸರ್ಕಾರದ ಮಟ್ಟದಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಅದನ್ನು ಕಾರ್ಯರೂಪಕ್ಕೆ ತರುತ್ತಾರೆ ಎಂದು ಡಿಹೆಚ್‌ಓಗೆ ತಾಕೀತು ಮಾಡಿದರು.

**ರಿಂಗ್ ರಸ್ತೆಯಲ್ಲಿ ಬೀದಿದೀಪ:** ಮೈಸೂರಿನ ರಿಂಗ್ ರಸ್ತೆಯಲ್ಲಿನ ಬೀದಿದೀಪಗಳ ಬೆಳಕಿನ ಕೊರತೆ ಸಮಸ್ಯೆಯನ್ನು ಪ್ರಸ್ತಾಪಿಸಿದ ಸಂಸದ ಸಿಂಹ, ಇನ್ನು ಮೂರು ತಿಂಗಳೊಳಗೆ ದಸರಾ ವೇಳೆಗೆ ರಿಂಗ್ ರಸ್ತೆಯ ಎಲ್ಲಾ ಬೀದಿದೀಪಗಳು ಬೆಳಗುವಂತೆ ನೋಡಿಕೊಳ್ಳಬೇಕು ಎಂದು ನಗರಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದೇ ವೇಳೆ ಸಂಸದರು, ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನಿಡುವ ವಿಚಾರ ಸದ್ಯದಲ್ಲೇ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪವಾಗುವ ಸಾಧ್ಯತೆ ಇದೆ ಎಂದು ಹೇಳಿದರು.

**ಸಿಗ್ನಲ್‌ಗಳ ನಡುವೆ ಸಮಯಾವಧಿ ನಿಗದಿಪಡಿಸಿ:** ಹುಣಸೂರು ರಸ್ತೆಯಲ್ಲಿ ಸಂಚಾರ ದಟ್ಟಣೆಗೆ ಸಂಬಂಧಿಸಿದಂತೆ, ವಿಶೇಷವಾಗಿ ಹಿನಕಲ್ ಜಂಕ್ಷನ್ ಮತ್ತು ಫೀಲ್ಡ್ ಮಾರ್ಷಲ್ ಕೆ.ಎಂ. ಕಾರಿಯಪ್ಪ ವೃತ್ತ (ಮೆಟ್ರೊಪೋಲ್ ಸರ್ಕಲ್) ವಾಹನಗಳ ದಟ್ಟಣೆ ದಿನೇದಿನೆ ಹೆಚ್ಚುತ್ತಿದೆ. ಬಿಡುವಿಲ್ಲದ ಈ ರಸ್ತೆಯಲ್ಲಿ ವಾಹನಗಳ ದಟ್ಟಣೆ ತಗ್ಗಿಸಲು ಸ್ಥಳೀಯ ಅಧಿಕಾರಿಗಳು ಏನು ಕ್ರಮ ಕೈಗೊಂಡಿದ್ದೀರಿ ಎಂದು ಸಂಸದರು ಪ್ರಶ್ನಿಸಿದರು. ಟ್ರಾಫಿಕ್ ಸಿಗ್ನಲ್‌ಗಳಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುವುದನ್ನು ತಡೆಯಲು ರಸ್ತೆಯಲ್ಲಿರುವ ಟ್ರಾಫಿಕ್ ಸಿಗ್ನಲ್‌ಗಳ ನಡುವೆ ಸಮಯಾವಧಿ ನಿಗದಿಪಡಿಸಲು ಪೊಲೀಸರೊಂದಿಗೆ ಸಮನ್ವಯ ಸಾಧಿಸುವಂತೆ ನಗರಪಾಲಿಕೆ ಅಧಿಕಾರಿಗೆ ಸಂಸದರು ಸೂಚಿಸಿದರು.

**ಶೂನ್ಯ ವೆಚ್ಚದ ಮಾಹಿತಿ ನೀಡಿದ ಅಧಿಕಾರಿ ಬಗ್ಗೆ ಅಸಮಾಧಾನ:** 2021–22ನೇ ಸಾಲಿನಲ್ಲಿ ಗ್ರಾಮ ಸಡಕ್ ಯೋಜನೆಯಡಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಯಾವುದೇ ವೆಚ್ಚವನ್ನು ದಾಖಲಿಸದೆ ಮಾಹಿತಿ ನೀಡಿದ ಅಧಿಕಾರಿಯ ಬಗ್ಗೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅಸಮಾಧಾನ ವ್ಯಕ್ತಪಡಿಸಿದರು. ಈ ತಿಂಗಳು ಕಾಮಗಾರಿ ಪೂರ್ಣಗೊಳಿಸುವುದಾಗಿ ಜಿಪಂ ಕಾರ್ಯನಿರ್ವಾಹಕ ಇಂಜಿನಿಯರ್ ಉತ್ತರಿಸಿದರು.

ಇದರಿಂದ ಕೆರಳಿದ ಜಿಲ್ಲಾಧಿಕಾರಿ, ನೀವೇ ಒದಗಿಸಿರುವ ಮಾಹಿತಿ ಪ್ರಕಾರ 2021–22ನೇ ಸಾಲಿನಲ್ಲಿ ವೆಚ್ಚ ಶೂನ್ಯ ತೋರಿಸಿದ್ದೀರಿ. 12 ತಿಂಗಳಲ್ಲಿ ಮಾಡದ ಕೆಲಸವನ್ನು ಈ ಒಂದು ತಿಂಗಳಲ್ಲಿ ಮಾಡಲಾಗುತ್ತದೆಯೇ? ಕಾಮಗಾರಿ ಕೈಗೊಳ್ಳಲು ನಿಮಗಿರುವ ಸಮಸ್ಯೆಯಾದರು ಏನು? ಸರ್ಕಾರ ಕೋಟ್ಯಾಂತರ ರೂ. ಅನುದಾನ ನೀಡಿದ್ದರೂ ಯೋಜನೆಯಡಿ 30 ಕೋಟಿ ರೂ. ವೆಚ್ಚದಲ್ಲಿ ಶೂನ್ಯ ಲೆಕ್ಕ ತೋರಿಸಿದ್ದೀರಿ. ಅಧಿಕಾರಿಗಳು ಏನು ಮಾಡುತ್ತಿದ್ದೀರಿ?. ಒಂದು ದಿನ ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ವಾಹನದಲ್ಲಿ ಕುಳಿತು ಒಂದು ಸುತ್ತು ಹಾಕಿ ನೋಡಬಹುದಿತ್ತಲ್ಲವೇ? ಎಂದು ತರಾಟೆಗೆ ತೆಗೆದುಕೊಂಡರು.

**ಹೆಚ್ಚುತ್ತಿರುವ ಆನೆ ಸಂತತಿ:** ನಾಗರಹೊಳೆ ಅರಣ್ಯದಲ್ಲಿ ಹುಲಿಗಳು ಮತ್ತು ಆನೆಗಳ ಸಂಖ್ಯೆ ನೀಡುವಂತೆ ಸಂಸದರು ಹುಣಸೂರು ಅರಣ್ಯಾಧಿಕಾರಿಯಿಂದ ಮಾಹಿತಿ ಪಡೆದರು. ಕ್ಯಾಮರಾ ಮೂಲಕ ಪತ್ತೆ ಹಚ್ಚಿರುವ ಪ್ರಕಾರ ನಾಗರಹೊಳೆಯಲ್ಲಿ 135 ಹುಲಿಗಳಿವೆ. 800ರಿಂದ 1000 ಆನೆಗಳಿರುವ ಮಾಹಿತಿ ಇದೆ. ಅರಣ್ಯ ರಕ್ಷಣೆ ಹೆಚ್ಚಿಸಿರುವ ಹಿನ್ನೆಲೆಯಲ್ಲಿ ಆನೆಗಳ ಸಂತತಿ ಹೆಚ್ಚುತ್ತಿರುವ ಬಗ್ಗೆಯೂ ಅವರು ಮಾಹಿತಿ ನೀಡಿದರು.

ಸಭೆಯಲ್ಲಿ ಮೈಸೂರು ನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಉಪಕಾರ್ಯದರ್ಶಿ ಡಾ.ಎಸ್.ಪ್ರೇಮ್‌ಕುಮಾರ್ ಇನ್ನಿತರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

### ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ

ಮೈಸೂರು ಜಿಲ್ಲೆಯಲ್ಲಿ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯಡಿ ಒಟ್ಟು ಎಷ್ಟು ಕುಟುಂಬಗಳಿಗೆ ಮನೆ ಇಲ್ಲ ಎಂಬ ಮಾಹಿತಿ ನೀಡುವಂತೆ ಸಂಸದ ಪ್ರತಾಪ್‌ಸಿಂಹ ಕೇಳಿದರು. ಇದಕ್ಕೆ ಉತ್ತರಿಸಿದ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ ಅಧಿಕಾರಿ ಬಿ.ಎಸ್.ಪ್ರಭಾ 1878 ಮನೆಗಳ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆ ಪೈಕಿ 1665 ಮನೆಗಳು ಮಂಜೂರಾಗಿವೆ. ಕೇಂದ್ರ ಸರ್ಕಾರದ ಬುಡಕಟ್ಟು ಸಚಿವಾಲಯದಿಂದ 1.75 ಹಾಗೂ ರಾಜ್ಯ ಸರ್ಕಾರದಿಂದ ರಾಜೀವ್‌ಗಾಂಧಿ ವಸತಿ ನಿಗಮದಿಂದ 1.75 ಕೋಟಿ ಬಿಡುಗಡೆ ಆಗಿದೆ ಎಂದು ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಂಸದರು, ಎಷ್ಟು ಜನರಿಗೆ ಮನೆ ಬೇಕು? ಎಷ್ಟು ಕಟ್ಟಿದ್ದೀರಿ? ಕಟ್ಟುತ್ತಿರುವುದು ಎಷ್ಟು? ಎಷ್ಟು ಮನೆ ಕಟ್ಟಲು ಯೋಚನೆ ಮಾಡಿದ್ದೀರಿ? ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ ಅಧಿಕಾರಿ ಬಿ.ಎಸ್.ಪ್ರಭಾ, 155 ಮನೆಗಳು ಮಂಜೂರಾಗಿದ್ದು, ರಾಜೀವ್‌ಗಾಂಧಿ ವಸತಿ ನಿಗಮದಿಂದ ನಿವೇಶನಗಳಿಗೆ ನಾವೇ ಅಪ್‌ಲೋಡ್ ಮಾಡಿದ್ದೇವೆ. ಉಳಿದ 454 ಮನೆಗಳಿಗೆ ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕಿದೆ. ಇನ್ನು 10 ದಿನದಲ್ಲಿ ಮಾಡಿ ಮುಗಿಸುವುದಾಗಿ ತಿಳಿಸಿದರು.

## ಮೈಸೂರಲ್ಲಿ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಕೇಂದ್ರ ಸ್ಥಾಪನೆ

ಮೈಸೂರು, ಜು.7(ಆರ್‌ಕೆಬಿ)– ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಕೇಂದ್ರ ಸ್ಥಾಪನೆ ಉದ್ದೇಶ ಹೊಂದಿದ್ದು, ಮೈಸೂರನ್ನು ಕೇಂದ್ರ ಸ್ಥಾನವನ್ನಾಗಿ ಇಟ್ಟುಕೊಂಡು ಸುಮಾರು 75 ಎಕರೆ ಜಾಗದಲ್ಲಿ ಹೆಲಿಪ್ಯಾಡ್ ನಿರ್ಮಾಣ ಮಾಡಿ ತಂಡವನ್ನು ಇರಿಸುವ ಚಿಂತನೆ ಇದೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಇಂದಿಲ್ಲಿ ತಿಳಿಸಿದರು. ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇದರ ಸ್ಥಾಪನೆಯಿಂದ ಮೈಸೂರಿನಿಂದ ಇತರ ಭಾಗಗಳಿಗೆ ತಂಡಗಳನ್ನು ನಿಯೋಜಿಸಲು ಅನುಕೂಲವಾಗಲಿದೆ. ಕೆಲವೇ ತಿಂಗಳಲ್ಲಿ ಇದನ್ನು ಒಂದು ಹಂತಕ್ಕೆ ಕೊಂಡೊಯ್ಯಲಾಗುವುದು ಎಂದು ಹೇಳಿದರು.

**ಕೊಡಗಲ್ಲಿ ಸಮರೋಪಾದಿ ಪರಿಹಾರ ಕ್ರಮ:** ಕೊಡಗು ಜಿಲ್ಲೆಯಲ್ಲಿ ಮಳೆಯಿಂದ ಹಾನಿಗೀಡಾಗಿರುವ ಪ್ರದೇಶಗಳಲ್ಲಿ ಸಮರೋಪಾದಿಯಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕಳೆದ 4–5 ವರ್ಷಗಳಿಂದ ಸತತವಾಗಿ ಭೂಕುಸಿತವಾಗುತ್ತಿದೆ. ಮಡಿಕೇರಿಯಿಂದ ಸಂಪಾಜೆಯವರೆಗೆ ತಡೆಗೋಡೆ ನಿರ್ಮಿಸಲಾಗಿದೆ. ಹೊಸದಾಗಿ 22 ತಡೆಗೋಡೆ ಕಟ್ಟಲು ಸೂಚಿಸಲಾಗಿದೆ. ಎಫ್‌ಡಿಆರ್ ಫಂಡನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲು ಸಲಹೆ ನೀಡಲಾಗಿದೆ. ಜನ– ಜಾನುವಾರುಗಳ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರತಾಪ್‌ಸಿಂಹ ತಿಳಿಸಿದರು.

### ಲೀಡ್ ಬ್ಯಾಂಕ್‌ನಿಂದ 2022–23ನೇ ಸಾಲಿನ ಸಾಲ ಯೋಜನೆ, ಸಂಸದ ಪ್ರತಾಪ್‌ಸಿಂಹ ಬಿಡುಗಡೆ

# ಒಟ್ಟು 21,980 ಕೋಟಿ ಸಾಲ ನೀಡುವ ಗುರಿ

### ಕಳೆದ ಸಾಲಿಗಿಂತ ಶೇ.15ರಷ್ಟು ಹೆಚ್ಚು ಸಾಲದ ಗುರಿ

ಮೈಸೂರು, ಜು.7– ಮೈಸೂರು ಜಿಲ್ಲೆಯಲ್ಲಿ ಬ್ಯಾಂಕ್‌ಗಳು 2022–23ನೇ ಸಾಲಿಗೆ ಅದ್ಯತಾ ವಲಯ ಮತ್ತು ಆದ್ಯತೇತರ ವಲಯ ಸೇರಿ 21,980 ಕೋಟಿ ಸಾಲ ನೀಡುವ ಗುರಿ ಹೊಂದಿವೆ.

ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ತಯಾರಿಸಿದ್ದ ವಾರ್ಷಿಕ ಸಾಲ ಯೋಜನೆಯ ವರದಿಯನ್ನು, ಸಂಸದ ಪ್ರತಾಪ ಸಿಂಹ ಬಿಡುಗಡೆಗೊಳಿಸಿದರು. ಸಾಲ ನೀಡುವ ಗುರಿಯಲ್ಲಿ ಕಳೆದ ಸಾಲಿಗೆ ಹೋಲಿಸಿದರೆ ಶೇ.15ರಷ್ಟು ಹೆಚ್ಚು ಸಾಲ ನೀಡುವ ಗುರಿ ಹೊಂದಲಾಗಿದೆ. ಕಳೆದ ವರ್ಷ ಈ ಮೊತ್ತ 19,211 ಇತ್ತು.

ಸರ್ಕಾರಿ ಪ್ರಾಯೋಜಿತ ಯೋಜನೆಗಳಿಗೆ 1,400 ಕೋಟಿ ನೀಡಲಾಗುತ್ತಿದೆ. ಈ ಪ್ರಮಾಣ ಕಳೆದ ಸಾಲಿಗಿಂತ ಶೇ.20ರಷ್ಟು ಹೆಚ್ಚಿದೆ. ಆದ್ಯತಾ ವಲಯಕ್ಕೆ 16,617 ಕೋಟಿ ನಿಗದಿಪಡಿಸಿದ್ದು, ಆದ್ಯತೇತರ ವಲಯಕ್ಕೆ 5,363 ಕೋಟಿ ಗುರಿ ನೀಡಲಾಗಿದೆ. ಕಳೆದ ಸಾಲಿಗೆ ಹೋಲಿಸಿದಲ್ಲಿ ಕ್ರಮವಾಗಿ 727 ಕೋಟಿ ಮತ್ತು 1,400 ಕೋಟಿ ಹೆಚ್ಚಳವಾಗಿದೆ.

**ತಾಲೂಕುವಾರು ಸಾಲ ಹಂಚಿಕೆ:** ಮೈಸೂರು ತಾಲೂಕಿಗೆ ಅತೀ ಹೆಚ್ಚು 10,790 ಕೋಟಿ, ಪಿರಿಯಾಪಟ್ಟಣ– 2,206 ಕೋಟಿ, ಕೆ.ಆರ್. ನಗರ– 1,495 ಕೋಟಿ, ಹುಣಸೂರು– 2,300 ಕೋಟಿ, ಸರಗೂರು– 379 ಕೋಟಿ, ಎಚ್.ಡಿ. ಕೋಟೆ– 820 ಕೋಟಿ, ನಂಜನಗೂಡು– 2,265 ಕೋಟಿ ಮತ್ತು ತಿ. ನರಸೀಪುರ– 1,725 ಕೋಟಿ ಸಾಲ ಕೊಡುವ ಗುರಿ ಹೊಂದಲಾಗಿದೆ.




ಮೈಸೂರಿನಲ್ಲಿ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್‌ನ 2022–23ನೇ ಸಾಲಿನ ಸಾಲ ಯೋಜನೆಯನ್ನು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಬೆಂಗಳೂರು ಆರ್‌ಬಿಐ ಸಹಾಯಕ ಮುಖ್ಯ ವ್ಯವಸ್ಥಾಪಕ ಪ್ರೊಶೆಂಜಿತ್ ಬಿಸ್ವಾಸ್, ಮೈಸೂರು ನಬಾರ್ಡ್ ಸಹಾಯಕ ಮುಖ್ಯ ವ್ಯವಸ್ಥಾಪಕಿ ಹಿತಾ ಜಿ.ಸುವರ್ಣ, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ಪಿ.ದಿನೇಶ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಿಪಂ ಉಪಕಾರ್ಯದರ್ಶಿ ಡಾ.ಪ್ರೇಮ್‌ಕುಮಾರ್, ಲೀಡ್ ಬ್ಯಾಂಕ್ ಹಿರಿಯ ಸಹಾಯಕ ಕುಮಾರಸ್ವಾಮಿ ಅವರನ್ನು ಕಾಣಬಹುದು.

# ಶಾಸಕ ಎಲ್.ನಾಗೇಂದ್ರರಿಂದ 3.11 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ

### ನೂತನ ಬಸ್ ತಂಗುದಾಣ ನಿರ್ಮಾಣ ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ

ಮೈಸೂರು,ಜು.7(ಪಿಎಂ)– ಚಾಮರಾಜ ಕ್ಷೇತ್ರ ವ್ಯಾಪ್ತಿಯ ಮಂಚೇಗೌಡನಕೊಪ್ಪಲಿನಲ್ಲಿ 3.11 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ರಸ್ತೆ, ಚರಂಡಿ ಅಭಿವೃದ್ಧಿ, ಪಾದಚಾರಿ ಮಾರ್ಗ ಹಾಗೂ ನೂತನ ಬಸ್ ತಂಗುದಾಣ ನಿರ್ಮಾಣ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಗುರುವಾರ ಚಾಲನೆ ನೀಡಿದರು.



ಮಂಚೇಗೌಡನಕೊಪ್ಪಲಿನ ಮಾರಿಗುಡಿ ಅರಳಿಕಟ್ಟೆ ಬಳಿಯ ಅಭಿಷೇಕ್ ವೃತ್ತದಿಂದ ಇಲ್ಲಿನ ಮತ್ತೊಂದು ಅರಳಿಕಟ್ಟೆವರೆಗಿನ ರಸ್ತೆಯಲ್ಲಿ ನೂತನವಾಗಿ ಚರಂಡಿ ನಿರ್ಮಾಣ, ಸಂಗಂ ವೃತ್ತದಿಂದ ಅರಳಿಕಟ್ಟೆವರೆಗೆ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ ಹಾಗೂ ಪಕ್ಕದಲ್ಲಿ ಪಾದಚಾರಿ ಮಾರ್ಗ ನಿರ್ಮಾಣ ಕಾಮಗಾರಿಗಳಿಗೆ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು.

ಶಾಸಕರ ವಿವೇಚನಾ ಎಸ್‌ಎಫ್‌ಸಿ ಯೋಜನೆಯ ವಿಶೇಷ ಅನುದಾನದ 3 ಕೋಟಿ ರೂ. ವೆಚ್ಚದಲ್ಲಿ ಮೈಸೂರು ಮಹಾನಗರ ಪಾಲಿಕೆ ಸದರಿ ಕಾಮಗಾರಿ ಕೈಗೆತ್ತಿಕೊಂಡಿದೆ. ಅಲ್ಲದೆ, ಇಲ್ಲಿನ ಅಭಿಷೇಕ್ ವೃತ್ತದ ಬಳಿ 11 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಿರುವ ನೂತನ ಬಸ್ ತಂಗುದಾಣಕ್ಕೂ ಶಾಸಕರು ಚಾಲನೆ ನೀಡಿದರು.

ಇದೇ ವೇಳೆ ಮಾತನಾಡಿದ ಶಾಸಕರು, ಚಾಮರಾಜ ಕ್ಷೇತ್ರದಲ್ಲಿರುವ ಹಳೇ ಗ್ರಾಮಗಳು ಮೈಸೂರು ನಗರದ ಬೆಳವಣಿಗೆಗೆ ಕೊಡುಗೆ ನೀಡಿವೆ. ಮಂಚೇಗೌಡನಕೊಪ್ಪಲು, ಕನ್ನೇಗೌಡನಕೊಪ್ಪಲು, ಒಂಟಿಕೊಪ್ಪಲು, ಕುಂಬಾರಕೊಪ್ಪಲು, ಮೇಟಗಳ್ಳಿ ಮತ್ತು ಪಡುವಾರಹಳ್ಳಿ ಗ್ರಾಮಗಳ ಜನತೆಯ ಸಹಕಾರದಿಂದ ಇಲ್ಲೆಲ್ಲಾ ಹೊಸ ಬಡಾವಣೆಗಳು ತಲೆ ಎತ್ತಿವೆ ಎಂದರು. ಈ ಗ್ರಾಮಗಳ ಜನತೆ ತಮ್ಮ ಭೂಮಿ ನೀಡಿ ನಗರ ಬೆಳೆಯಲು ಸಹಕಾರ ನೀಡಿದ್ದಾರೆ. ಆ ಮೂಲಕ ಕ್ಷೇತ್ರವೂ ವಿಸ್ತಾರವಾಗಿ ಬೆಳೆಯುತ್ತಿದೆ. ಈ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಕಲ್ಪಿಸುತ್ತಿದ್ದು, ಮುಂದೆಯೂ ಇವುಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಿದ್ದೇನೆ. ನಾನು ನಗರದೊಳಗಿನ ಹಳ್ಳಿಯವನಾಗಿ ಬೆಳೆದವನು. ಹಾಗಾಗಿ ಹಳ್ಳಿ ಜನತೆಯ ಪಾಡು ಬಲ್ಲವನಾಗಿದ್ದೇನೆ. ಅವರಿಗೆ ಸ್ಪಂದಿಸಲು ಸದಾ ಸಿದ್ಧನಿದ್ದೇನೆ ಎಂದು ಹೇಳಿದರು.

ಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಉಪ ಆಯುಕ್ತ ಮಹೇಶ್, ಮಾಜಿ ಉಪಮೇಯರ್ ಮಹಾದೇವಪ್ಪ, ಬಿಜೆಪಿ ಚಾಮರಾಜ ಕ್ಷೇತ್ರದ ಉಪಾಧ್ಯಕ್ಷ ಕುಮಾರ್‌ಗೌಡ, ಪ್ರಧಾನ ಕಾರ್ಯದರ್ಶಿ ಪ್ರನೀತ್, ಮಹಿಳಾ ಮೋರ್ಚಾ ಅಧ್ಯಕ್ಷೆ ತನುಜಾ, ಗ್ರಾಮದ ಮುಖಂಡರಾದ ದೊಡ್ಡಣ್ಣ, ಶಿವಣ್ಣ, ಶಿವರಾಮಣ್ಣ, ಸೋಮಣ್ಣ, ರವಿ, ಶ್ರೀಧರ್, ರಮೇಶ್, ಮಹೇಶ್, ಗುತ್ತಿಗೆದಾರ ಪಿ.ಕೆ.ಕೃಷ್ಣರಾಜ್ ಮತ್ತಿತರರು ಹಾಜರಿದ್ದರು.

## ನಕ್ಕರೆ ಅದೇ ಸ್ವರ್ಗ

ಪ್ರಯಾಣಿಕ : ಚಿಲ್ಲರೆಯನ್ನೇ ಕೊಡಲಿಲ್ಲ, 50 ರೂ ಕೊಟ್ಟು ಆಟೋ ಮಾಡ್ಕೊಂಡು ನಿಮ್ಮ ಬಸ್ ಹಿಡಿದಿದ್ದಾಯಿತು.
ಕಂಡಕ್ಟರ್ : ಆಯ್ತು, ಚಿಲ್ಲರೆ ಎಷ್ಟು ಕೊಡಬೇಕು?
ಪ್ರಯಾಣಿಕ : "5 ರೂ. ಕೊಡಬೇಕು!

ಮೈಸೂರು ಮಿತ್ರ
ಶುಕ್ರವಾರ, 8 ಜುಲೈ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

### ಅಮೃತವಾಹಿನಿ

ತನ್ನ ಮೇಲೆ ಹತೋಟಿ ಇಟ್ಟುಕೊಳ್ಳಲಾರದ ಯಾವನೊಬ್ಬ ಸ್ವತಂತ್ರನಲ್ಲ –ಪೈಥಾ ಗೋರಸ್

### ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬರಿ ಕೈಗಿಂತ ಹಿತ್ತಾಳೆ ಕಡಗ ಮೇಲೂ

## ನಿಮ್ಮ ಪತ್ರಗಳು

### ಮೌಲ್ಯ ಕಳೆದುಕೊಳ್ಳುತ್ತಿರುವ ವೈವಾಹಿಕ ಜೀವನ

ಮಾನ್ಯರೆ,

ನಾಲ್ಕನೇ ಗಂಡ, ಐದನೇ ಹೆಂಡತಿ... ಎರಡನೇ ಗಂಡನ ಮೂರನೇ ಮಗು, ನಾಲ್ಕನೇ ಗಂಡನ ಜೊತೆ ಇದೆ. ನಾಲ್ಕನೇ ಗಂಡನ ಮೂರನೇ ಹೆಂಡತಿಯ ಮಗಳು, ಈಗಿನ ಹೆಂಡತಿಯ ಜೊತೆ ಇದೆ... ಗಲಿ ಬಿಲಿ ಆಯ್ತು.....ಇವತ್ತಿನ ಮದುವೆಗಳ ಅರ್ಥ ಹೀಗಾಗಿ ಬಿಟ್ಟಿದೆ. ಎಲ್ಲೆಲ್ಲೂ ಇದೇ ಮಾತು. ಕಾಯ, ವಾಚ, ಮನಸ, ಮಾಂಗಲ್ಯ ತಂತುನಾನೇನ.....ಮಂತ್ರಗಳು ಮೌಲ್ಯ ಕಳೆದುಕೊಂಡಿವೆ. ಇತ್ತೀಚೆಗೆ ಇಬ್ಬರು ಸೆಲೆಬ್ರಿಟಿಗಳ ವಿದ್ಯಮಾನಗಳನ್ನು ನಾವು ನೀವೆಲ್ಲ ಗಮನಿಸುತ್ತಿದ್ದೇವೆ. ಟೀವಿ, ಯೂಟ್ಯೂಬ್, ಫೇಸ್‌ಬುಕ್‌ನಲ್ಲಿ ಬರುತ್ತಿರುವ ವೈವಾಹಿಕ ಅಸಹ್ಯಕರ ಗಲಾಟೆಗಳು, ಚರ್ಚೆಗಳನ್ನು ನೋಡುತ್ತಿದ್ದರೆ ಮದುವೆಗಳ ಅರ್ಥವೇ ನಶಿಸಿ ಹೋಗುತ್ತಿದೆಯಲ್ಲ ಎಂದೆನಿಸುತ್ತಿದೆ. ಎಲ್ಲೋ ಹುಟ್ಟಿ ಬೆಳೆಯುತ್ತಿರುವ ಮೊದಲ ಹೆಂಡತಿಯ ಮಗ, ಇನ್ನೆಲ್ಲೋ ಹುಟ್ಟಿ ಬೆಳೆಯುತ್ತಿರುವ ಮೂರನೇ ಹೆಂಡತಿಯ ಮಗಳನ್ನು ಪ್ರೀತಿಸಿ ಮದುವೆಯಾಗುವುದನ್ನು ನಮ್ಮ ಸಮಾಜ ಬಹುಶಃ ನೋಡುವ ಕಾಲ ಹತ್ತಿರವಿದೆ ಎಂದೆನಿಸುತ್ತಿದೆ. ಇದನ್ನು ಮೂವತ್ತು ವರ್ಷಗಳ ಹಿಂದೆಯೇ ತಮಿಳು ಸಿನಿಮಾದ ಪ್ರಖ್ಯಾತ ನಿರ್ದೇಶಕ ಕೆ.ಬಾಲಚಂದರ್ ಅವರು ತಮ್ಮ ಸಿನಿಮಾದಲ್ಲಿ ವೈವಾಹಿಕ ಜೀವನದ ಸಮಸ್ಯೆಗಳಿಂದ ದೂರಾಗಿದ್ದ ದಂಪತಿಗಳ ಬೆಳೆದ ಮಗ ಒಂದು ಹಂತದಲ್ಲಿ ತನ್ನ ಸ್ವಂತ ತಾಯಿಯನ್ನೂ, ಬೆಳೆದ ಮಗಳು ತನ್ನ ಸ್ವಂತ ತಂದೆಯನ್ನೇ ಪ್ರೀತಿಸುವ, ಕೊನೆಗೆ ದುರಂತದಲ್ಲಿ ಅಂತ್ಯವಾಗುವುದನ್ನು ತುಂಬಾ ಮನೋಜ್ಞವಾಗಿ ತೋರಿಸಿದ್ದಾರೆ. ಇದೇ ರೀತಿ ರಂಗನಾಯಕಿ ಎಂಬ ಕನ್ನಡ ಸಿನಿಮಾದಲ್ಲಿ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರು ಕೂಡ, ವೈವಾಹಿಕ ಜೀವನದಲ್ಲಿ ಹೊಂದಾಣಿಕೆ ಇಲ್ಲದೆ ದೂರಾಗಿದ್ದ ಗಂಡ ಹಾಗೂ ಪುಟ್ಟಮಗ, ಎಷ್ಟೋ ವರ್ಷಗಳ ನಂತರ ಬೆಳೆದು ನಿಂತ ಅದೇ ಸ್ವಂತ ಮಗನೇ, ತನ್ನ ತಾಯಿಯನ್ನೇ ಪ್ರೀತಿಸುವ ಹಾಗೂ ಕೊನೆಗೆ ದುರಂತದಲ್ಲಿ ಅಂತ್ಯವಾಗುವುದನ್ನು ಸೂಕ್ಷ್ಮವಾಗಿ ತೋರಿಸಿದ್ದಾರೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಮದುವೆಗೆ ವಿಶೇಷವಾದ ಸ್ಥಾನಮಾನವಿದೆ. ಆದರೆ "ಕೌಟುಂಬಿಕ ಸಾಮರಸ್ಯಗಳ ಕೊರತೆ, ಅವಿಭಕ್ತ ಕುಟುಂಬಗಳು ಕಡಿಮೆಯಾಗುತ್ತಿರುವುದು. ಅಜ್ಜಿ, ಅಜ್ಜ ಹಾಗೂ ಹಿರಿಯರ ಮಾರ್ಗದರ್ಶನವಿಲ್ಲದ ಜೀವನ, ವಿದೇಶಿ ಬದುಕಿನ ಆಕರ್ಷಣೆ, ವಿಲಾಸಿ ಜೀವನ, ಹಣದ ವ್ಯಾಮೋಹ, ಬಹು ಪತ್ನಿತ್ವ/ಪತಿತ್ವ, ವೈಫ್ ಸ್ವಾಪಿಂಗ್" ಇವೆಲ್ಲವೂ ಮಾನವ ಸಂಬಂಧಗಳನ್ನು ಹಾಗೂ ಮದುವೆಯ ಮೌಲ್ಯಗಳನ್ನು ನಾಶ ಮಾಡುತ್ತಿವೆ. ಭಾವನಾರಹಿತ ಜೀವನ ಶೈಲಿಯನ್ನು ಸೃಷ್ಟಿ ಮಾಡುತ್ತಿವೆ. ಇದೇನಾ, ನಾವು ನಮ್ಮ ಮುಂದಿನ ಪೀಳಿಗೆಗೆ ನೀಡುತ್ತಿರುವ ಬಳುವಳಿ ಎಂಬ ಪ್ರಶ್ನೆ ಕಾಡುತ್ತಿದೆ.!!

–ಸಾಸಲಾರಾಧ್ಯ, ಮೈಸೂರು.

### ಹದಗೆಟ್ಟ ಗೆಜ್ಜಗಳ್ಳಿ–ಕೊಪ್ಪಲೂರು ರಸ್ತೆ



ಮಾನ್ಯರೆ,

ನಮ್ಮ ಹಳ್ಳಿಯಲ್ಲಿ ಇರುವ ರಸ್ತೆಗಳು ಅದರಲ್ಲೂ ಮುಖ್ಯವಾಗಿ ಗೆಜ್ಜಗಳ್ಳಿಯ ಕೊಪ್ಪಲೂರು ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದೆ. ಹಳ್ಳ–ಕೊಳ್ಳಗಳಿಂದ ಕೂಡಿರುವ ರಸ್ತೆಯಲ್ಲಿ ಸಂಚಾರ ಮಾಡುವುದು ಕಷ್ಟವಾಗಿದೆ. ಮಳೆ ಬಂದಾಗಲಂತೂ ರಸ್ತೆ ಯಾವುದು, ಹಳ್ಳ ಯಾವುದು ಎಂಬುದನ್ನು ಪತ್ತೆ ಹಚ್ಚುವುದಂತೂ ದುಸ್ತರವೇ ಆಗಿದೆ. ಹಲವು ಜನ ಸಂಜೆ ಹೊತ್ತಿನಲ್ಲಿ ಈ ರಸ್ತೆಯಲ್ಲಿ ಸಂಚರಿಸುವ ಸಂದರ್ಭದಲ್ಲಿ ಬಿದ್ದು ಗಾಯಗೊಂಡಿದ್ದಾರೆ. ಪ್ರತಿನಿತ್ಯ ಓಡಾಡುವ ದಾರಿ ಇದಾಗಿದ್ದು, ಹಲವಾರು ವಿದ್ಯಾರ್ಥಿಗಳು ಈ ರಸ್ತೆಯ ಮೂಲಕ ಸಂಚಾರ ಮಾಡುವುದರಿಂದ ದಯಮಾಡಿ ಸಂಬಂಧಪಟ್ಟವರು ರಸ್ತೆಯನ್ನು ಸರಿ ಮಾಡಿಸಿಕೊಡಬೇಕೆಂದು ರಾತ್ರಿಯ ಸಮಯದಲ್ಲಿ ನಿರ್ಭೀತಿಯಿಂದ ಸಂಚರಿಸಲು ಅನುಕೂಲವಾಗುವಂತೆ ಬೀದಿ ದೀಪಗಳನ್ನು ಸರಿಪಡಿಸಿಕೊಟ್ಟರೆ ಅನುಕೂಲವಾಗುವುದು. ಆದ್ದರಿಂದ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರು ಇದರ ಬಗ್ಗೆ ಗಮನಹರಿಸಬೇಕೆಂದು ಮನವಿ.

– ವಿ. ಗೌತಮ್, ಗೆಜ್ಜಗಳ್ಳಿ, ಮೈಸೂರು. ತಾ.

### ಜನ ಸಾಮಾನ್ಯರಿಗೆ ಮತ್ತೊಂದು ಬರೆಯೇ?

ಮಾನ್ಯರೆ,

ಚಂಡೀಗಡದಲ್ಲಿ ಆಯೋಜಿಸಲಾಗಿದ್ದ ಸರಕು ಮತ್ತು ಸೇವಾ ತೆರಿಗೆಯ 47ನೇ ಸಭೆಯಲ್ಲಿ ಸರಕು ತೆರಿಗೆ ಹೆಚ್ಚಿಸಲು ಮತ್ತು ಕೆಲವೊಂದು ವಸ್ತುಗಳನ್ನು ಕಡಿತ ಗೊಳಿಸಲು ಅನುಮೋದನೆ ನೀಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಸ್ತುತ ಪಡಿಸಿದ್ದಾರೆ.

ಕೇಂದ್ರ ಪಗಾಮಿ ಪಂಪ್, ಆಳವಾದ ಕೊಳವೆ ಬಾವಿ ಟರ್ಬೈನ್ ಪಂಪ್‌ಗಳು, ಸಬ್ ಮರ್ಸಿಬಲ್ ಪಂಪ್‌ಗಳು ಮತ್ತು ಮುಂತಾದವುಗಳ ತೆರಿಗೆ ದರವನ್ನು ಶೇ.12 ರಿಂದ 18ಕ್ಕೆ ಏರಿಸಲಾಗಿದೆ. ಆಹಾರ ಧಾನ್ಯಗಳನ್ನು ಶುಚಿಗೊಳಿಸುವ ಯಂತ್ರಗಳನ್ನು, ಸಂಸ್ಕರಿಸುವ ಗಿರಣಿಗಳ ಯಂತ್ರಗಳ ತೆರಿಗೆಯನ್ನು ಶೇ. 5 ರಿಂದ 18ಕ್ಕೆ ಏರಿಸಲಾಗಿದೆ. ಧಾನ್ಯದ ಬೆಳೆ ಕಾಳುಗಳು, ಮಿಲ್ಲಿಂಗ್ ಉದ್ಯಮದ ಯಂತ್ರೋಪಕರಣಗಳಿಗೆ ಶೇ.12 ರಿಂದ 18ಕ್ಕೆ ಜಿಎಸ್‌ಟಿ ದರವನ್ನು ಏರಿಸಲಾಗಿದೆ, ಇದು ರೈತರಿಗೆ ಬರೆ ಅಲ್ಲವೇ. ಸೋಲಾರ್ ವಾಟರ್ ಹೀಟರ್ ತೆರಿಗೆ ದರವನ್ನು ಶೇ. 5ರಿಂದ 12ಕ್ಕೆ ಹೆಚ್ಚಳ ಜನ ಸಾಮಾನ್ಯರಿಗೆ ಬರೆ ಬಿದ್ದಿದೆ.

–ಕಂಗಾಣಿಸೋಮು
ಪಿ.ಸಿ.,ಕ್ಯಾತಮಾರನಹಳ್ಳಿ ಮೈಸೂರು

### ನಿಯಮ ಕಾಗದಕ್ಕೆ ಮಾತ್ರ ಸೀಮಿತವಾಗದಿರಲಿ

ಮಾನ್ಯರೆ,

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಕೇಂದ್ರ ಸರ್ಕಾರ ನಿಯಮ ಜಾರಿ ಮಾಡಿರುವುದು ಸ್ವಾಗತಾರ್ಹ. ಸರ್ಕಾರ ಪ್ಲಾಸ್ಟಿಕ್ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ನಿಯಮ ಉಲ್ಲಂಘಿಸಿ ಕಳ್ಳ ಮಾರ್ಗದಲ್ಲಿ ಪ್ಲಾಸ್ಟಿಕ್ ಉತ್ಪಾದನೆ, ಮಾರಾಟ ಮತ್ತು ಬಳಕೆ ಮಾಡುವವರನ್ನು ಗುರುತಿಸಿ ಶಿಕ್ಷೆಗೆ ಒಳಪಡಿಸಬೇಕು. ಈ ನಿಯಮ ಕೇವಲ ಕಡತಕ್ಕೆ ಮಾತ್ರ ಸೀಮಿತವಾಗಬಾರದು. ಸರ್ಕಾರ ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಪರಿಸರ ಸ್ನೇಹಿ ವಸ್ತುಗಳನ್ನು ಉತ್ಪಾದಿಸಲು ಮತ್ತು ಬಳಸಲು ಪ್ರೋತ್ಸಾಹ ನೀಡಬೇಕು.

–ಜಿ.ಕೆ.ಚನ್ನಕೇಶವ, ತರೀಕೆರೆ




ಪ್ರೊ. ಎ.ವಿ. ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

# 'ಸ್ವಾಮಿ' ಹೆಸರಿನ ನಾಲ್ವರು ಶ್ರೇಷ್ಠರು

ಇತಿಹಾಸದಲ್ಲಿ ದಾಖಲಾಗಿರುವ ನಾಲ್ವರು ಸ್ವಾಮಿ ಹೆಸರಿನ ಸಾಧಕರ ಬಗ್ಗೆ ಇಂದಿನ ಅಂಕಣದಲ್ಲಿ ವಿವರಿಸಲಾಗಿದೆ. ಈ ಮಹನೀಯರು ತಮ್ಮ ತಮ್ಮ ಕ್ಷೇತ್ರದಲ್ಲಿ ಮಹತ್ತರವಾದುದ್ದನ್ನು ಸಾಧಿಸಿ, ಮುಂದಿನ ಪೀಳಿಗೆಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ


ಬಿ.ಜಿ.ಎಲ್. ಸ್ವಾಮಿ


ಲಾರ್ಡ್ ಮೌಂಟ್ ಬ್ಯಾಟನ್


ರಾಮಸ್ವಾಮಿ ವೃತ್ತ

**ಬಿ.ಜಿ.ಎಲ್.ಸ್ವಾಮಿ:** ಇವರ ಪೂರ್ಣ ಹೆಸರು **ಬೆಂಗಳೂರು ಗುಂಡಪ್ಪ ಲಕ್ಷ್ಮೀನಾರಾಯಣ ಸ್ವಾಮಿ**. ಇವರು ವಿಜ್ಞಾನದ ವಿಷಯಗಳನ್ನು ಮನರಂಜಕವಾಗಿ ಹೇಳಬಹುದು ಎಂಬುದನ್ನು ತೋರಿಸಿಕೊಟ್ಟ **ವಿಜ್ಞಾನ ಸಾಹಿತಿ**. ಇವರ ತಂದೆ **ಡಿ.ವಿ.ಜಿ.** ಹಾಗೂ ತಾಯಿ **ಭಾಗೀರಥಮ್ಮ**. ಇವರ ಮನೆಮಾತು **ತಮಿಳು**. ಇವರ ಹಿರಿಯರು ಮುಳಬಾಗಿಲಿನಲ್ಲಿದ್ದುದರಿಂದ, ಇವರಿಗೆ **ತೆಲುಗು** ಭಾಷೆಯೂ ಬರುತ್ತಿದ್ದಿತು. 1945ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಇವರು **ಡಿ.ಎಸ್.ಸಿ.** ಪದವಿ ಪಡೆದರು. 1948ರಲ್ಲಿ ಇವರು ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ನಡೆಸಿದರು.

ಭಾರತಕ್ಕೆ ಹಿಂದಿರುಗಿದ ನಂತರ 1953ರಲ್ಲಿ **ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಸ್ಯ ವಿಜ್ಞಾನದ** ಪ್ರಾಧ್ಯಾಪಕರಾಗಿ ನೇಮಕಗೊಂಡರು. ನಂತರ ಪ್ರೆಸಿಡೆನ್ಸಿ ಕಾಲೇಜು **ಪ್ರಾಂಶುಪಾಲರೂ** ಆಗಿ ಕಾರ್ಯ ನಿರ್ವಹಿಸಿ, ಇವರು **1978ರಲ್ಲಿ** ನಿವೃತ್ತರಾದರು. ಸ್ವಾಮಿಯವರು (ಬಿ.ಜಿ.ಎಸ್.) ವಿದ್ಯಾರ್ಥಿ ದೆಸೆಯಿಂದಲೇ **ಸಂಶೋಧನೆ** ಹಾಗೂ **ಬರೆಯುವ ಹವ್ಯಾಸವನ್ನು** ಹೊಂದಿದ್ದರು. ಇವರಿಗೆ ಸಸ್ಯಶಾಸ್ತ್ರದ ವಿಷಯಗಳಲ್ಲಿ ಪ್ರೋತ್ಸಾಹ ಹಾಗೂ ಉತ್ತೇಜನ ದೊರಕಿತು.

ಎ.ಆರ್.ಕೃಷ್ಣಶಾಸ್ತ್ರಿಗಳು ಸಂಪಾದಿಸುತ್ತಿದ್ದ **ಪ್ರಬುದ್ಧ ಕರ್ನಾಟಕದಲ್ಲಿ** ಇವರ ಅನೇಕ ಲೇಖನಗಳು ಪ್ರಕಟವಾಗಿದ್ದವು. 1954ರಲ್ಲಿ **ಕನ್ನಡ ನುಡಿ** ಎಂಬ ಪತ್ರಿಕೆಯಾದ **ವಿಜ್ಞಾನ ವಿಹಾರದಲ್ಲಿ** ಇವರು ಬರೆದ **ಚೇಡನ ಚರಕ** ಮತ್ತು **ಹೂವಿನ ಬಳ್ಳಿ** ಪ್ರಬಂಧಗಳು ಪ್ರಕಟವಾದವು. 1955ರಲ್ಲಿ ಇವರ ಎರಡು ಕೃತಿಗಳು, **ವಧೂ–ವರರಿಗೆ ಆರೋಗ್ಯ ವಿಜ್ಞಾನ** ಹಾಗೂ **ಬಯಾಗ್ರಫಿ ಆಫ್ ದಿ ಅನ್‌ಬಾರ್ನ್ ಚೈಲ್ಡ್** ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದಿಸಿದರು. 1955ರಲ್ಲಿ ಇವರು ಬರೆದ **ಸೌಗಂಧಿಕಾಪಹರಣ** ಮತ್ತು **ಶಾಸನಗಳಲ್ಲಿ ಗಿಡ–ಮರಗಳು**, ನಮ್ಮ **ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ** ಎಂಬ ಮೂರು ಪುಸ್ತಕಗಳು (1978), ಹಾಗೂ ಹಸಿರು ಹೊನ್ನು (1979) ಇವರು ಬರೆದ ಜನಪ್ರಿಯ ಗ್ರಂಥಗಳು.

ಇವರು **ಕೊರವಂಜಿ** ಮಾಸ ಪತ್ರಿಕೆಯಲ್ಲಿ ಬರೆದ **ಮೀನಾಕ್ಷಿಯ ಸೌಗಂಧ** ಎಂಬ ಹಾಸ್ಯ ನಾಟಕವು 1947ರಲ್ಲಿ ಪ್ರಕಟಗೊಂಡಿತು. ಇವರು **ನಾನು** ಎಂಬ ಲೇಖನ ಮಾಲೆಯನ್ನು ಕನ್ನಡದಲ್ಲಿ ಆರಂಭಿಸಿದರು. ಇದು 1962ರಲ್ಲಿ ಪ್ರಕಟವಾಯಿತು. ಮದ್ರಾಸಿಗೆ ಹೋದ ಮೇಲೆ ತಮಿಳು ಭಾಷೆಯನ್ನು ಕಲಿತು ದಿವಂಗತ ಸುಬ್ರಹ್ಮಣ್ಯ ಭಾರತಿಯವರ **ನವತಂತ್ರದ ಕತೆಗಳು** ಪುಸ್ತಕವನ್ನು ಬರೆದು, ಅದನ್ನು 1959ರಲ್ಲಿ ತಮಿಳಿನಿಂದ ಕನ್ನಡಕ್ಕೆ ಭಾಷಾಂತರಿಸಿದರು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನ **ಕರ್ನಾಟಕ ಸಂಘ** ಮತ್ತು ಐವರು ಕನ್ನಡದ ಶ್ರೇಷ್ಠ ಸಾಹಿತಿಗಳ ಕಥೆಯನ್ನು ಕುರಿತು ಇವರು ಬರೆದ **ಪಂಚ ಕಲಶ ಗೋಪುರ** ಎಂಬ ಪುಸ್ತಕ 1964ರಲ್ಲಿ ಪ್ರಕಟವಾಯಿತು.

ಸ್ವಾಮಿಯವರು ಬರೆದ **ಕಾಲೇಜು ರಂಗ** ಚಲನಚಿತ್ರವಾಯಿತು. ಈ ಪುಸ್ತಕಕ್ಕೆ (ಕಾಲೇಜು ತರಂಗ) **ರಾಜ್ಯ ಸಾಹಿತ್ಯ ಅಕಾಡೆಮಿ** ಮತ್ತು **ಕ್ರಿಶ್ಚಿಯನ್ ಲಿಟರರಿ ಸೊಸೈಟಿಗಳಿಂದ** ಬಹುಮಾನ ಬಂದಿದೆ. ಇವರು ಬರೆದ **ಕಡಲಾಚೆಯಿಂದ ಬಂದ ಸಸ್ಯಗಳು, ತಮಿಳು ತಲೆಗಳ ನಡುವೆ, ಪ್ರಾಧ್ಯಾಪಕನ ಪೀಠದಲ್ಲಿ, ಸಾಕ್ಷಾತ್ಕಾರದ ಹಾದಿಯಲ್ಲಿ, ಸಸ್ಯ ಜೀವಿ ಪ್ರಾಣಿ ಜೀವಿ** ಮುಂತಾದವುಗಳು ಇವರು ಬರೆದ ಕೃತಿಗಳು. **ಅನಾಲಿಸಿಸ್ ಅಂಡ್ ರಿ ಅಪ್ರೈಸಲ್** ಲೇಖನಗಳು ಜನಪ್ರಿಯವಾಗಿವೆ. 1978ರಲ್ಲಿ ಇವರು ಬರೆದ ಪುಸ್ತಕವೇ **ಫ್ರಂ ಫ್ಲವರ್ ಟು ಫ್ರೂಟ್**.

1940–78ರವರೆಗೆ ಇವರು ಪ್ರಕಟಿಸಿರುವ ಸುಮಾರು ಮುನ್ನೂರು ಲೇಖನಗಳು **ಅಂತರ ರಾಷ್ಟ್ರೀಯ ಪತ್ರಿಕೆ**ಗಳಲ್ಲಿ ಪ್ರಕಟಗೊಂಡಿವೆ. 1996ರಲ್ಲಿ ಇವರ ಬಿಡಿ ಬರಹಗಳು ಸಂಗ್ರಹಗೊಂಡಿವೆ. ಸಸ್ಯ ವಿಜ್ಞಾನಕ್ಕೆ ಇವರು ನೀಡಿರುವ ಕೊಡುಗೆಯನ್ನು ಗಮನಿಸಿ ಇವರಿಗೆ **ಬೀರ್ಬಲ್ ಸಾಹ್ನಿ** ಚಿನ್ನದ ಪದಕವನ್ನು 1997ರಲ್ಲಿ ಕೊಡಲಾಯಿತು. 1998ರಲ್ಲಿ ರಷ್ಯದ **ಲೆನಿನ್ ಗ್ರಾಡ್**‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಸ್ಯ ವಿಜ್ಞಾನ ಸಮ್ಮೇಳನಕ್ಕೆ ಇವರು **ಉಪಾಧ್ಯಕ್ಷ**ರಾಗಿದ್ದರು. ಇವರು ಬರೆದ **ಹಸಿರು ಹೊನ್ನು** ಕೃತಿಗೆ 1978ರಲ್ಲಿ **ಕೇಂದ್ರ ಸಾಹಿತ್ಯ ಅಕಾಡೆಮಿ** ಪ್ರಶಸ್ತಿ ಲಭಿಸಿದೆ.

ಬಿ.ಜಿ.ಎಲ್. ಅವರಿಗೆ **ಚಿತ್ರಕಲೆ** ಹಾಗೂ **ಕರ್ನಾಟಕ ಸಂಗೀತ**ದಲ್ಲಿ ಆಸಕ್ತಿ ಇದ್ದಿತು. ಸ್ವಾಮಿಯವರು 3.11.1980ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು. ಸಸ್ಯಶಾಸ್ತ್ರಜ್ಞರ ಅನೇಕ ಸಂಘಗಳು ಇವರ ನಿಧನಕ್ಕೆ ಸಂತಾಪವನ್ನು ಸೂಚಿಸಿದವು.

**ಎಸ್.ಎನ್.ಸ್ವಾಮಿ:** ಇವರು **ಯರಗಂಬಳ್ಳಿಯಲ್ಲಿ** 26.3.1906ರಂದು ಜನಿಸಿದರು. ಇವರು ಕರ್ನಾಟಕದ ಪ್ರಸಿದ್ಧ **ವರ್ಣಚಿತ್ರಕಾರರು** ಹಾಗೂ **ಶಿಲ್ಪಿಗಳು**. ಚಿಕ್ಕ ವಯಸ್ಸಿನಿಂದಲೇ **ಬಡತನದ** ಅನೇಕ ಕಷ್ಟಗಳನ್ನು ಎದುರಿಸಿದರು. ಅಂದಿನ ಮೈಸೂರಿನ ಮಹಾರಾಜರು ಇವರ ವರ್ಣಚಿತ್ರ ಹಾಗೂ ಶಿಲ್ಪಗಳಿದ್ದ ಆಸಕ್ತಿಯನ್ನು ಗಮನಿಸಿ, ಇವರನ್ನು ಮೈಸೂರಿಗೆ ಕರೆಸಿಕೊಂಡರು. ನಂತರ ಇವರು **ಚಾಮರಾಜೇಂದ್ರ** ಶಿಕ್ಷಣ ಶಾಲೆಯಲ್ಲಿ ಚಿತ್ರಕಲೆಯ ಅದ್ಯಾಪಕರಾದರು. ಇವರು ರಚಿಸಿದ ರೇಖಾಚಿತ್ರಗಳೇ ಆಗಲೀ ಅಥವಾ **ತೈಲಚಿತ್ರ** ಮತ್ತು **ಜಲವರ್ಣ** ಚಿತ್ರಗಳಲ್ಲೇ ಆಗಲೀ ಇವರು ತೋರಿಸುತ್ತಿದ್ದ ಆಸಕ್ತಿಯು ಬಹುಮುಖವಾಗಿದ್ದವು. ಮೈಸೂರಿನ **ವೃತ್ತಿ ಶಿಕ್ಷಣ ಶಾಲೆಯಲ್ಲಿರುವ** ಚಿತ್ರಗಳನ್ನು ಇವರು ಕಣ್ಣಿಗೆ ಕಟ್ಟುವಂತೆ ರಚಿಸಿದ್ದರು. ಮೈಸೂರಿನ ಮಹಾರಾಜರವರ **ದರ್ಬಾರಿನ ಚಿತ್ರವನ್ನು ಮಹಾರಾಜರೇ** ಕುಳಿತ್ತಿದ್ದಾರೆನೋ ಎನ್ನುವ ರೀತಿಯಲ್ಲಿ ಇವರು ರಚಿಸಿದ್ದಾರೆ. ಮೈಸೂರಿನ ವಸ್ತುಪ್ರದರ್ಶನದ ಸ್ಥಳದಲ್ಲಿ ವಿವಿಧ ವರ್ಣಗಳಿಂದ ರಚಿಸಿದ ಇವರ ಚಿತ್ರವನ್ನು ನೋಡಿದವರಿಗೆ ಇವರು ಶ್ರೇಷ್ಠ ವರ್ಣಚಿತ್ರಕಾರರು ಎಂಬುದು ಮನವರಿಕೆಯಾಗುತ್ತದೆ.

ಇವರಿಗೆ **ರಾಮಾಯಣ, ಮಹಾಭಾರತ, ಭಾಗವತ** ಹಾಗೂ **ಶಿವ ಮಹಾಪುರಾಣ**ಗಳನ್ನು ಓದುವುದರಲ್ಲಿ ಹೆಚ್ಚಿನ ಆಸಕ್ತಿಯಿದ್ದಿತು. ಇವರು ರಚಿಸಿದ ಅನೇಕ ವರ್ಣಚಿತ್ರಗಳಿಗೆ ಈ ನಾಲ್ಕು ಪುರಾಣಗಳೇ ಸ್ಫೂರ್ತಿಯನ್ನು ಒದಗಿಸಿದವು. ಇವರ ಸ್ನೇಹಿತರಲ್ಲಿ, **ಸಾಹಿತಿಗಳು** ಮತ್ತು **ಕಲಾವಿದರೇ** ಹೆಚ್ಚಾಗಿದ್ದರು. ಇವರ ಅಚ್ಚುಮೆಚ್ಚಿನ ಸ್ನೇಹಿತರೆಂದರೆ **ಟಿ.ಪಿ.ಕೈಲಾಸಂ**. ಸ್ವಾಮಿಯವರಿಗೆ ಅರಮನೆಯ ಕಲಾವಿದರಾಗಿದ್ದ **ಕೇಶವಯ್ಯನವರ** ಸಹಾಯ ಸಿಕ್ಕಿದ್ದರಿಂದ ಇವರ ಕಲಾಸಾಧನೆಗೆ ಹೆಚ್ಚಿನ ಅವಕಾಶಗಳು ದೊರಕಿದವು. ಇವರು ಶ್ರೀ **ಚಾಮರಾಜೇಂದ್ರ ವೃತ್ತಿ ಶಿಕ್ಷಣ ಕಲಾ ಶಾಲೆಯಲ್ಲಿ** ಅಭ್ಯಾಸ ನಡೆಸಿದರು. ನಂತರ ಇವರು ಮುಂಬಯಿಯ ಜೆ.ಜೆ. ಕಲಾ ಶಾಲೆಯಲ್ಲಿ ಅಭ್ಯಾಸ ನಡೆಸಿ, ಹೆಚ್ಚಿನ ಅನುಭವವನ್ನು ಪಡೆದರು.

**ನಾಲ್ವಡಿ ಕೃಷ್ಣರಾಜ ಒಡೆಯರ್** ಅವರು ಇವರ ತೈಲ ಚಿತ್ರಗಳಿಗೆ ಮಾರು ಹೋಗಿ ಎಸ್.ಎನ್.ಸ್ವಾಮಿಯವರ **ಕಲಾ ಪ್ರೌಢಿಮೆಗೆ** ಹೆಚ್ಚಿನ ಪ್ರೋತ್ಸಾಹ ದೊರಕಿತು. ಇವರು ರಚಿಸಿದ ಕೆಲವು **ತೈಲ ವರ್ಣ ಚಿತ್ರಗಳು** ಮೈಸೂರು ಅರಮನೆಯ **ಕಲ್ಯಾಣ ಮಂಟಪ**ವನ್ನು ಅಲಂಕರಿಸಿದೆ. ಈಗಲೂ ಸ್ವಾಮಿಯವರು ರಚಿಸಿದ ವರ್ಣಚಿತ್ರಗಳು, ಮೈಸೂರಿನ ಅರಮನೆಯಲ್ಲಿ ಇವೆ. ಇವರಿಗೆ ಪಾಶ್ಚಾತ್ಯ ಶೈಲಿಯಲ್ಲಿಯೂ ಆಸಕ್ತಿ ಇದ್ದಿತು. ಇವರು ರಚಿಸಿದ ವರ್ಣಚಿತ್ರಗಳಲ್ಲಿ, ಜನರ **ಭಾವಭಂಗಿ, ಚಲನ–ವಲನ** ಬಹಳ ಸ್ವಾಭಾವಿಕವಾಗಿ ಮೂಡಿ ಬಂದಿದೆ.

**ಚಿತ್ರಕಲೆಯು** ಬೇಸರವಾದಾಗ, ಇವರು **ದಂತ** (ಆನೆಯ) ಹಾಗೂ ಗಂಧದ ಮರದಲ್ಲಿ ಸುಂದರ ಮೂರ್ತಿಗಳನ್ನು ಕೆತ್ತುತ್ತಿದ್ದರು. **ಬೇಲೂರಿನ ಶಿಲಾ ಬಾಲಿಕೆಯರಿಂದ** ಸ್ಫೂರ್ತಿಗೊಂಡು ಇವರು ರಚಿಸಿದ **ಶಿವ** ಹಾಗೂ **ಗಣಪತಿ ವಿಗ್ರಹಗಳು** ಮೋಹಕವಾಗಿವೆ. ಇವರಿಗೆ 1967ರಲ್ಲಿ ಕರ್ನಾಟಕ **ರಾಜ್ಯ ಅಕಾಡೆಮಿಯ** ಪ್ರಶಸ್ತಿ ಲಭಿಸಿತು.

ಇವರಿಗೆ **ವನಸ್ಪತಿ ಔಷಧಿಯ ತಯಾರಿಕೆಯಲ್ಲಿ** ಹೆಚ್ಚಿನ ಆಸಕ್ತಿಯಿದ್ದಿತು. ಇಂತಹ ಔಷಧಿಗಳನ್ನು ತಮ್ಮ ಮನೆಯಲ್ಲಿಯೇ ತಯಾರಿಸಿಕೊಳ್ಳುತ್ತಿದ್ದರು. ತಮ್ಮ ಜೀವನದ ಕೊನೆಯ ದಿನಗಳಲ್ಲಿ ಶಿಲೆಯಲ್ಲಿ ಚಾಮುಂಡೇಶ್ವರಿ ತಾಯಿಯ ವಿಗ್ರಹವನ್ನು ರೂಪಿಸುತ್ತಿದ್ದಾಗ, ಅದು ಪೂರ್ಣಗೊಳ್ಳುವಷ್ಟರಲ್ಲಿಯೇ 27–12–1969 ರಂದು ನಿಧನರಾದರು.

**ಎಸ್.ಎಸ್.ಸ್ವಾಮಿ:** ಇವರ ತಂದೆಯವರು **ಸ್ವರ್ಣ ಕಲಾವಿದರೆಂಬ** ಬಿರುದು ಪಡೆದಿದ್ದ **ಸಿಂಗಣ್ಣಾಚಾರ್ಯರು**. ಇವರು ಜನಿಸಿದ್ದು ಮೈಸೂರಿನಲ್ಲಿ. ಬಾಲ್ಯದಿಂದಲೂ **ಕಲೆಯ** ಒಂದು **ಮಧುರ** ಸನ್ನಿವೇಶದಲ್ಲಿ ಬೆಳೆದು ಬಂದ ಇವರಿಗೆ ಕಲೆಯಲ್ಲಿ ವಿಶೇಷ ಆಸಕ್ತಿ ಮೂಡಿತು. ಮೈಸೂರಿನ ಪುರಸಭೆಯವರು ಏರ್ಪಡಿಸಿದ್ದ ವಸ್ತು ಪ್ರದರ್ಶನದಲ್ಲಿ ಇವರು ರಚಿಸಿದ್ದ ವರ್ಣಚಿತ್ರಕ್ಕೆ **ಬೆಳ್ಳಿಯ ಪದಕ** ಲಭಿಸಿತು. ಇವರು ಇದ್ದಿಲಿನಿಂದ ಮಾಡಿದ ಮಹಾರಾಷ್ಟ್ರದ **ವನಿತೆಯೊಬ್ಬಳ ಮೈಮಾಡೆಲ್** ಭಾವಚಿತ್ರಕ್ಕೆ ಸಿಮ್ಲಾ ಕಲಾಪ್ರದರ್ಶನದಲ್ಲಿ **ಸುವರ್ಣ ಪದಕ** ಲಭಿಸಿತು. ಇದೇ ವರ್ಣಚಿತ್ರಕ್ಕೆ **ಎಸ್.ಜಿ.ಶಾಸ್ತ್ರಿಗಳ** ಬಹುಮಾನವೂ ದೊರಕಿತು. ಮದರಾಸಿನ ಕಲಾಪ್ರದರ್ಶನದಲ್ಲಿ ಇವರು **ದಂತದಲ್ಲಿ** ಕೆತ್ತಿದ **ಸರಸ್ವತಿಯ** ಶಿಲ್ಪಕ್ಕೆ ಎರಡು ಸಾವಿರ ರೂಪಾಯಿಗಳ ಬಹುಮಾನವೂ ಬಂದಿತು.

ಇವರು ಮುಂಬಯಿಯಲ್ಲಿ ತಮ್ಮ ವ್ಯಾಸಂಗ ಮುಗಿಸಿಕೊಂಡು ಮೈಸೂರಿಗೆ ಹಿಂದಿರುಗಿದರು. 1934ರಲ್ಲಿ ವಿಶ್ವಕವಿ ರವೀಂದ್ರರ ಭಾವಚಿತ್ರವನ್ನು ನೋಡಿಕೊಂಡು ರವೀಂದ್ರರ ವರ್ಣಚಿತ್ರವನ್ನು ಬರೆದರು. ಹಾಗೂ ರವೀಂದ್ರರಿಂದಲೇ ಮೆಚ್ಚುಗೆಯನ್ನು ಪಡೆದರು. ಅನಂತರ ಇವರು **ರಾಜರು** ಹಾಗೂ **ರಾಣಿಯರು, ರಾಜಕೀಯ ಧುರೀಣರನ್ನು, ತತ್ವಜ್ಞಾನಿಗಳನ್ನು, ಕವಿ ಕುಲತಿಲಕರನ್ನು, ನಾಟ್ಯಾಚಾರ್ಯರನ್ನು, ವಿಜ್ಞಾನಿಗಳನ್ನು** ಮತ್ತು ಸುಪ್ರಸಿದ್ಧ ನಟ–ನಟಿಯರ ಚಿತ್ರಗಳನ್ನು ರಚಿಸಲು ಆರಂಭಿಸಿದರು. ಇವರು ರಚಿಸಿದ ಪ್ರಸಿದ್ಧ ವರ್ಣಚಿತ್ರಗಳಲ್ಲಿ **ಹಿಟ್ಲರ್, ಚೆಂಬರ್ ಲಿನ್, ಮುಸೋಲನಿ, ಆಂತೋನಿ ಈಡನ್, ಚರ್ಚಿಲ್, ಲೆನಿನ್, ಸರ್ ಆಲಿವರ್ ಲಾಡ್ಜ್, ಬರ್ಟ್ರೆಂಡ್ ರಸೆಲ್, ಹ್ಯಾವ್‌ಲಾಕ್ ಎಲ್ಲಿಸ್** ಹಾಗೂ **ರೋಮಲೋಲಾ** ಮುಖ್ಯವಾದವುಗಳು.

ಇವರು 1941ರಲ್ಲಿ ವಾರ್ಧಾಕ್ಕೆ ಹೋಗಿ **ಬಾಪೂಜಿಯವರ** ದರ್ಶನ ಪಡೆದು, ಅವರ ಭಾವಚಿತ್ರವನ್ನು ವಿವಿಧ ಬಣ್ಣಗಳಲ್ಲಿ ರಚಿಸಿದರು. ಈ ಚಿತ್ರವನ್ನು ಮೆಚ್ಚಿಕೊಂಡು, **ಆ ಕಲಾಕೃತಿಯ ಮೇಲೆ ನಿಜವಾದ ಕಲೆಯು ಅಮರವಾದುದು** ಎಂದು ಬಾಪೂಜಿಯವರು ತಮ್ಮ ಹಸ್ತಾಕ್ಷರವನ್ನು ನೀಡಿದರು.

ಒಮ್ಮೆ ಮೈಸೂರಿಗೆ ಬಂದಿದ್ದ **ಲಾರ್ಡ್ ಮೌಂಟ್ ಬ್ಯಾಟನ್**‌ರವರು, ಇವರನ್ನು ದೆಹಲಿಗೆ ಕರೆಸಿಕೊಂಡು, ತಮ್ಮ ಭಾವಚಿತ್ರವನ್ನು ರಚಿಸಲು ಅವಕಾಶ ನೀಡಿದರು. ಸ್ವಾಮಿಯವರು ಬರೆದ **ಬಾಪೂಜಿಯವರ ಚಿತ್ರವನ್ನು ನೆಹರೂ** ಅವರು ತಮ್ಮ ಅತಿಥಿ ಗೃಹದಲ್ಲಿ ಇಟ್ಟಿದ್ದರು. ಈ ಚಿತ್ರ ಈಗ **ತೀನ್ ಮೂರ್ತಿ ಭವನದ** ಸಂಗ್ರಹಾಲಯದಲ್ಲಿದೆ.

**ಕಸ್ತೂರಬಾ, ನೆಹರೂ, ರಾಜೇಂದ್ರ ಪ್ರಸಾದ್**, ಸಿ.ರಾಜ **ಗೋಪಾಲಾಚಾರಿ, ಸರ್ ಎಂ.ವಿಶ್ವೇಶ್ವರಯ್ಯ, ರಾಧಾಕೃಷ್ಣನ್, ಮಿರ್ಜಾ ಇಸ್ಮಾಯಿಲ್** ಮೊದಲಾದವರ ಚಿತ್ರಗಳನ್ನು ಸ್ವಾಮಿಯವರು ಬರೆದಿದ್ದಾರೆ.

ನೃತ್ಯ ಕಲೆಯಲ್ಲಿಯೂ ಆಸಕ್ತಿ ಇದ್ದ ಇವರು **ನಾಟ್ಯ ಸರಸ್ವತಿ** ಜಟ್ಟಿತಾಯಮ್ಮನವರ ಚಿತ್ರವನ್ನು 1942ರಲ್ಲಿ ವಿವಿಧ ಬಣ್ಣಗಳಲ್ಲಿ ಬರೆದರು.

ವಿಶ್ವದ ಅನೇಕ ಸ್ಥಳಗಳಲ್ಲಿ ಇವರು ಬರೆದ ವರ್ಣಚಿತ್ರಗಳನ್ನು ಕಾಣಬಹುದು. ಇವರು ಬರೆದ ಸುಪ್ರಸಿದ್ಧ ಆಂಗ್ಲ ಸಾಹಿತಿ **ಬರ್ನಾಡ್ ಷಾ** ಅವರ ಭಾವಚಿತ್ರ ಈಗ **ಇಂಡಿಯನ್ ಎಂಬೆಸಿ**ಯಲ್ಲಿದೆ. ಜೊತೆಗೆ ಬಾಪೂಜಿಯವರ ನೂಲುತ್ತಿರುವ ಚಿತ್ರ ಪ್ಯಾರಿಸ್ಸಿನ **ಯುನೆಸ್ಕೋ ಭವನದಲ್ಲಿದೆ**. ಇವರು ರಚಿಸಿದ **ರೂಸ್‌ವೆಲ್ಟ್** ಚಿತ್ರವೂ ಅಮೆರಿಕದ **ವೈಟ್ ಹೌಸ್**‌ನಲ್ಲಿದೆ. ಭಾರತದ ಪ್ರಥಮ ದಂಡನಾಯಕ **ಫೀಲ್ಡ್ ಮಾರ್ಷಲ್ ಕಾರಿಯಪ್ಪನವರ** ಚಿತ್ರ ಮಡಿಕೇರಿಯ ಕಾಲೇಜಿನಲ್ಲಿದೆ.

ಮೈಸೂರು ನಗರದ ನಾನಾ ಸಂಘ ಹಾಗೂ ಸಂಸ್ಥೆಗಳಲ್ಲಿ ಸ್ವಾಮಿಯವರು ರಚಿಸಿದ **ತೈಲವರ್ಣ ಚಿತ್ರಗಳು** ಇಂದಿಗೂ ರಾರಾಜಿಸುತ್ತಿವೆ. ಇವರು **ಇಂದಿರಾಗಾಂಧಿಯವರ** ರೇಖಾ ಚಿತ್ರವನ್ನು ರಚಿಸಿದ್ದರು. ಇದು ಈಗ **ತೀನ್ ಮೂರ್ತಿ ಭವನ** ದಲ್ಲಿದೆ ಮತ್ತು ಕನ್ನಡ **ಕುಲ ಪಿತಾಮಹ** ಆಲೂರ ವೆಂಕಟರಾಯರ ವರ್ಣಚಿತ್ರವನ್ನು ಸಹ ರಚಿಸಿದ್ದರು. ಭಾರತ ಸರ್ಕಾರ ಎಸ್.ಎಸ್.ಸ್ವಾಮಿಯವರಿಗೆ 1969ರಲ್ಲಿ **ಪದ್ಮಶ್ರೀ ಪ್ರಶಸ್ತಿ** ನೀಡಿ ಗೌರವಿಸಿದೆ.

**ಸ್ವಾಮಿ:** ಇವರ ಪೂರ್ಣ ಹೆಸರು ಕಣಕಟ್ಟಿ ರಾಮಸ್ವಾಮಿ. ರಾಮಸ್ವಾಮಿಯವರ ಅಜ್ಜಿಯವರೂ ಕಣಕಟ್ಟಿಯವರು, ರಾಮಸ್ವಾಮಿಯು ಬಡವನಾದುದರಿಂದ ಅವನನ್ನು ಪೂರ್ಣಯ್ಯನವರ ಛತ್ರಕ್ಕೆ ಕಳುಹಿಸುತ್ತಿದ್ದರು. ಹೀಗಾಗಿ ರಾಮಸ್ವಾಮಿ ಮಧ್ಯಾಹ್ನದ ಹಾಗೂ ರಾತ್ರಿಯ ಊಟದ ವ್ಯವಸ್ಥೆಯಾಯಿತು.

1946ರ ಜೂನ್ ತಿಂಗಳಿನಲ್ಲಿ ವಿವಿಧ ಶಾಲೆ–ಕಾಲೇಜು ವಿದ್ಯಾರ್ಥಿಗಳು **ಭಾರತ್ ಮಾತಾ ಕಿ ಜೈ, ವಂದೇ ಮಾತರಂ** ಎಂಬ ಘೋಷಣೆಗಳನ್ನು ಕೂಗುತ್ತ ಮೈಸೂರಿನಲ್ಲಿ ಪ್ರತಿಭಟನೆ ನಡೆಸಿದರು. ರಾಮಸ್ವಾಮಿಯ ನೇತೃತ್ವದಲ್ಲಿ ಈ ವಿದ್ಯಾರ್ಥಿಗಳ ಗುಂಪು ಮುಂದೆ ಸಾಗಿತು. ಪೊಲೀಸರು ವಿದ್ಯಾರ್ಥಿಗಳ ಸಂಚಿನ ಸುದ್ದಿಯನ್ನು ಡೆಪ್ಯುಟಿ ಕಮಿಷನರ್‌ಗೆ ಸುಳಿವು ನೀಡಿದರು. ಬ್ರಿಟಿಷರ ಕೈಕೆಳಗೆ ಕೆಲಸ ಮಾಡುತ್ತಿದ್ದ ಡಿಸಿ ನಾಗರಾಜರಾಯರು ವಿದ್ಯಾರ್ಥಿಗಳನ್ನು ತಡೆಯಲು ತಾವೇ ಹೊರಟರು. ಡಿ.ಸಿ.ನಾಗರಾಜರಾಯರು ನಿಯಮಕ್ಕೆ ಅನುಸಾರವಾಗಿ ನೀಡಬೇಕಾದ ಎಚ್ಚರಿಕೆಯನ್ನೂ ನೀಡದೆ, ಏನು ತೋಚದಂತೆ ನಿಂತಿದ್ದರು. ಅಷ್ಟರಲ್ಲಿ ರಾಮಸ್ವಾಮಿ ಕಾಂಗ್ರೆಸ್ ಬಾವುಟವನ್ನು ಹಿಡಿದುಕೊಂಡು **ವಂದೇ ಮಾತರಂ** ಘೋಷಣೆಯನ್ನು ಕೂಗುತ್ತಿದ್ದನು. ನಾಗರಾಜರಾಯರು, ನಿನ್ನ ಬಾವುಟವನ್ನು ಕೆಳಕ್ಕಿಳಿಸು ಎಂದು ಹೇಳಿದರು. ಅದಕ್ಕೆ ರಾಮಸ್ವಾಮಿ ನಿಮ್ಮ **ಪಿಸ್ತೂಲ್** ಅನ್ನು ಕೆಳಗೆ ಹಾಕಿ ಎಂದು ನಾಗರಾಜರಾಯರಿಗೆ ಹೇಳಿದ.


ನನಗೆ ಆದೇಶ ನೀಡುವುದಕ್ಕೆ ಈ ಬಾಲಕನಿಗೆ ಹಕ್ಕೇನಿದೆ ಎಂದು ಕೋಪಗೊಂಡ ನಾಗರಾಜರಾಯರು ತಮ್ಮ **ರಿವಾಲ್ವರ್**‌ನಿಂದ ಗುಂಡು ಹಾರಿಸಿದರು. ರಾಮಸ್ವಾಮಿ ಹುತಾತ್ಮನಾದನು.

ನಾನು ಗೆದ್ದೆ ಎಂದು ನಾಗರಾಜರಾಯರು ಸಂತೋಷಪಟ್ಟರು. ಆದರೆ **ಬ್ರಹ್ಮಹತ್ಯಾ** ದೋಷವೆಸಗಿದ ಘೋರ ಅಪರಾಧ ಅವರ ಹೆಗಲೇರಿತು. ಇಂತಹ ನೀಚರ ಮನೆಗೆ ಯಾವ ಕಾರ್ಯಗಳಿಗೂ ಯಾರೂ ಹೋಗಬಾರದು ಎಂದು ಬಂಧು–ಬಾಂಧವರು, ಸ್ನೇಹಿತರು ತೀರ್ಮಾನ ತೆಗೆದುಕೊಂಡರು. ಈ ನಿರ್ಧಾರದಿಂದ ಮನ ನೊಂದ ನಾಗರಾಜರಾಯರು ಸ್ವಲ್ಪ ಕಾಲದಲ್ಲೇ ನಿಧನರಾದರು.

ಇತ್ತ ಹುತಾತ್ಮನಾದ ರಾಮಸ್ವಾಮಿಯವರ ನೆನಪಿನಲ್ಲಿ **ರಾಮಸ್ವಾಮಿ ವೃತ್ತ** ಮೊದಲ ಹೆಸರನ್ನು ಮೈಸೂರು ಸರ್ಕಾರ. ಇಂದಿಗೂ ಯಾವುದಾದರೂ ಒಂದು ಸ್ಥಳದ ಪರಿಚಯವನ್ನು ಕೇಳಿದರೆ, ಬರುವ ಮೊದಲ ಉತ್ತರವೇ ರಾಮಸ್ವಾಮಿ ವೃತ್ತದ ಸಮೀಪ ಎಂದೇ ಹೇಳುತ್ತಾರೆ.

## ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಹೋರಾಟ ಪ್ರಚಾರ ವಾಹನಕ್ಕೆ ಚಾಲನೆ

ಮೈಸೂರು, ಜು.7(ಜಿಎ)– ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಿಸುವಂತೆ ಬೆಂಗಳೂರಿನಲ್ಲಿ ನಡೆಯುತ್ತಿರುವ ಧರಣಿ ಬೆಂಬಲಿಸಿ ಮೈಸೂರಿನಲ್ಲಿ ಕರ್ನಾಟಕ ಸ್ವಾಭಿಮಾನಿ ಎಸ್‌ಸಿ, ಎಸ್‌ಟಿ ಸಂಘಟನೆಗಳ ಒಕ್ಕೂಟ ಮತ್ತು ಮೈಸೂರು ಜಿಲ್ಲೆಯ ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿ ಜು.11ರಂದು ನಡೆಸಲಿರುವ ಪ್ರತಿಭಟನೆಯ ಪ್ರಚಾರ ವಾಹನಕ್ಕೆ ಉರಿಲಿಂಗಿ ಪೆದ್ದಿ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಗುರುವಾರ ಸಂಜೆ ಪುರಭವನದ ಮುಂಭಾಗ ಚಾಲನೆ ನೀಡಿದರು.



ನಂತರ ಮಾತನಾಡಿದ ಅವರು, ಮೀಸಲಾತಿ ಹೆಚ್ಚಿಸುವಂತೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರಸನ್ನಾನಂದ ಸ್ವಾಮೀಜಿ ಅವರು ನಡೆಸುತ್ತಿರುವ ಧರಣಿಯು 152 ದಿನಕ್ಕೆ ಕಾಲಿಡುತ್ತಿದೆ. ಹಿನ್ನೆಲೆಯಲ್ಲಿ ಅವರಿಗೆ ಬೆಂಬಲವನ್ನು ಸೂಚಿಸಲು ರಾಜ್ಯಾದ್ಯಂತ ಎಸ್‌ಸಿ, ಎಸ್‌ಟಿ ಸಮುದಾಯದವರು ಒಗ್ಗೂಡಿ ಒಂದೇ ವೇದಿಕೆಯಲ್ಲಿ ಪ್ರತಿಭಟನೆ ಮಾಡಲು ನಿರ್ಧರಿಸಿದ್ದು, ಅದರಂತೆ ಸೋಮವಾರ ಮೈಸೂರಿನಲ್ಲಿ ಭಾರೀ ಪ್ರತಿಭಟನೆ ಮಾಡಲು ನಿರ್ಣಯಿಸಲಾಗಿದೆ ಎಂದರು. ಈ ಬೃಹತ್ ಪ್ರತಿಭಟನೆ ಪ್ರಚಾರ ಸಮಿತಿಯ ವತಿಯಿಂದ ಎಲ್ಲಾ ಮುಖಂಡರು ಅಂದು ಬೆಳಗ್ಗೆ 10ಗಂಟೆಗೆ ಪುರಭವನದ ಮುಂಭಾಗದಿಂದ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ಮೆರವಣಿಗೆ ನಡೆಸುತ್ತೇವೆ. ಪೂರ್ವಭಾವಿಯಾಗಿ ಹಳ್ಳಿ ಹಳ್ಳಿಗಳಿಗೆ ಈ ಹೋರಾಟದ ಬಗ್ಗೆ ತಿಳಿಸಲು ಈ ಪ್ರಚಾರ ವಾಹನವನ್ನು ಎಲ್ಲಾ ಹಳ್ಳಿಗಳಿಗೂ ಕಳುಹಿಸುತ್ತಿದ್ದೇವೆ ಎಂದರು.

ಎಸ್‌ಸಿ, ಎಸ್‌ಟಿ ಸಮುದಾಯದವರ ಓಟು ಮಾತ್ರ ಬೇಕು ಅವರು ಹಿತ ಕಾಯುವುದಿಲ್ಲ ವೆಂದರೆ ಹೇಗೆ? ಪ್ರಶ್ನೆ ಮೂಲಕ ಹೋರಾಟದಲ್ಲಿ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹೇರುತ್ತೇವೆ. ಈ ಹೋರಾಟಕ್ಕೂ ಸರ್ಕಾರ ಮಣಿಯದಿದ್ದರೆ ಮುಂದಿನ ದಿನಗಳಲ್ಲಿ ಬೇರೆ ರೂಪ ಪಡೆದುಕೊಳ್ಳಲಿದೆ ಅದಕ್ಕೂ ಎಲ್ಲಾ ರೀತಿಯ ರೂಪುರೇಷೆಗಳು ನಡೆಯುತ್ತವೆ ಎಂದು ತಿಳಿಸಿದರು. ಮಾಜಿ ಮೇಯರ್ ಪುರುಷೋತ್ತಮ್, ದೇವಪ್ಪ ನಾಯಕ, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಜು.10ಕ್ಕೆ 'ಕುರುಕ್ಷೇತ್ರ' ನಾಟಕ

### ಪಾತ್ರಧಾರಿಗಳೆಲ್ಲಾ ಮಹಿಳೆಯರೇ ವಿಶೇಷ

ಮೈಸೂರು, ಜು.7– ಮೈಸೂರಿನ ಕಲಾಮಂದಿರದಲ್ಲಿ ಶ್ರೀ ಜಲವಾಸುದೇವ ನಾಟಕ ಸಭಾ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾಯೋಜಕತ್ವದಲ್ಲಿ ಜು.10ರಂದು ಬೆಳಗ್ಗೆ 11 ಗಂಟೆಗೆ 'ಕುರುಕ್ಷೇತ್ರ' ಪೌರಾಣಿಕ ನಾಟಕ ಏರ್ಪಡಿಸಲಾಗಿದೆ. ಪ್ರವೇಶ ಉಚಿತವಾಗಿದೆ.

ಈ ನಾಟಕದ ಪಾತ್ರಧಾರಿಗಳೆಲ್ಲರೂ ಮಹಿಳೆಯರೇ ಆಗಿರುವುದು ವಿಶೇಷ. ದಿವ್ಯ ಸಾನಿಧ್ಯವನ್ನು ಮೇಲುಕೋಟೆ ವೆಂಗೀಪುರ ನಂಬಿ ಮಠದ ಇಳೈ ಆಳ್ವಾರ್ ಸ್ವಾಮೀಜಿ ಮತ್ತು ಚಿತ್ರ ನಿರ್ಮಾಪಕಿ ಶ್ರೀಮತಿ ರೂಪಾ ಅಯ್ಯರ್ ವಹಿಸಲಿದ್ದಾರೆ. ಈ ನಾಟಕದಲ್ಲಿ ಸ್ತ್ರೀಯರೇ ಪಾತ್ರಧಾರಿಗಳಾಗಿರುವುದರಿಂದ ರಂಗಮಂಟಪಕ್ಕೆ ಪ್ರೇಕ್ಷಕರಿಗೆ ಪ್ರವೇಶ ನಿಷೇಧಿಸಲಾಗಿದೆ. ನಾಟಕ ವೀಕ್ಷಿಸಲು ಬರುವ ಪ್ರೇಕ್ಷಕರಿಗೆ ಊಟ ಉಪಹಾರ ವ್ಯವಸ್ಥೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com







## 'ಚೌಕಾಬಾರಾ' ಹಾಡುಗಳ ಅನಾವರಣ

ರಂಗಭೂಮಿ, ಕಿರುತೆರೆಯಲ್ಲಿ ತಮ್ಮದೇ ಆದ ಹೆಸರು ಗಳಿಸಿರುವ ನಮಿತಾರಾವ್ ಹಾಗೂ ವಿಕ್ರಮ್ ಸೂರಿ ದಂಪತಿಗಳ ನಿರ್ಮಾಣದ 'ಚೌಕಬಾರಾ' ಚಿತ್ರದ ಹಾಡುಗಳನ್ನು ಸಚಿವ ಎಸ್.ಟಿ. ಸೋಮಶೇಖರ್ ಬಿಡುಗಡೆ ಮಾಡಿ ಶುಭ ಕೋರಿದರು. ನಂತರ ಅವರು ಮಾತನಾಡುತ್ತಾ ತಾವೂ ಸಹ ಅಂಬರೀಶ್ ಹಾಗೂ ಬಿ.ಸಿ.ಪಾಟೀಲ್ ಅವರ ಚಿತ್ರಗಳಲ್ಲಿ ಅಭಿನಯಿಸಿದ್ದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡರು. ಮಣಿ ಆರ್.ರಾವ್ ಅವರ ಕಾದಂಬರಿ ಆಧಾರಿತ ಚಿತ್ರ ಇದಾಗಿದ್ದು, ಇಲ್ಲಿ ಸ್ನೇಹ, ಪ್ರೀತಿ ಹಾಗೂ ಬಾಂಧವ್ಯಗಳ ಸಮ್ಮಿಲನವಿದೆ. ಯುವಜನತೆಗೆ ಹತ್ತಿರವಾಗುವ ಕಥಾಹಂದರ ಹೊಂದಿದ ಈ ಸಿನಿಮಾವನ್ನು ನಮಿತಾರಾವ್ ಅವರು ನಿರ್ಮಿಸುವ ಜೊತೆಗೆ ನಟನೆಯನ್ನು ಮಾಡಿದ್ದಾರೆ. ಚಿತ್ರದಲ್ಲಿ ಅನೇಕ ನೂತನ ಪ್ರತಿಭೆಗಳಿಗೆ ಅವಕಾಶ ನೀಡಿರುವುದಾಗಿ ನಿರ್ದೇಶಕ ವಿಕ್ರಮ್ ಸೂರಿ ಹೇಳಿದರು.

ನಿರ್ಮಾಪಕಿ ನಮಿತಾರಾವ್ ಮಾತನಾಡುತ್ತಾ, ನಾನು ನಿರ್ಮಾಪಕಿಯಾಗುವುದಕ್ಕಿಂತ ಮುಂಚೆ, ರಂಗಭೂಮಿ ಕಲಾವಿದೆ, ನೃತ್ಯಗಾರ್ತಿ ಹಾಗೂ ಗಾಯಕಿ. ನಾವು ಕೆಲವು ವರ್ಷಗಳ ಹಿಂದೆ ಈ ಕ್ಷೇತ್ರಕ್ಕೆ ಬಂದಾಗ ಹೊಸಬರು. ಆಗ ನಮಗೂ ಉತ್ತಮ ಬೆಂಬಲ ದೊರಕಿತು. ಹಾಗಾಗಿ ಹೆಚ್ಚು ಹೊಸ ಪ್ರತಿಭೆಗಳಿಗೆ ಅವಕಾಶ ನೀಡಿರುವುದಾಗಿ ತಿಳಿಸಿ, ಚಿತ್ರದ ಕಲಾವಿದರನ್ನು ಪರಿಚಯಿಸಿದರು.

ನಮಿತಾರಾವ್, ವಿಹಾನ್ ಪ್ರಭಂಜನ್, ಕಾವ್ಯ ರಮೇಶ್, ಸುಜಯ್ ಹೆಗಡೆ, ಸಂಜಯ್ ಸೂರಿ, ಕೀರ್ತಿ ಭಾನು, ಮಧು ಹೆಗಡೆ, ಶಶಿಧರ್ ಕೋಟೆ, ಪ್ರಥಮ ಪ್ರಸಾದ್, ಸೀತಾ ಕೋಟೆ ಇನ್ನಿತರರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

ವಿಕ್ರಮ್ ಸೂರಿ ಅವರೇ ಚಿತ್ರಕಥೆ ಬರೆದು ನಿರ್ದೇಶಿಸಿರುವ ಈ ಚಿತ್ರಕ್ಕೆ ಅಶ್ವಿನ್ ಪಿ.ಕುಮಾರ್ ಸಂಗೀತ ನೀಡಿದ್ದಾರೆ. ಹೆಚ್.ಎಸ್.ವೆಂಕಟೇಶ್‌ಮೂರ್ತಿ, ಬಿ.ಆರ್.ಲಕ್ಷ್ಮಣ್ ರಾವ್, ವಿಕ್ರಮ್ ಸೂರಿ ಹಾಗೂ ಹರೀಶ್ ಭಟ್ ಹಾಡುಗಳನ್ನು ಬರೆದಿದ್ದಾರೆ. ಚೈತ್ರ, ವ್ಯಾಸರಾಜ ಸೋಸಲೆ, ಸಿದ್ಧಾರ್ಥ್ ಬೆಳ್ಮಣ್ಣು, ನಕುಲ್ ಅಭಯಂಕರ್ ಹಾಗೂ ಹರೀಶ್ ಭಟ್ 'ಚೌಕಬಾರ'ದ ಹಾಡುಗಳನ್ನು ಹಾಡಿದ್ದಾರೆ. ರವಿರಾಜ್ ಛಾಯಾಗ್ರಹಣವಿರುವ ಈ ಚಿತ್ರಕ್ಕೆ ಶಿಧರ್ ಅವರ ಸಂಕಲನವಿದೆ.

## ಈ ವಾರ 'ಶುಗರ್‌ಲೆಸ್' ಸಂದೇಶ

ಸಕ್ಕರೆ ಖಾಯಿಲೆ ಬಗ್ಗೆ ಜನರಲ್ಲಿರುವ ತಪ್ಪು ಕಲ್ಪನೆಯನ್ನು ಹಾಸ್ಯಮಿಶ್ರಿತ ಕಥಾಹಂದರದೊಂದಿಗೆ ಹೇಳುತ್ತಲೇ ಕೊನೆಗೊಂದು ಸಂದೇಶ ಹೇಳುವ ಚಿತ್ರ 'ಶುಗರ್‌ಲೆಸ್'. 'ಡಾಟರ್ ಆಫ್ ಪಾರ್ವತಮ್ಮ' ನಿರ್ಮಾಪಕ ಶಶಿಧರ ಕೆ.ಎಂ. ಕಥೆ, ಚಿತ್ರಕಥೆ ಬರೆದು ಮೊದಲ ಬಾರಿಗೆ ನಿರ್ದೇಶಿಸಿರುವ ಈ ಚಿತ್ರ ಇಂದಿನಿಂದ ರಾಜ್ಯವೇ ಅಲ್ಲದೆ ವಿದೇಶಗಳಲ್ಲೂ ಸಹ ಬಿಡುಗಡೆಯಾಗಲಿದೆ. ಶಶಿಧರ್ ಸ್ಟುಡಿಯೋಸ್ ಪ್ರೊಡಕ್ಷನ್ ಮೂಲಕ ದಿವ್ಯ ಶಶಿಧರ್ ಅವರು ನಿರ್ಮಿಸಿರುವ ಈ ಚಿತ್ರದ ಸಹನಿರ್ಮಾಪಕರಾಗಿ ವಿಜಯಲಕ್ಷ್ಮಿ ಕೃಷ್ಣೇಗೌಡ ಸಾಥ್ ನೀಡಿದ್ದಾರೆ. ಗಾಂಧಿನಗರದಲ್ಲಿ ಸಾಕಷ್ಟು ಕುತೂಹಲ ಹುಟ್ಟು ಹಾಕಿರುವ ಈ ಚಿತ್ರದಲ್ಲಿ ಸಕ್ಕರೆ ಖಾಯಿಲೆ ಬಗ್ಗೆ ಸಮಾಜಕ್ಕೆ ಅತ್ಯವಶ್ಯಕ ಉತ್ತಮ ಸಂದೇಶವನ್ನು ನೀಡಲಾಗಿದೆ. 'ಶುಗರ್‌ಲೆಸ್' ಚಿತ್ರಕ್ಕೆ ಲವಿತ್ ಅವರ ಛಾಯಾಗ್ರಹಣ, ಅನೂಪ್ ಸೀಳನ್ ಅವರ ಸಂಗೀತ ಸಂಯೋಜನೆ ಇದ್ದು, ಡಾ॥ ವಿ.ನಾಗೇಂದ್ರಪ್ರಸಾದ್ ಸಾಹಿತ್ಯ ರಚಿಸಿದ್ದಾರೆ. ಗುರುಕಶ್ಯಪ್ ಸಂಭಾಷಣೆಗಳನ್ನು ಹೆಣೆದಿದ್ದಾರೆ. ಈ ಚಿತ್ರಕ್ಕೆ ಕರ್ನಾಟಕದಾದ್ಯಂತ ನಲವತ್ತೈದು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದ್ದು ಪೃಥ್ವಿ ಅಂಬಾರ್ ಹಾಗೂ ಬಿಗ್ಬಾಸ್ ಖ್ಯಾತಿಯ ಪ್ರಿಯಾಂಕ ತಿಮ್ಮೇಶ್ ನಾಯಕ, ನಾಯಕಿ ಪಾತ್ರ ನಿರ್ವಹಿಸಿದ್ದಾರೆ. ಉಳಿದಂತೆ ಹಿರಿಯ ನಿರ್ದೇಶಕರಾದ ಎಸ್.ನಾರಾಯಣ್ ಅವರು ಡಾಕ್ಟರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದತ್ತಣ್ಣ, ರಘು ರಾಮನಕೊಪ್ಪ, ಧರ್ಮಣ್ಣ ಕಡೂರ್, ನವೀನ್ ಡಿ.ಪಡೀಲ್, ಗಿರೀಶ್‌ಜತ್ತಿ, ಹೊನ್ನವಳ್ಳಿ ಕೃಷ್ಣ, ಮಾಲತಿ ಮುಂತಾದವರು ಅಭಿನಯಿಸಿದ್ದಾರೆ. ಎಲ್ಲರಿಗೂ ತಿಳಿದಿರುವಂತೆ ಸಕ್ಕರೆ ಖಾಯಿಲೆ ಬಂದರೂ ಅದನ್ನು ನಿಗ್ರಹಿಸಿ ಹೇಗೆ ಸುಖ ಜೀವನ ನಡೆಸಬಹುದು ಎಂದು ಈ ಚಿತ್ರದ ಮೂಲಕ ಹೇಳಲಾಗಿದೆ. ಪ್ರಪಂಚದಲ್ಲಿ ಬಹುತೇಕ ಸಂಖ್ಯೆಯ ಮಧುಮೇಹಿಗಳಿದ್ದಾರೆ. ಆದರೆ, ಈ ವಿಷಯದ ಮೇಲೆ ಈವರೆಗೆ ಯಾವುದೇ ಸಿನಿಮಾ ನಿರ್ಮಾಣವಾಗಿಲ್ಲ. ಅಲ್ಲದೆ, ಯಾವಾಗಲೂ ಕಂಟೆಂಟ್ ಚಲನಚಿತ್ರಗಳನ್ನು ಬೆಂಬಲಿಸುವ ಪ್ರೇಕ್ಷಕರಿಗೆ ಶುಗರ್‌ಲೆಸ್ ಸಿನಿಮಾ ಖಂಡಿತ ಇಷ್ಟವಾಗುತ್ತದೆ ಎಂದು ಚಿತ್ರತಂಡ ನಂಬಿಕೆ ಇಟ್ಟುಕೊಂಡಿದೆ.

## ಶಿಕ್ಷಣದ ಮಹತ್ವ ಹೇಳುವ 'ಅಂಗೈಲಿ ಅಕ್ಷರ'

ತಾಯಿಯಿಂದ ದೂರಾದ ಬಡ ಕುಟುಂಬದ ಹುಡುಗನ ಶಿಕ್ಷಣದ ಹಾದಿ, ತಾಯಿ ಮಗನ ನಡುವಿನ ಬಾಂಧವ್ಯದ ಕಥೆಯ ಜೊತೆಗೆ ಮಾನವೀಯ ಮೌಲ್ಯಗಳನ್ನು ಹೇಳುವ, ಸಾಮಾಜಿಕ ಅರಿವು ಮೂಡಿಸುವ ಚಿತ್ರ 'ಅಂಗೈಲಿ ಅಕ್ಷರ. ಈ ಶುಕ್ರವಾರ ಬಿಡುಗಡೆಯಾಗುತ್ತಿರುವ ಫ್ರೆಂಡ್‌ಷಿಪ್,ಫ್ಯಾಮಿಲಿ ಸೆಂಟಿಮೆಂಟ್ ಹಾಗೂ ಕಾಮಿಡಿಯಂತಹ ಮನರಂಜನಾತ್ಮಕ ಅಂಶಗಳಿರುವ ಈ ಚಿತ್ರಕ್ಕೆ ಕ್ಯಾಬ್ ಡ್ರೈವರ್ ಆದ ಸಿದ್ದರಾಜು ಹೆಚ್. ಕಾಳೇನಹಳ್ಳಿ ಕಥೆ ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ನಿರ್ದೇಶಿಸಿದ್ದಾರೆ.

ಬಾಲ್ಯದಲ್ಲೇ ತಂದೆ ತಾಯಿ ಕಳೆದುಕೊಂಡ ಮಕ್ಕಳು ತಮ್ಮ ವಿದ್ಯಾಭ್ಯಾಸದ ಜೊತೆಗೆ ಹೇಗೆ ಜೀವನ ರೂಪಿಸಿಕೊಳ್ಳಬೇಕೆಂಬುದನ್ನು ಹೇಳುವ ಚಿತ್ರವಿದು. ಎಲ್ಲಾ ತಂದೆ ತಾಯಂದಿರು ಮಕ್ಕಳಿಗೆ ತೋರಿಸಲೇಬೇಕಾದ, ಪ್ರತಿಯೊಬ್ಬ ವಿದ್ಯಾರ್ಥಿಯೂ ನೋಡಲೇಬೇಕಾದ ಮಕ್ಕಳ ಶೈಕ್ಷಣಿಕ, ಸಾಮಾಜಿಕ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುವ ಈ ಚಿತ್ರವನ್ನು ಹುಲಿಯೂರು ದುರ್ಗ, ಮಾಗಡಿ ತಾವರೆಕೆರೆ, ದೊಡ್ಡಬಳ್ಳಾಪುರ, ಘಾಟಿ, ಬೆಂಗಳೂರು ನಗರ ಸುತ್ತಮುತ್ತ ಚಿತ್ರೀಕರಿಸಲಾಗಿದೆ. ಈ ಚಿತ್ರದಲ್ಲಿ ಬಾಲನಟರಾಗಿ ತನುಷರಾಜ್, ಕಾನಿಷ್ಕ ರವಿ ದೇಸಾಯಿ, ಅಮೋಘ ಕೃಷ್ಣ, ಪುಟಾಣಿ ಪಂಟ್ರು ಮಧುಸೂದನ್, ಬೇಬಿ ಅಂಕಿತ ಜಯರಾಮ್, ತನುಶ್ರೀ, ಬೇಬಿಶ್ರೀ ಹಾಗೂ ಜೀವನ್ ಗೌಡ, ಚೇತನ್ ಅಲ್ಲದೆ ಚಂದ್ರಪ್ರಭಾ, ಗೋವಿಂದೇಗೌಡ, ವಿನೋದ್ ಆನಂದ್, ಮೋನಿಕಾ, ಜೊತೆಗೆ ಶಿಕ್ಷಣ ಸಚಿವರಾಗಿ ಮಹೇಂದ್ರ ಮುಣ್ಣೋತ್ ನಟಿಸಿದ್ದಾರೆ.

## 'ಶಾಲಿವಾಹನ ಶಕೆ' ಟೈಟಲ್ ಪೋಸ್ಟರ್ ಬಿಡುಗಡೆ

'ಒಂದ್ ಕಥೆ ಹೇಳ್ಲಾ' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಬಂದ ನಿರ್ದೇಶಕ ಕಂ ನಟ ಗಿರೀಶ್ ಜಿ. ಅವರ ನಿರ್ದೇಶನದ ಮತ್ತೊಂದು ಚಿತ್ರ 'ಶಾಲಿವಾಹನ ಶಕೆ'. ಮೊದಲ ಸಿನಿಮಾದಲ್ಲಿ ತಮ್ಮದೆ ಆದ ಶೈಲಿಯಲ್ಲಿ ಕಥೆ ಹೇಳುವ ಮೂಲಕ ತಮ್ಮ ಪ್ರತಿಭೆಯನ್ನು ತೋರಿಸಿಕೊಟ್ಟಿದ್ದ ಗಿರೀಶ್, ಈ ಬಾರಿಯೂ ಅಂತಹದ್ದೇ ಒಂದು ಹೊಸಬಗೆಯ ಹಾಗೂ ವಿಶೇಷ ಕಥೆಯೊಂದಿಗೆ ಶಾಲಿವಾಹನ ಶಕೆ ಸಿನಿಮಾ ಮೂಲಕ ಬರುತ್ತಿದ್ದಾರೆ. ಅದರ ಮೊದಲ ಭಾಗವಾಗಿ ಚಿತ್ರದ ಟೈಟಲ್ ಮೋಷನ್ ಪೋಸ್ಟರ್ ರಿಲೀಸ್ ಆಗಿದೆ. ಡಿಜಿಟಲ್ ಸ್ಕೆಚ್ ಆರ್ಟ್ ಮೂಲಕ ತಯಾರಿಸಿರುವ ಮೋಷನ್ ಪೋಸ್ಟರ್ ಸಿನಿಮಾ ಮೇಲಿನ ನಿರೀಕ್ಷೆಯನ್ನು ಇಮ್ಮಡಿಗೊಳಿಸಿದೆ. ಟೈಮ್ ಥ್ರಿಲ್ಲರ್ ಕಥಾನಕ ಹೊಂದಿರುವ ಈ ಸಿನಿಮಾ ಕನ್ನಡ ಇಂಡಸ್ಟ್ರಿ ಮಟ್ಟಿಗೆ ಹೊಸತನದಿಂದ ಕೂಡಿದೆ. ಸದ್ಯ ಶೂಟಿಂಗ್ ಮುಗಿಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿದೆ.

ಗಿರೀಶ್ ಜಿ ಕಥೆ ಬರೆದು ನಿರ್ದೇಶನ, ಈ ಸಿನಿಮಾಗೆ ಶೈಲೇಶ್ ಕುಮಾರ್ ಎಂ.ಎಂ ಬಂಡವಾಳ ಹೂಡಿದ್ದು, ಅರುಣ್ ಸುರೇಶ್ ಛಾಯಾಗ್ರಹಣ, ಉಜ್ವಲ್ ಚಂದ್ರ ಸಂಕಲನ, ಕಾರ್ತಿಕ್ ಭೂಪತಿ-ಹರಿ ಅಜಯ್ ಸಂಗೀತ, ಪ್ರಶಾಂತ್ ವೈಎನ್ ಸಂಭಾಷಣೆ ಸಿನಿಮಾಕ್ಕಿದೆ. ತಾರಾಬಳಗದ ಜೊತೆ ರಿಲೀಸ್ ಡೇಟ್ ಅನೌನ್ಸ್ ಮಾಡಲಿದೆ.



## ಕಿಚ್ಚ ಸುದೀಪ್ ಮೆಚ್ಚಿದ 'ಜೋಗುಳ ಗೀತೆ'



ಆರಂಭದಿಂದಲೂ ತನ್ನ ಸಾಕಷ್ಟು ವಿಶೇಷತೆಗಳು, ಟೀಸರ್, ಲುಕ್ ಮೂಲಕವೇ ಸಿನಿಪ್ರೇಮಿಗಳನ್ನು ಹೊಸದೊಂದು ಲೋಕಕ್ಕೆ ಕರೆದುಕೊಂಡು ಹೋಗುತ್ತಿರುವ ಚಿತ್ರ 'ವಿಕ್ರಾಂತ್‌ರೋಣ'. ಕಿಚ್ಚ ಸುದೀಪ್ ಈವರೆಗೂ ಮಾಡಿರದಂಥ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿರುವ ಈ ಚಿತ್ರವು ಈಗ ಮತ್ತೊಂದು ಅಚ್ಚರಿಗೆ ಕಾರಣವಾಗಿದೆ. ಕೋವಿಡ್ ನಂತರ ಮೊದಲು ಶೂಟಿಂಗ್ ಶುರು ಮಾಡುವ ಮೂಲಕ ಇತರೆ ನಿರ್ಮಾಪಕರಿಗೆ ಇನ್ನು ತಾವೂ ಮುಂದುವರೆಯಬಹುದು ಎಂಬ ಧೈರ್ಯ ನೀಡಿದ್ದ ನಿರ್ಮಾಪಕ ಜಾಕ್‌ಮಂಜು, ನೂರಾರು ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಚಿತ್ರ ಇದಾಗಿದೆ. ಇನ್ನೇನು ಬಿಡುಗಡೆಗೆ ದಿನಗಣನೆ ಆರಂಭವಾಗಿರುವಾಗಲೇ ಚಿತ್ರತಂಡ ನೋಡುಗರ ಕಣ್ಮನತಣಿಸುವ 'ಜೋಗುಳ ಗೀತೆ'ಯ ಲಿರಿಕಲ್ ವೀಡಿಯೋವನ್ನೂ ಬಿಡುಗಡೆ ಮಾಡಿದೆ. ಈ ಒಂದು ಹಾಡಿಗಾಗಿಯೇ ಕೋಟಿ ರೂ ವೆಚ್ಚದ ವಿಶೇಷ ಸೆಟ್ಟನ್ನು ಜಾಕ್‌ಮಂಜು ಹಾಕಿಸಿ, ಚಿತ್ರೀಕರಣ ನಡೆಸಿದ್ದಾರೆ. ಅಲ್ಲದೆ ಬಹಳ ದಿನಗಳ ನಂತರ ಕನ್ನಡದಲ್ಲಿ ಒಂದೊಳ್ಳೆ ಜೋಗುಳ ಗೀತೆಯನ್ನು 'ವಿಕ್ರಾಂತ್‌ರೋಣ' ಚಿತ್ರದ ಮೂಲಕ ಕನ್ನಡಿಗರು ಸವಿಯುವಂತಾಗಿದೆ. ನಾಯಕ ಸುದೀಪ್ ಬಹಳ ಇಷ್ಟಪಟ್ಟಂಥ ಗೀತೆಯೂ ಇದಾಗಿದ್ದು, ಇಲ್ಲಿ ಸುದೀಪ್ ಅವರು ಮಗುವೊಂದನ್ನು ರಮಿಸುತ್ತ ಹಾಡುವಾಗ ಬರುವ ಪದಗಳನ್ನು ಅಷ್ಟೇ ಅರ್ಥಗರ್ಭಿತವಾಗಿ ಅನೂಪ್‌ಭಂಡಾರಿ ಅವರು ಮುತ್ತಿನ ಮಣಿಯಂತೆ ಪೋಣಿಸಿದ್ದಾರೆ. ಅದಕ್ಕೆ ತಕ್ಕಂತೆ ವಿಜಯಪ್ರಕಾಶ್ ಆ ಹಾಡಿಗೆ ನೀಡಿರುವ ಕಂಠ, ಅಜನೀಶ್ ಲೋಕನಾಥ್ ಸಂಯೋಜಿಸಿರುವ ಇಂಪಾದ ಸಂಗೀತ ಕೇಳುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ. ಸಿ.ಆರ್.ಬಾಬಿ ಅವರೂ ಇಲ್ಲಿ ಮ್ಯೂಸಿಕ್‌ಗೆ ಕೈಜೋಡಿಸಿದ್ದಾರೆ. ಕಥೆಯ ಹೃದಯಭಾಗದಂತಿರುವ ಈ ಹಾಡು ಅನ್ಯಭಾಷಿಗರೂ ಸಹ ತಲೆದೂಗುವಂತೆ ಮೋಡಿ ಮಾಡಿದೆ.

ಕಿಚ್ಚ ಸುದೀಪ್, ನಿರೂಪ್‌ಭಂಡಾರಿ, ನೀತಾ ಅಶೋಕ್, ಬಾಲಿವುಡ್ ಬೆಡಗಿ ಜಾಕ್ವೆಲಿನ್ ಫರ್ನಾಂಡೀಸ್ ಮುಂತಾದವರು ನಟಿಸಿರುವ ಈ ಚಿತ್ರವು ಕನ್ನಡ, ಹಿಂದಿ, ತೆಲುಗು, ತಮಿಳು, ಮಲಯಾಳಂ ಸೇರಿದಂತೆ ಹಲವಾರು ಭಾಷೆಗಳಲ್ಲಿ ನಿರ್ಮಾಣವಾಗುವ ಮೂಲಕ ಪ್ಯಾನ್ ಇಂಡಿಯಾ ಪಟ್ಟಕ್ಕೇರಿದೆ. ವಿಕ್ರಾಂತ್‌ರೋಣ ಜುಲೈ 28ರಂದು ಪ್ರಪಂಚದಾದ್ಯಂತ ಅಲ್ಲದೆ ದೂರದ ಗಲ್ಫ್ ರಾಷ್ಟ್ರಗಳಲ್ಲೂ ಸಹ ಬಿಡುಗಡೆಯಾಗುತ್ತಿದೆ. ಕಿಚ್ಚ ಕ್ರಿಯೇಶನ್ಸ್ ಹಾಗೂ ಜೀ ಸ್ಟುಡಿಯೋಸ್ ಅರ್ಪಿಸುವ ಈ ಚಿತ್ರವನ್ನು ಶಾಲಿನಿ ಆರ್ಟ್ಸ್ ಮೂಲಕ ಜಾಕ್‌ಮಂಜು ಅವರು ಯಾವುದೇ ಬಾಲಿವುಡ್ ಚಿತ್ರಕ್ಕೂ ಕಮ್ಮಿಯಿಲ್ಲದಂತೆ ನಿರ್ಮಿಸಿದ್ದಾರೆ.

## ಸಿನಿಪದಬಂಧ-015

ಆಜ಼ಾದ್ ಜಿ. ಆಚಾರ್ಯ 6361429085

| | | | | | | | | | | |
|---|---|---|---|---|---|---|---|---|---|---|
| 1 | | | 2 | | 3 | | | | | 4 |
| | | | | | | | 5 | | | |
| | | | | | | | | | | |
| | | 6 | | | | | 7 | | 8 | |
| | 9 | | | | | | | | | |
| 10 | | | 11 | | | 12 | | | 13 | |
| | | | | | 14 | | | | | |
| 15 | | | | | | | 16 | | | 17 |
| | | | | | | | | | | |
| 18 | | | | | | | | | | |
| | | | | 19 | | | | | | |

ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

**ಎಡದಿಂದ ಬಲಕ್ಕೆ**

1. ಸುನೀಲ್ ಕುಮಾರ್ ದೇಸಾಯಿ ಚಿತ್ರದಲ್ಲಿ ಅನಂತನಾಗ್ ಚೆಸ್ ಆಟಗಾರ (7)
5. ರವಿಚಂದ್ರನ್-ನಮಿತಾ ಚಿತ್ರ (4)
6. ಗಟ್ಟಿಮೇಳ ಚಿತ್ರದ ನಾಯಕಿ (2)
7. ಏಳು ಹೆಜ್ಜೆಗಳ ಅನುಬಂಧಕ್ಕೆ ಅಂಬರೀಶ್ ನಾಯಕ (4)
10. ಕೆಎಸ್‌ಆರ್ ದಾಸ್ ನಿರ್ದೇಶನದಲ್ಲಿ ಖುಷ್ಬು-ವಿಷ್ಣುವರ್ಧನ್ (2)
11. ವಿಷ್ಣುವರ್ಧನ್-ರೋಜಾ-ಪ್ರೇಮ ಅಭಿನಯದ ಚಿತ್ರ ತಿರುಗಿದೆ (2)
12. ಸತ್ಯ ನಿರ್ದೇಶನದಲ್ಲಿ ದರ್ಶನ್ ಆಕ್ಷನ್ ಚಿತ್ರ (2)
13. --ಶಿಷ್ಯರು ಹಾಸ್ಯಪ್ರಧಾನ ಚಿತ್ರ (2)
15. ಶಶಿಕುಮಾರ್ ಸುಧಾರಾಣಿ ಹಾಡಿದ ನೂತನ ಸ್ವರ (4)
16. --ಸಾರ್ವಭೌಮ ಪುನೀತ್ ಚಿತ್ರ (2)
18. ---- ನಿನಗಾಗಿ, ರಾಮಾಚಾರಿ ಚಿತ್ರದ ಗೀತೆ (4)
19. ಟೈಗರ್ ಪ್ರಭಾಕರ್-ಮಂಜುಳಾ-ಪದ್ಮಪ್ರಿಯಾ ನಟಿಸಿದ ಚಿತ್ರ (7)

**ಮೇಲಿನಿಂದ ಕೆಳಕ್ಕೆ**

1. ಟೈಗರ್ ಪ್ರಭಾಕರ್ ನಳಿನಿ ಜೋಡಿಯ 1986ರ ಚಿತ್ರ (4)
2. ಜಟಕಾ ಕುದುರೆ ಹತ್ತಿ... ಪ್ರಸಿದ್ಧ ಗೀತೆ ಈ ಚಿತ್ರದ್ದು. (8)
3. ಪಂಡರಿಬಾಯಿ-ಅಶ್ವತ್ಥ್ ಅಭಿನಯದ 1972ರ ಚಿತ್ರ (5)
4. ರವಿಚಂದ್ರನ್-ರಾಧಿಕಾ ಅಭಿನಯದ ಚಿತ್ರ (4)
7. ಶಿವರಾಮ ಕಾರಂತರ ಕಾದಂಬರಿ ಆಧಾರಿತ ಚಿತ್ರ (8)
8. ಖ್ಯಾತ ಖಳನಾಯಕ ----ಶ್ರೀನಿವಾಸ್ ಶೀರ್ಷಾಸನ ಹಾಕಿದ್ದಾರೆ (4)
9. ಡಾ.ರಾಜ್-ಲೀಲಾವತಿ ಉದಯಕುಮಾರ್ ಪೌರಾಣಿಕ ಚಿತ್ರ (4)
14. ಶ್ರೀಧರ್-ಸಿತಾರ-ಭಾಗ್ಯಶ್ರೀ ಅಭಿನಯಿಸಿದ 1998ರ ಚಿತ್ರ (5)
15. ಟೈಗರ್ ಪ್ರಭಾಕರ್-ಲಕ್ಷ್ಮೀ-ವಿನೋದ್ ಆಳ್ವಾ ಅಭಿನಯದ 1989ರ ಚಿತ್ರ (4)
17. ಜಗ್ಗೇಶ್-ಲೋಕೇಶ್ ಅಭಿನಯದ ಕಹಿ-ಸಿಹಿ ಎಂಬರ್ಥದ ಸಿನಿಮಾ (4)



### ಸಿನಿ ಪದಬಂಧ 014ರ ಸರಿ ಉತ್ತರ

| | | | | | | | | | | |
|---|---|---|---|---|---|---|---|---|---|---|
| ದಾ | ರಿ | ತ | ಪ್ಪಿ | ದ | ಮ | ಗ | | | | |
| ಕ್ಷ | | | | | | ಜ | ಯ | ಸಿಂ | ಹ | |
| ಯಿ | | | ನಂ | ದಾ | ದೀ | ಪ | | | | ಪ |
| ಣಿ | ಗಿ | ನಾ | | | | ತಿ | | ಕ | | ರಿ |
| | | ಗ | ಜ | | ಪೊ | | | ನ | | ಚ |
| ಕ | ಬೀ | ರ | | ಟ | ಗ | ರು | | ಕ | ರಿ | ಯ |
| ಳ್ಳ | | ಹಾ | | | ರು | | ದಾ | ದಾ | | |
| ಕು | | ವು | | ಮ | | | | ಸ | ಮ | ರ |
| ಳ್ಳ | | | | ದ | ಳ | ವಾ | ಯಿ | | | ಣ |
| | ಹೊ | ಸ | ರಾ | ಗ | | | | | | ರಂ |
| | | | | ಜ | ಗ | ಮೆ | ಚ್ಚಿ | ದ | ಮ | ಗ |

ವಿಜೇತರು: ವಿರಾಟ್.ಜಿ.ಆರ್
ನಂ.2715/2ಎ, 2ನೇ ಮೇನ್,
ವಿ.ವಿ.ಪುರಂ, ಮೈಸೂರು ಜಿಲ್ಲೆ

# ಆರೋಗ್ಯ ಇಲಾಖೆಯ ಗುತ್ತಿಗೆ, ಹೊರ ಗುತ್ತಿಗೆ ನೌಕರರ ವೇತನ ಹೆಚ್ಚಳ ಯತ್ನ

## ವಿಮೆ ವಿಸ್ತರಣೆಗೂ ಕ್ರಮ



ಬೆಂಗಳೂರು, ಜು.7(ಕೆಎಂಶಿ)– ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಗುತ್ತಿಗೆ–ಹೊರಗುತ್ತಿಗೆ ನೌಕರರ ವೇತನವನ್ನು ಹೆಚ್ಚಳ ಮಾಡಲು ಪ್ರಯತ್ನ ಮಾಡಲಾಗುತ್ತಿದೆ. ಜೊತೆಗೆ ಆರೋಗ್ಯ ವಿಮೆ ವಿಸ್ತರಿಸಲು ಕೂಡ ಸರ್ಕಾರ ಕ್ರಮ ಕೈಗೊಂಡಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ತಿಳಿಸಿದ್ದಾರೆ. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮುಷ್ಕರ ನಡೆಸುತ್ತಿರುವ ಗುತ್ತಿಗೆ–ಹೊರಗುತ್ತಿಗೆ ನೌಕರರನ್ನು ಭೇಟಿಯಾಗಿ ಚರ್ಚೆ ನಡೆಸಿದ ಬಳಿಕ ಮಾತನಾಡಿದ ಅವರು, ಸರ್ಕಾರದ ಇತಿಮಿತಿಯೊಳಗೆ ಎಲ್ಲಾ ಬೇಡಿಕೆಗಳನ್ನು ಶೀಘ್ರದಲ್ಲಿ ಈಡೇರಿಸಲಾಗುವುದು. ಶ್ರೀನಿವಾಸಾಚಾರಿಯವರ ವರದಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದು ಹೇಳಿದರು. ಗುತ್ತಿಗೆ ಮತ್ತು ಹೊರ ಗುತ್ತಿಗೆ ನೌಕರರು ಖಾಯಂ ನೌಕರರಿಗೆ ಕೊಡುವಷ್ಟೇ ವೇತನವನ್ನು ನಮಗೂ ಕೊಡಬೇಕು ಎಂದು ಬೇಡಿಕೆ ಇಟ್ಟಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ 49 ಕಾರ್ಯಕ್ರಮಗಳನ್ನು ನಿರ್ದಿಷ್ಟ ಸಮಯದ ತನಕ ಮಾಡಲಿದೆ. ಹೀಗಾಗಿ ಅವರನ್ನು ಖಾಯಂ ನೌಕರರನ್ನಾಗಿ ಮಾಡಿಕೊಳ್ಳಲು ಅಡಚಣೆಗಳಿವೆ. ಅಷ್ಟೇ ಅಲ್ಲದೆ, ಖಾಯಂ ನೌಕರರಂತೆ ಸಮಾನ ವೇತನ ಕೊಡಲು ಸಾಧ್ಯವಾಗುತ್ತಿಲ್ಲ. ಆದರೆ ಈಗಿರುವ ವೇತನವನ್ನು ಹೆಚ್ಚಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

# ಪ್ರಧಾನಿ ಬೋರಿಸ್ ಜಾನ್ಸನ್ ರಾಜೀನಾಮೆ

## ಭಾರತ ಮೂಲದ ರಿಷಿ ಸುನಕ್ ಇಂಗ್ಲೆಂಡ್ ಪ್ರಧಾನಿ ಹುದ್ದೆಗೆ ಪ್ರಬಲ ಪ್ರತಿಸ್ಪರ್ಧಿ



ಲಂಡನ್: ಅತೀವ ರಾಜಕೀಯ ಬಿಕ್ಕಟ್ಟು ಹಾಗೂ ಸಚಿವರ ಸರಣಿ ರಾಜೀನಾಮೆ ಬೆನ್ನಲ್ಲೇ ಪ್ರಧಾನಿ ಹುದ್ದೆಗೆ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ರಾಜೀನಾಮೆ ನೀಡಿದ್ದು, ಮುಂದಿನ ಪ್ರಧಾನಿ ಹುದ್ದೆ ರೇಸ್‌ನಲ್ಲಿ ಭಾರತ ಮೂಲದ ರಿಷಿ ಸುನಕ್ ಸೇರಿದಂತೆ ಹಲವರ ಹೆಸರು ಮುಂಚೂಣಿಯಲ್ಲಿದೆ. ಅಕ್ಟೋಬರ್‌ನಲ್ಲಿ ನಿಗದಿಯಾಗಿರುವ ಕನ್ಸರ್ವೇಟಿವ್ ಪಕ್ಷದ ಸಮಾವೇಶದ ವೇಳೆಗೆ ಹೊಸ ನಾಯಕನನ್ನು ಆಯ್ಕೆ ಮಾಡುವ ಪ್ರಕ್ರಿಯೆಯು ಪೂರ್ಣಗೊಳ್ಳುವವರೆಗೆ 58 ವರ್ಷದ ಜಾನ್ಸನ್ ಉಸ್ತುವಾರಿ ಪ್ರಧಾನಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಅವರು ತಮ್ಮ ರಾಜೀನಾಮೆಯನ್ನು ಇಂದು ಔಪಚಾರಿಕವಾಗಿ ಘೋಷಿಸಿದ್ದು, ನಂತರ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಜಾನ್ಸನ್ ರಾಜಿನಾಮೆ ಬೆನ್ನಲ್ಲೇ ಹಲವು ಪ್ರಮುಖ ಸಂಭಾವ್ಯ ಉತ್ತರಾಧಿಕಾರಿ ಗಳನ್ನು ಸೂಚಿಸಲಾಗಿದೆಯಾದರೂ, ಯಾವುದೇ ಸ್ಪಷ್ಟವಾದ ಹೆಸರುಗಳು ಅಂತಿಮವಾಗಿಲ್ಲ.



ಮೈಸೂರಿನ ಶ್ರೀರಾಂಪುರದಲ್ಲಿರುವ ಅಲ್ಫಾ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಇಂಟರ್‌ನ್ಯಾಷನಲ್ ಮಾಂಟೆಸ್ಸರಿ ಅಂಡ್ ಕಿಂಡರ್‌ಗಾರ್ಟನ್ ಟ್ರೈನಿಂಗ್ ಅಕಾಡೆಮಿ ವತಿಯಿಂದ ತರಬೇತಿ, ಪುನಶ್ಚೇತನ ಮತ್ತು ಸೇರ್ಪಡೆ ಕಾರ್ಯಕ್ರಮ ನಡೆಯಿತು. ಹೊಸದಾಗಿ ಸೇರ್ಪಡೆಗೊಂಡ ನೂರಾರು ಪ್ರಶಿಕ್ಷಣಾರ್ಥಿಗಳು ಪ್ರಿ ಸ್ಕೂಲ್ ಶಿಕ್ಷಕರಾಗಲು ಮತ್ತು ಮಕ್ಕಳ ಸಮುದಾಯಕ್ಕೆ ನಿಷ್ಠೆಯಿಂದ ಸೇವೆ ಸಲ್ಲಿಸುವುದಾಗಿ ಪ್ರತಿಜ್ಞೆ ಮಾಡಿದರು.

# ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು. ಜು.7– ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ 2022–23ನೇ ಸಾಲಿನ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿಯನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದ್ದು, ಜು.15 ರೊಳಗಾಗಿ ಅರ್ಜಿ ಸಲ್ಲಿಸಲು ತಿಳಿಸಿದೆ. ಆನ್‌ಲೈನ್ ಪೋರ್ಟಲ್ http://www.school education.kar.nic.in ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೈಸೂರಿನ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್‌ಗೆ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಎರಡು ಎಕರೆ ಭೂಮಿ ಮಂಜೂರು

ಮೈಸೂರು, ಜು.7(ಎಸ್‌ಬಿಡಿ)– ಖ್ಯಾತ ಶಿಲ್ಪಿ ಮೈಸೂರಿನ ಅರುಣ್ ಯೋಗಿರಾಜ್ ಅವರಿಗೆ ಕೈಗಾರಿಕಾ ಪ್ರದೇಶದಲ್ಲಿ 2 ಎಕರೆ ಭೂಮಿ ಮಂಜೂರು ಮಾಡುವ ಮೂಲಕ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಅವರ ಕಲೆಗೆ ಪ್ರೋತ್ಸಾಹ ನೀಡಿದ್ದಾರೆ.

ಮೈಸೂರಿನ ಶ್ರೀ ಜಯಚಾಮರಾಜ ಒಡೆಯರ್ ಪ್ರತಿಮೆ, ಶ್ರೀ ರಾಮಕೃಷ್ಣ ಪರಮಹಂಸರ ಪ್ರತಿಮೆ, ಪುರಭವನ ಎದುರಿನ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆಯನ್ನು ನಿರ್ಮಿಸುವ ಮೂಲಕ ಸ್ಥಳೀಯವಾಗಿ ಪ್ರಸಿದ್ಧಿ ಪಡೆದಿದ್ದ ಶಿಲ್ಪಿ ಯೋಗಿರಾಜ್, ಕೇದಾರನಾಥದಲ್ಲಿ ಪ್ರತಿಷ್ಠಾಪನೆಯಾಗಿರುವ ಶ್ರೀ ಶಂಕರಾಚಾರ್ಯರ ಪ್ರತಿಮೆ ಪಡಿಮೂಡಿಸಿ, ಪ್ರಧಾನಿ ನರೇಂದ್ರ ಮೋದಿ ಅವರ ಪ್ರಶಂಸೆಗೆ ಪಾತ್ರರಾದರು. ಇವರ ಕಲಾ ನಿಪುಣತೆಗೆ ಮನಸೋತ ಪ್ರಧಾನಿ ಮೋದಿ, ಇಂಡಿಯಾ ಗೇಟ್ ಬಳಿ ಪ್ರತಿಷ್ಠಾಪಿಸಲು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆ ಕೆತ್ತನೆ ಜವಾಬ್ದಾರಿಯನ್ನೂ ವಹಿಸಿದ್ದಾರೆ. ಪರಿಣಾಮ ದೇಶ–ವಿದೇಶಗಳಲ್ಲೂ ಅರುಣ್ ಯೋಗಿರಾಜ್ ಕಲೆಗೆ ಮನ್ನಣೆ ವ್ಯಕ್ತವಾಗಿದೆ.

ಆದರೂ ನಗರದ ಚಾಮರಾಜ ಜೋಡಿ ರಸ್ತೆ ಹಾಗೂ ನ್ಯೂ ಸಯ್ಯಾಜಿ ರಾವ್ ರಸ್ತೆ ಸಂದಿಸುವ ಬಸವೇಶ್ವರ ವೃತ್ತದ ಬಳಿ ತಮ್ಮ ಮನೆ ಮುಂಭಾಗದ ಸ್ವಲ್ಪ ಜಾಗದಲ್ಲೇ ಶಿಲ್ಪ ಕೆತ್ತನೆ ಕಾರ್ಯ ನಡೆಸುತ್ತಿದ್ದಾರೆ. ಸ್ಥಳದ ಅಭಾವವಿರುವ ಕಾರಣ ಹೆಚ್ಚಿನ ಸಂಖ್ಯೆಯ ಶಿಲ್ಪಿಗಳು ಇಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ. ಹಾಗಾಗಿ ಕೈಗಾರಿಕಾ ಪ್ರದೇಶದಲ್ಲಿ ಸ್ಥಳಾವಕಾಶ ಕೋರಿ ಕೆಲ ವರ್ಷಗಳ ಹಿಂದೆಯೇ ಕೈಗಾರಿಕಾ ಇಲಾಖೆಗೆ ಅರ್ಜಿ ಹಾಕಿ, ಮನವಿ ಮಾಡಿದ್ದರು. ಆದರೆ ಈವರೆಗೂ ಯಾವುದೇ ಪ್ರಕ್ರಿಯೆ ಕಂಡು ಬಂದಿರಲಿಲ್ಲ. ಈ ಬಗ್ಗೆ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಅವರ ಗಮನಕ್ಕೆ ತಂದಿದ್ದರ ಪರಿಣಾಮ ಅವರು ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ 2 ಎಕರೆ ಜಾಗ ಮಂಜೂರಾತಿಗೆ ಆದೇಶಿಸಿದ್ದಾರೆ.



ಮೈಸೂರಿನ ಅಗ್ರಹಾರದಲ್ಲಿರುವ ಶಿಲ್ಪಿ ಅರುಣ್ ಯೋಗಿರಾಜ್ ಮನೆಗೆ ತಿಂಗಳ ಹಿಂದೆ ಭೇಟಿ ನೀಡಿದ್ದ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಅಲ್ಲಿನ ಆವರಣದಲ್ಲಿದ್ದ ಶಿಲ್ಪಾಕೃತಿಗಳನ್ನು ವೀಕ್ಷಿಸಿ ಮಾಹಿತಿ ಪಡೆದ ಸಂದರ್ಭ.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಶಿಲ್ಪಿ ಅರುಣ್ ಯೋಗಿರಾಜ್, ಕೇದಾರನಾಥದಲ್ಲಿ ಪ್ರಧಾನಿ ಮೋದಿ ಅವರು ಲೋಕಾರ್ಪಣೆಗೊಳಿಸಿದ ಶ್ರೀ ಶಂಕರಾಚಾರ್ಯರ ಪ್ರತಿಮೆ ನಿರ್ಮಿಸಿದ ಬಳಿಕ ನಮ್ಮ ಕಲೆಗೆ ಮನ್ನಣೆ ಹೆಚ್ಚಿದೆ. ಅಲ್ಲದೆ ನಮ್ಮ ಮೇಲೆ ನಂಬಿಕೆ ಇಟ್ಟು ಸುಭಾಷ್ ಚಂದ್ರಬೋಸ್ ಅವರ ಪ್ರತಿಮೆ ನಿರ್ಮಾಣದ ಜವಾಬ್ದಾರಿಯನ್ನೂ ನೀಡಿದ್ದಾರೆ. ನಾವು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ. ಇದರಿಂದ ಹೆಚ್ಚು ಶಿಲ್ಪಿಗಳಿಗೆ ಉದ್ಯೋಗಾವಕಾಶವಾಗುವುದಲ್ಲದೆ, ಕಲಾಕ್ಷೇತ್ರಕ್ಕೆ ಮತ್ತಷ್ಟು ಕೊಡುಗೆ ನೀಡಬಹುದು. ಈ ಉದ್ದೇಶದಿಂದ ಕೈಗಾರಿಕಾ ಪ್ರದೇಶದಲ್ಲಿ ಜಾಗ ನೀಡುವಂತೆ 2–3 ವರ್ಷದಿಂದ ಮನವಿ ಮಾಡಿ, ಆ ನಿಟ್ಟಿನಲ್ಲಿ ಪ್ರಯತ್ನ ಮಾಡಿದ್ದೆ. ಆದರೆ ಅದು ಸಾಕಾರವಾಗಿರಲಿಲ್ಲ. ತಿಂಗಳ ಹಿಂದೆ ಮೈಸೂರಿಗೆ ಬಂದಿದ್ದ ಸಚಿವ ಮುರುಗೇಶ್ ನಿರಾಣಿ ಅವರು ನಮ್ಮ ಮನೆಗೂ ಭೇಟಿ ನೀಡಿ, ಶಿಲ್ಪಗಳನ್ನು ನೋಡಿ, ಪ್ರಶಂಸಿಸಿದ್ದರು. ಆ ಸಂದರ್ಭದಲ್ಲಿ ಜಾಗದ ಅವಶ್ಯಕತೆ ಬಗ್ಗೆ ತಿಳಿಸಿದ್ದೆ. ಸದ್ಯ ಕೈಗಾರಿಕಾ ಪ್ರದೇಶದಲ್ಲಿ 2 ಎಕರೆ ಭೂಮಿ ಮಂಜೂರು ಮಾಡಿದ್ದಾರೆ ಎನ್ನುವುದು 2 ದಿನಗಳ ಹಿಂದೆಯಷ್ಟೇ ನನಗೆ ಗೊತ್ತಾಯಿತು ಎಂದು ತಿಳಿಸಿದರು.

# ಶಾಲೆ ಮುಂದಿನ ರಸ್ತೆಗೆ ಡಾಂಬರ್ ಹಾಕುವಂತೆ ಪ್ರಧಾನಿ ಮೋದಿಗೆ ಪತ್ರ ಬರೆದ ವಿದ್ಯಾರ್ಥಿ!

ಮೈಸೂರು, ಜು.7(ಎಂಕೆ)– ಶಾಲೆ ಎದುರಿನ ಗುಂಡಿ ಬಿದ್ದ ರಸ್ತೆಗೆ ಡಾಂಬರೀಕರಣ ಮಾಡಿಸುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ 7ನೇ ತರಗತಿ ವಿದ್ಯಾರ್ಥಿ ಪತ್ರ ಬರೆದಿದ್ದಾನೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯ 7ನೇ ತರಗತಿ 'ಬಿ' ಸೆಕ್ಷನ್ ವಿದ್ಯಾರ್ಥಿ ಶ್ರೇಯಸ್, ಪ್ರಧಾನಿಗಳಿಗೆ ಪತ್ರ ಬರೆದು ನಮ್ಮ ಶಾಲೆಯ ಎದುರು ಗುಂಡಿ ಬಿದ್ದಿರುವ ರಸ್ತೆಗೆ ಡಾಂಬರ್ ಹಾಕಿಸುವಂತೆ ಪತ್ರ ಬರೆದು ಮನವಿ ಮಾಡಿದ್ದಾನೆ.

ವಿಶ್ವಯೋಗ ದಿನಾಚರಣೆ ಅಂಗವಾಗಿ ಸ್ವಪ್ರತಿಷ್ಠೆ ಪ್ರದರ್ಶನ ಮಾಡಲು ಸ್ಥಳೀಯ ಜನಪ್ರತಿನಿಧಿಗಳು ನಗರದ ಪ್ರಮುಖ ರಸ್ತೆಗಳಿಗೆ ಮಾತ್ರ ಡಾಂಬರ್ ಹಾಕಿದ್ದು, ಬಹುತೇಕ ರಸ್ತೆಗಳನ್ನು ಕಡೆಗಣಿಸಿದ್ದಾರೆ. ಒಂದೆರಡು ರಸ್ತೆಗಳ ಡಾಂಬರೀಕರಣಕ್ಕೆ ಕೋಟ್ಯಾಂತರ ರೂ. ಖರ್ಚಾಗಿದೆ ಎನ್ನುವ ಮೂಲಕ ವಂಚಿಸಿದ್ದಾರೆ ಎಂದು ಹಲವರು ದೂರಿದ್ದಾರೆ. ಪಾದಚಾರಿಗಳು, ವಾಹನ ಸವಾರರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಕಂಡ ಕಂಡಲ್ಲಿ ಗುಂಡಿ ಬಿದ್ದ ರಸ್ತೆಗಳಿಂದಾಗಿ ನಿತ್ಯ ನರಕ ಅನುಭವಿಸುವಂತಾಗಿದೆ. ಮತ್ತೊಮ್ಮೆ ಮೋದಿಯವರು ಮೈಸೂರು ನಗರ ಪ್ರದಕ್ಷಿಣೆಗೆಂದು ಬಂದರೆ ರಸ್ತೆಗಳಿಗೆ ಡಾಂಬರೀಕರಣವಾಗಬಹುದೇನೋ ಎಂಬ ಆಶಯದೊಂದಿಗೆ ವಿದ್ಯಾರ್ಥಿಗಳು ಪ್ರಧಾನಿಗಳಿಗೆ ಪತ್ರ ಬರೆಯುತ್ತಿರುವುದು ಸ್ಥಳೀಯ ಜನಪ್ರತಿನಿಧಿಗಳ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ.

# ಮೈಸೂರಲ್ಲಿ ಜಡಿ ಮಳೆ

ಮೈಸೂರು, ಜು.7(ಎಂಕೆ)– ಮೈಸೂರಿನಲ್ಲಿ ಜಡಿ ಮಳೆ ಮುಂದುವರೆದಿದ್ದು, ಗುರುವಾರ ಗಂಟೆಗೂ ಹೆಚ್ಚು ಕಾಲ ಸುರಿಯಿತು. ಪರಿಣಾಮ ವಾಹನ ಸವಾರರು, ಪಾದಚಾರಿಗಳು, ರಸ್ತೆ ಬದಿ ವ್ಯಾಪಾರಿಗಳು ಪರದಾಡುವಂತಾಯಿತು. ಸಂಜೆ 4 ಗಂಟೆ ಸುಮಾರಿಗೆ ಆರಂಭವಾದ ಜಡಿ ಮಳೆ ನಗರದ ಹಲವೆಡೆ ಗಂಟೆಗೂ ಹೆಚ್ಚು ಕಾಲ ಸುರಿಯಿತು.

**837.2 ಮಿ.ಮೀಟರ್ ಮಳೆ:** ಪ್ರಸಕ್ತ ವರ್ಷದಲ್ಲಿ ವಾಡಿಕೆಗಿಂತ ಅಧಿಕ ಮಳೆಯಾಗಿದ್ದು, ಜಿಲ್ಲೆಯಲ್ಲಿ 837.2 ಮಿ.ಮೀ ಮಳೆಯಾಗಿದೆ. ವಾಡಿಕೆಗಿಂತ 501.5 ಮಿ.ಮೀ ಮಳೆ ಹೆಚ್ಚಾಗಿ ಬಿದ್ದಿದೆ. ಸರಗೂರಲ್ಲಿ ಕಡಿಮೆ (ಶೇ.2ರಷ್ಟು), ಕೆ.ಆರ್.ನಗರ ತಾಲೂಕಿನಲ್ಲಿ ಅತೀ ಹೆಚ್ಚು (ಶೇ.127ರಷ್ಟು) ಮಳೆಯಾಗಿದೆ.

# ಕೆಪಿಸಿಸಿ ಸಾಮಾಜಿಕ ಜಾಲತಾಣ ವಿಭಾಗದ ಉಪಾಧ್ಯಕ್ಷರಾಗಿ ದಿನೇಶ್ ಗೂಳಿಗೌಡ, ಐಶ್ವರ್ಯಾ ಮಹದೇವ್ ಪ್ರಧಾನ ಕಾರ್ಯದರ್ಶಿ

ಬೆಂಗಳೂರು, ಜು.7–ಕೆಪಿಸಿಸಿ ಸಾಮಾಜಿಕ ಜಾಲತಾಣ ವಿಭಾಗದ





ಉಪಾಧ್ಯಕ್ಷರಾಗಿ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಪ್ರಧಾನ ಕಾರ್ಯದರ್ಶಿ ಹಾಗೂ ವಕ್ತಾರರಾಗಿ ಮಾಜಿ ಶಾಸಕ ದಿವಂಗತ ಮಂಚನಹಳ್ಳಿ ಮಹದೇವ ಪುತ್ರಿ ಐಶ್ವರ್ಯಾ ಮಹದೇವ್ ಅವರನ್ನು ಎಐಸಿಸಿ ನೇಮಕ ಮಾಡಿದೆ. ಶಾಸಕ ಪ್ರಿಯಾಂಕ ಖರ್ಗೆ ಅಧ್ಯಕ್ಷರಾಗಿರುವ ಸಮಿತಿಯಲ್ಲಿ ಸಹ ಅಧ್ಯಕ್ಷರಾಗಿ ಮನ್ಸೂರ್ ಅಲಿಖಾನ್, ಮುಖ್ಯ ವಕ್ತಾರರಾಗಿ ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ಉಪಾಧ್ಯಕ್ಷರಾಗಿ ಪರಿಷತ್ ಮಾಜಿ ಸದಸ್ಯ ರಮೇಶ್ ಬಾಬು, ಪ್ರಧಾನ ಕಾರ್ಯದರ್ಶಿ ಹಾಗೂ ವಕ್ತಾರರಾಗಿ ಲಾವಣ್ಯ ಬಲ್ಲಾಳ್, ಕವಿತಾ ರೆಡ್ಡಿ ಡಾ.ನಾಗಲಕ್ಷ್ಮಿ ಅವರನ್ನು ನೇಮಕ ಮಾಡಲಾಗಿದೆ.

# ಇಂದು ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು, ಜು.7–ತುರ್ತು ಕಾಮಗಾರಿ ನಿಮಿತ್ತ ಜು.8ರಂದು ನಗರದ ವಿಜಯನಗರ, 1, 2 ಮತ್ತು 3ನೇ ಹಂತ, ಹೆಬ್ಬಾಳು 1ನೇ ಹಂತ, 2ನೇ ಹಂತ ಮತ್ತು 3ನೇ ಹಂತ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ಕುಂಬಾರಕೊಪ್ಪಲು, ಲೋಕನಾಯಕನಗರ, ಮೇಟಗಳ್ಳಿ, ಬಿ.ಎಂ.ಶ್ರೀನಗರ, ಬೃಂದಾವನ ಬಡಾವಣೆ, ವಿವಿ ಮೊಹಲ್ಲಾ, ಒಂಟಿಕೊಪ್ಪಲು, ವಿನಾಯಕನಗರ, ಮಂಜುನಾಥಪುರ, ಗೋಕುಲಂ, ಯಾದವಗಿರಿ, ಪಡುವಾರಹಳ್ಳಿ, ಸರಸ್ವತಿಪುರಂ, ಶಾರದಾದೇವಿನಗರ, ಬೋಗಾದಿ, ಗಂಗೋತ್ರಿ ಬಡಾವಣೆ, ಟಿ.ಕೆ.ಲೇಔಟ್, ಕಾಮಟಗೇರಿ, ಸೊಪ್ಪಿನಕೇರಿ, ರಮಾವಿಲಾಸ ರಸ್ತೆ, ಸಯ್ಯಾಜಿರಾವ್ ರಸ್ತೆ, ಒಕ್ಕಲಗೇರಿ, ಶಿವರಾಂಪೇಟೆ, ಮಂಡಿ ಮೊಹಲ್ಲಾ, ತಿಲಕ್‌ನಗರ, ಲಷ್ಕರ್ ಮೊಹಲ್ಲಾ, ದೇವರಾಜ ಮೊಹಲ್ಲಾ, ವಾರ್ಡ್ ನಂ. 1, 2, 3, 4, 5, 6, 7, 20, 21, 22, 23, 24, 25, 41, 42, 43, 44, 45 ಮತ್ತು ಇದಕ್ಕೆ ಸಂಬಂಧಪಟ್ಟ ಡಿ.ಎಂ.ಎ. ಪ್ರದೇಶಗಳು ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜು ಇರುವುದಿಲ್ಲ.

# ಭಾರೀ ಮಳೆ: ಶೆಡ್ ಮೇಲೆ ಗುಡ್ಡ ಕುಸಿತ: ಮೂವರು ಕಾರ್ಮಿಕರ ಸಾವು



ಮಂಗಳೂರು: ಕಾರ್ಮಿಕರು ಉಳಿದುಕೊಂಡ ಶೆಡ್ ಮೇಲೆ ಗುಡ್ಡ ಕುಸಿದ ಪರಿಣಾಮ, ಶೆಡ್‌ನೊಳಗೆ ಸಿಲುಕಿಕೊಂಡ ನಾಲ್ವರು ಕಾರ್ಮಿಕರ ಪೈಕಿ ಮೂವರು ಮೃತಪಟ್ಟಿದ್ದು, ಒಬ್ಬರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಂಟ್ವಾಳ ತಾಲೂಕು ಪಂಜಿಕಲ್ಲು ಗ್ರಾಮದ ಮುಕ್ಕುಡ ಎಂಬಲ್ಲಿ ಹೆನ್ರಿ ಕಾರ್ಲೊ ಎಂಬುವರ ಮನೆಯ ರಬ್ಬರ್ ತೋಟದಲ್ಲಿ ಕೆಲಸ ಮಾಡುತ್ತಿದ್ದ ಐವರ ಪೈಕಿ ನಾಲ್ವರು ಶೆಡ್‌ನೊಳಗೆ ಸಿಲುಕಿಕೊಂಡಿದ್ದರು. ಅದರಲ್ಲಿ ಮೂವರನ್ನು ರಕ್ಷಣೆ ಮಾಡಲಾಗಿತ್ತು. ಒಬ್ಬರು ಮೃತಪಟ್ಟಿದ್ದರು. ಉಳಿದ ಮೂವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇಬ್ಬರು ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಮೃತಪಟ್ಟರು ಎಂದು ಎಸ್ಪಿ ಋಷಿಕೇಶ್ ಸೋನಾವಣೆ ಮಾಹಿತಿ ನೀಡಿದ್ದಾರೆ.

ಪಾಲಕ್ಕಾಡು ನಿವಾಸಿ ಬಿಜು (44) ಬುಧವಾರ ರಾತ್ರಿ ಮೃತಪಟ್ಟವರು. ಬಾಬು (46), ಸಂತೋಷ್ ಅಲ್ಫೊನ್ಸಾ (46) ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಕಣ್ಣೂರು ನಿವಾಸಿ ಜಾನ್ (44) ಬಂಟ್ವಾಳ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಂಟ್ವಾಳ ಅಗ್ನಿಶಾಮಕ ದಳ ಹಾಗೂ ಎನ್‌ಡಿ.ಆರ್.ಎಫ್ ಮತ್ತು ಸ್ಥಳೀಯರ ನೆರವಿನಿಂದ ರಕ್ಷಣಾ ಕಾರ್ಯಚರಣೆ ನಡೆಯಿತು. ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಎಸ್ಪಿ ಋಷಿಕೇಶ್ ಸೋನಾವಣೆ, ಮಂಗಳೂರು ಉಪವಿಭಾಗಾಧಿಕಾರಿ ಮದನ್ ಮೋಹನ್, ತಹಶೀಲ್ದಾರ್ ಸ್ಮಿತಾರಾಮು, ಪಿ.ಡಿ.ಒ.ವಿದ್ಯಾಶಿವಾನಂ ಸ್ಥಳಕ್ಕೆ ಭೇಟಿ ನೀಡಿದರು.

# ಮಂಡ್ಯದಲ್ಲಿ ನಾಲ್ಕು ಗೋಶಾಲೆ

ಮಂಡ್ಯ,ಜು.7(ಮೋಹನ್‌ರಾಜ್)– ಮಂಡ್ಯ, ಮಳವಳ್ಳಿ, ಕೆ.ಆರ್.ಪೇಟೆ, ನಾಗಮಂಗಲ ತಾಲೂಕುಗಳಲ್ಲಿ ಗೋ ಶಾಲೆ ಪ್ರಾರಂಭಿಸಲು ಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕ ಡಾ. ಆರ್.ಮಂಜುನಾಥ್ ತಿಳಿಸಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಗುರುವಾರ ಜಿಲ್ಲಾ ಪ್ರಾಣಿ ದಯಾ ಸಂಘ ಸಮಿತಿಯ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ನಾಗಮಂಗಲ ತಾಲೂಕಿನ ಕೆಳಗೆರೆ ಗ್ರಾಮದಲ್ಲಿ ಇಲಾಖೆಯ ಸ್ಥಳ ಲಭ್ಯವಿದ್ದು, ಗೋ ಶಾಲೆ ಪ್ರಾರಂಭಿಸಲಾಗುವುದು. ಉಳಿದ 3 ತಾಲೂಕುಗಳಲ್ಲಿ ಸ್ಥಳ ಗುರುತಿಸಬೇಕಿದೆ ಎಂದರು. ಸಾರ್ವಜನಿಕರು ರಾಜ್ಯದ ಸರ್ಕಾರಿ ಖಾಸಗಿ ಗೋ ಶಾಲೆಯಲ್ಲಿರುವ ಜಾನುವಾರುಗಳನ್ನು ಪುಣ್ಯಕೋಟಿ ಆನ್ ಲೈನ್ ಪೋರ್ಟಲ್ ಮೂಲಕ ಪ್ರತಿ ಜಾನುವಾರಿಗೆ ಒಬ್ಬ ದತ್ತುದಾರರು ವಾರ್ಷಿಕ 11 ಸಾವಿರ ಮತ್ತು ಸಂದಾಯ ಮಾಡಿ ಜಾನುವಾರುಗಳನ್ನು ದತ್ತು ಪಡೆಯಬಹುದಾಗಿದೆ ಎಂದರು. ಪುಣ್ಯಕೋಟಿ ಯೋಜನೆಗಾಗಿ 100ಕ್ಕೂ ಹೆಚ್ಚು ಗೋವುಗಳ ಭಾವ ಚಿತ್ರವನ್ನು ಇಲಾಖೆಯ ಅಧಿಕಾರಿಗಳು ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಿದ್ದಾರೆ. ಸಾರ್ವಜನಿಕರು ಯಾವುದೇ ಪ್ರಾಣಿಯನ್ನು ದತ್ತು ಪಡೆದರೆ ಅವರ ಖಾತೆಯಿಂದ ನೇರವಾಗಿ ಗೋ ಶಾಲೆಯ ಮಾಲೀಕರಿಗೆ ಹಣ ತಲುಪುತ್ತದೆ. ರಾಜ್ಯ ಮಟ್ಟದಲ್ಲಿ ಯೋಜನೆಗೆ ಚಾಲನೆ ನೀಡಿದ ನಂತರ ಜಿಲ್ಲೆಯಲ್ಲೂ ಚಾಲನೆ ನೀಡಲಾಗುವುದು ಎಂದರು. ಸಭೆಯಲ್ಲಿ ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿಯ ಸದಸ್ಯರಾದ ಡಾ.ಎಸ್.ಕೆ.ಮಿಥಲ್ ಪ್ರವೀಣ್ ಕುಮಾರ್, ಡಾ.ಎಂ.ಪಿ.ಉದಯ ಶಂಕರ್, ಅಭಿಯಂತರರಾದ ವೀಣಾ, ನಗರಸಭೆ ಆಯುಕ್ತ ಆರ್.ಮಂಜುನಾಥ್, ಸಬ್ ಇನ್‌ಸ್ಪೆಕ್ಟರ್ ಮಾರುತಿ ಉಪಸ್ಥಿತರಿದ್ದರು.



> ಅನಧಿಕೃತವಾಗಿ ಜಾನುವಾರುಗಳ ವಧೆ ಹಾಗೂ ಸಾಗಾಣಿಕೆ ತಡೆಗಟ್ಟಲು ಈಗಾಗಲೇ ಸಮಿತಿ ರಚಿಸಲಾಗಿದ್ದು, ಪೊಲೀಸ್ ಇಲಾಖೆಯವರು ಕೈಜೋಡಿಸಬೇಕು. ಸರ್ಕಾರವು ಪುಣ್ಯಕೋಟಿ ದತ್ತು ಯೋಜನೆ ಜಾರಿಗೊಳಿಸಲು ಸಿದ್ಧತೆ ಮಾಡಿಕೊಳ್ಳುತ್ತಿದೆ. ಅದರಂತೆ ಜಿಲ್ಲೆಯಲ್ಲೂ ಸಿದ್ಧತೆ ಪ್ರಾರಂಭಿಸಲಾಗಿದೆ. ಖಾಸಗಿ ಸಂಸ್ಥೆಯವರು, ಸಾರ್ವಜನಿಕರು ಯಾವುದೇ ಪ್ರಾಣಿಯನ್ನು ಅಥವಾ ಗೋ ಶಾಲೆಯಲ್ಲಿರುವ ಗೋವು ದತ್ತು ಪಡೆಯುವುದು ಪುಣ್ಯಕೋಟಿ ಯೋಜನೆಯ ಉದ್ದೇಶವಾಗಿದೆ.
>
> –ಡಾ.ಆರ್.ಮಂಜುನಾಥ್, ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ

# ಮಳೆ ಆರ್ಭಟ: ಇಂದು ಸಿಎಂ ಸಭೆ

**ಬೆಂಗಳೂರು:** ರಾಜ್ಯದಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆ ಹಾಗೂ ಪ್ರಕೃತಿ ವಿಕೋಪ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಳೆ ಮಹತ್ವದ ಸಭೆ ಕರೆದಿದ್ದಾರೆ. ನಾಳೆ ಮಧ್ಯಾಹ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಸಿಇಒ ಮತ್ತು ಇತರೆ ಅಧಿಕಾರಿಗಳ ಜೊತೆ ವಿಡಿಯೋ ಸಂವಾದ ನಡೆಸಲಿದ್ದು, ಮಳೆಯಿಂದ ಹಾನಿಗೆ ಒಳಗಾಗಿರುವ ಪ್ರದೇಶಗಳ ಬಗ್ಗೆ ಮಾಹಿತಿ ಪಡೆಯಲಿದ್ದಾರೆ.

ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಮಳೆಯಾಗಿದೆ ಎಷ್ಟು ಹಾನಿಯಾಗಿದೆ ಎಂಬುದರ ಕುರಿತು ಮಾಹಿತಿ ಪಡೆದು ಸೂಕ್ತ ನಿರ್ದೇಶನ ನೀಡಲಿದ್ದಾರೆ. ಸಂಬಂಧಪಟ್ಟ ಇಲಾಖೆಗಳ ಸಚಿವರು ಮತ್ತು ಅಧಿಕಾರಿಗಳು ಈ ಮಳೆಹಾನಿ ಸಭೆಯಲ್ಲಿ ಭಾಗಿಯಾಗಲಿದ್ದಾರೆ.

## ಜು.12ರಿಂದ ನಾಗಮಂಗಲ ತಾಲೂಕಿನ ವಿವಿಧೆಡೆ

# 'ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ' ಕೃಷಿ ಅಭಿಯಾನ



ನಾಗಮಂಗಲ, ಜು.7(ಮಹೇಶ್)– ತಾಲೂಕಿನಲ್ಲಿ ಕೃಷಿ ಹಾಗೂ ಬೇಸಾಯ ಸಂಬಂಧಿತ ಇಲಾಖೆಗಳ ಸಮನ್ವಯದೊಂದಿಗೆ ಸಮಗ್ರ ಕೃಷಿ ಮಾಹಿತಿಯನ್ನು ರೈತರಿಗೆ ತಲುಪಿಸುವ ಉದ್ದೇಶದಿಂದ ಜು.12ರಿಂದ 26ರವರೆಗೆ 'ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ' ಘೋಷವಾಕ್ಯದಡಿ ಕೃಷಿ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಡಾ.ಜಯರಾಮ ತಿಳಿಸಿದರು.

ಜು. 12ರಂದು ಬೆಳಗ್ಗೆ 11.00 ಗಂಟೆಗೆ ನಾಗಮಂಗಲದ ಮಿನಿ ವಿಧಾನಸೌಧದ ಆವರಣದಲ್ಲಿ ಶಾಸಕ ಸುರೇಶ್‌ಗೌಡ, ಸಂಸದೆ ಸುಮಲತಾ ಅಂಬರೀಶ್, ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ ಹಾಗೂ ತಾಲೂಕು ಮಟ್ಟದ ಇಲಾಖಾ ಮುಖ್ಯಸ್ಥರ ಉಪಸ್ಥಿತಿಯಲ್ಲಿ ಸಮಗ್ರ ಕೃಷಿ ಮಾಹಿತಿ ರಥಕ್ಕೆ ಚಾಲನೆ ನೀಡಲಾಗುವುದು ಎಂದು ಮಾಹಿತಿ ನೀಡಿದರು. ಸಂಚಾರಿ ಕೃಷಿ ಮಾಹಿತಿ ಘಟಕವನ್ನು ಬಳಸಿಕೊಂಡು ದಿನಾಂಕ ಜು. 12 ರಿಂದ 26ರವರೆಗೆ ನಾಗಮಂಗಲ ತಾಲೂಕಿನ ಎಲ್ಲಾ ಪ್ರತಿ ಹೋಬಳಿಯಲ್ಲಿ ಪ್ರಚಾರ ಕಾರ್ಯದ ಜೊತೆಗೆ ವಿಜ್ಞಾನಿಗಳು ಹಾಗೂ ಅಧಿಕಾರಿಗಳನ್ನೊಳಗೊಂಡ ತಂಡಗಳು ಸ್ಥಳೀಯವಾಗಿ ರೈತರೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗುವುದು. ಕೃಷಿ ಮಾಹಿತಿ ಘಟಕವು ವೇಳಾಪಟ್ಟಿಯಂತೆ ತಾಲೂಕಿನಾದ್ಯಂತ ಸಂಚಲಿಸಲಿದೆ ಎಂದು ತಿಳಿಸಿದರು.

ತಾಲೂಕಿನ ತುಪ್ಪದ ಮಡು, ಮಾಯಿಗೂನಹಳ್ಳಿ ಮೂಲಕ ಒಂದು ವಾರ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳ ಕೇಂದ್ರ ಸ್ಥಾನದಲ್ಲಿ ಭತ್ತ, ರಾಗಿ, ಹುರುಳಿ, ಎಳ್ಳು, ತೊಗರಿ, ಟೊಮೊಟೊ ಮುಂತಾದ ಬೆಳೆ ಹಾಗೂ ಬೆಳೆ ವಿಮೆ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಉಪಯುಕ್ತ ಮಾಹಿತಿಯನ್ನು ರೈತರಿಗೆ ನೀಡಲಿದ್ದಾರೆ ಎಂದರು.

# ಅಕ್ರಮ ಸಂಬಂಧ ಪ್ರಶ್ನಿಸಿದ ಪತ್ನಿ ಹತ್ಯೆಗೈದ ಪತಿ


## ಮಕ್ಕಳೆದುರೇ ನಡೆದು ಹೋಯ್ತು ಘೋರ ಘಟನೆ

ಶ್ರೀರಂಗಪಟ್ಟಣ, ಜು.7(ವಿನಯ್‌ಕಾರೇಕುರ)– ಅಕ್ರಮ ಸಂಬಂಧ ಪ್ರಶ್ನಿಸಿದ ಪತ್ನಿಯನ್ನು ಪತಿರಾಯನೋರ್ವ ಮಕ್ಕಳೆದುರೇ ಹತ್ಯೆ ಮಾಡಿದ ಘಟನೆ ಶ್ರೀರಂಗಪಟ್ಟಣ ತಾಲೂಕು ಗೆಂಡೆಹೊಸಳ್ಳಿ ಗ್ರಾಮದಲ್ಲಿ ಕಳೆದ ರಾತ್ರಿ ನಡೆದಿದೆ. ಗ್ರಾಮದ ರವಿ(37) ಎಂಬಾತನೇ ತನ್ನ ಪತ್ನಿ ಯೋಗಿತಾ(28) ಅವರನ್ನು ವೇಲ್‌ನಿಂದ ಕುತ್ತಿಗೆ ಬಿಗಿದು ಹತ್ಯೆ ಮಾಡಿ ಪರಾರಿಯಾದವನಾಗಿದ್ದು, ಕೆ.ಆರ್.ಪೇಟೆ ಮೂಲದ ಯೋಗಿತಾ ಹಾಗೂ ಈತನ ವಿವಾಹ 9 ವರ್ಷದ ಹಿಂದೆ ನಡೆದಿದ್ದು, ಈ ದಂಪತಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ.



ನೆರೆ ಗ್ರಾಮದ ಮಹಿಳೆಯೊಂದಿಗೆ ರವಿ ಅಕ್ರಮ ಸಂಬಂಧ ಹೊಂದಿದ್ದನೆಂದು ಹೇಳಲಾಗಿದ್ದು, ಈ ವಿಚಾರವಾಗಿ ದಂಪತಿ ನಡುವೆ ಪದೆ ಪದೇ ಗಲಾಟೆ ನಡೆಯುತ್ತಿತ್ತು. ಮನೆ ಬಿಟ್ಟು ಹೋಗುವಂತೆ ಪತ್ನಿಯನ್ನು ರವಿ ಹಿಂಸಿಸುತ್ತಿದ್ದ ಎನ್ನಲಾಗಿದ್ದು, ಗ್ರಾಮದ ಹಿರಿಯರು ಹಲವಾರು ಬಾರಿ ಪಂಚಾಯ್ತಿ ನಡೆಸಿ ರವಿಗೆ ಬುದ್ಧಿವಾದ ಹೇಳಿದ್ದರು ಎಂದು ಮೂಲಗಳು ತಿಳಿಸಿವೆ. ಕಳೆದ ರಾತ್ರಿ ರವಿ ಮಕ್ಕಳಿಗೆ ಮನೆಯಲ್ಲೇ ಪಾನಿಪೂರಿ ತಿನಿಸುತ್ತಿದ್ದ ವೇಳೆ ಅಕ್ರಮ ಸಂಬಂಧ ವಿಚಾರವಾಗಿ ದಂಪತಿ ನಡುವೆ ಗಲಾಟೆ ಆರಂಭವಾಗಿದೆ. ಅದು ವಿಕೋಪಕ್ಕೆ ತಿರುಗಿ ಪತ್ನಿಯನ್ನು ರವಿ ಕೋಣೆಯೊಳಗೆ ಎಳೆದೊಯ್ದಾಗ ಅಪಾಯವರಿತ ಮಕ್ಕಳು ನೆರೆ ಮನೆಯವರಿಗೆ ವಿಷಯ ತಿಳಿಸಿ ಮನೆಗೆ ಹಿಂದಿರುಗಿದ್ದಾರೆ. ಅಷ್ಟರಲ್ಲಿ ವೇಲ್‌ನಿಂದ ಕುತ್ತಿಗೆ ಬಿಗಿದು ಪತ್ನಿಯನ್ನು ಹತ್ಯೆ ಮಾಡಿದ್ದ ಆತ, ಈ ವಿಚಾರವನ್ನು ಯಾರಿಗೂ ಹೇಳಬಾರದು ಎಂದು ಮಕ್ಕಳಿಗೆ ತಾಕೀತು ಮಾಡಿ ಪರಾರಿಯಾಗಿದ್ದಾನೆ ಎಂದು ಹೇಳಲಾಗಿದೆ. ನೆರೆ ಮನೆಯವರು ಬರುವಷ್ಟರಲ್ಲೇ ಹತ್ಯೆ ನಡೆದಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಅರಕೆರೆ ಠಾಣೆ ಪೊಲೀಸರು ಪರಾರಿಯಾಗಿರುವ ರವಿಗಾಗಿ ಹುಡುಕಾಟ ನಡೆಸಿದ್ದಾರೆ.

# ಸಿ.ನಂಜುಂಡಯ್ಯ ನಿಧನ



ಮದ್ದೂರು, ಜು.7– ತಾಲೂಕಿನ ಆಲೂರು ಗ್ರಾಮದ ಹಿರಿಯ ಮುತ್ಸದ್ದಿ, ನಿವೃತ್ತ ಮುಖ್ಯಶಿಕ್ಷಕ ಸಿ.ನಂಜುಂಡಯ್ಯ (93) ವಯೋಸಹಜ ಅನಾರೋಗ್ಯದಿಂದ ಬುಧವಾರ ತಡರಾತ್ರಿ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು ಹಾಗೂ ನಾಲ್ವರು ಪುತ್ರಿಯರಿದ್ದು ಮೃತರ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಆಲೂರು ಗ್ರಾಮದ ಅವರ ಜಮೀನಿನಲ್ಲಿ ಅಪಾರ ಬಂಧುಬಳಗದ ಸಮ್ಮುಖದಲ್ಲಿ ನೆರವೇರಿತು.

# ಜಿ.ಮಾದೇಗೌಡರ ವರ್ಷದ ಪುಣ್ಯಸ್ಮರಣೆ

ಭಾರತೀನಗರ, ಜು.7(ಅಣ್ಣೂರು ಸತೀಶ್)– ಮಾಜಿ ಸಂಸದ ದಿ.ಜಿ.ಮಾದೇಗೌಡರ ಪ್ರಥಮ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ಹನುಮಂತನಗರದ ಅವರ ಸ್ಮಾರಕದ (ಸಮಾಧಿ) ಬಳಿ ಅರ್ಥಪೂರ್ಣವಾಗಿ ನಡೆಯಿತು.

ಹಿರಿಯ ಮುತ್ಸದ್ದಿ ಜಿ.ಮಾದೇಗೌಡರು ಅಗಲಿ ಇಂದಿಗೆ ಒಂದು ವರ್ಷ ಕಳೆದಿದ್ದು, ಅವರ ಕುಟುಂಬದವರು ಹಾಗೂ ಬೆಂಬಲಿಗರು ಸಮಾಧಿಗೆ ಪೂಜೆ ಸಲ್ಲಿಸಿ ಭಾವುಕರಾದರು.

ಪತ್ನಿ ಜೆ.ಪಿ.ಪದ್ಮ ಜಿ.ಮಾದೇಗೌಡ, ಪುತ್ರ ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಸೊಸೆ ಜೆ.ವಿ.ಬಿಂದು, ಮೊಮ್ಮಕ್ಕಳಾದ ಆಶಯ್ ಮಧು ಮಾದೇಗೌಡ, ಅನೂಪ್ ಮಧು ಮಾದೇಗೌಡ, ಡಾ.ಜಿ.ಎಂ.ಪ್ರಕಾಶ್, ಜ್ಯೋತಿ, ಸಿರಿ ಸೇರಿದಂತೆ ಕುಟುಂಬ ವರ್ಗದವರು ಪೂಜೆ ಸಲ್ಲಿಸಿದರು.



ಈ ಸಂದರ್ಭದಲ್ಲಿ ಅನ್ನದಾನ, ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. 5 ಸಾವಿರಕ್ಕೂ ಹೆಚ್ಚು ಜನರಿಗೆ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಶಿವಾರ ಉಮೇಶ್ ತಂಡದವರಿಂದ ನುಡಿನಮನ ಕಾರ್ಯಕ್ರಮ ನಡೆಯಿತು. 18 ಗುಂಟೆಯಲ್ಲಿ ಜಿ.ಮಾದೇಗೌಡರ ಸ್ಮಾರಕ ನಿರ್ಮಾಣ ಮಾಡಿ ಶಾಂತಿಧಾಮ ಎಂದು ಹೆಸರಿಡಲಾಗಿದೆ ಈ ಶಾಂತಿಧಾಮದಲ್ಲಿ ಸುಂದರವಾಗಿ ಉದ್ಯಾನವನ ನಿರ್ಮಾಣ ಮಾಡಿರುವುದು ಎಲ್ಲರ ಗಮನ ಸೆಳೆದಿದೆ.

ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಮಾತನಾಡಿ, ನಮ್ಮ ತಂದೆ ಕಳೆದುಕೊಂಡು ಒಂದು ವರ್ಷ ಕಳೆದಿದೆ. ಆದರೂ ಅವರ ನೆನಪು ಸದಾ ನಮ್ಮ ಕುಟುಂಬದಲ್ಲಿ, ಕಾರ್ಯಕರ್ತರಲ್ಲಿ, ಅಭಿಮಾನಿಗಳಲ್ಲಿ ಇದೆ ಅವರು ಮಾಡಿರುವಂತಹ ಕೆಲಸಗಳು ನಮಗೆ ಸ್ಫೂರ್ತಿದಾಯಕವಾಗಿದೆ ಎಂದರು.

ಈ ವೇಳೆ ಭಾರತೀ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿ ಬಿ.ಎಂ.ನಂಜೇಗೌಡ, ಸಿದ್ದೇಗೌಡ ಟ್ರಸ್ಟಿಗಳಾದ ಚಂದೂಪುರ ಪಾಪಣ್ಣ, ಕಾರ್ಕಹಳ್ಳಿ ಬಸವೇಗೌಡ, ಕದಲೂರು ಮಹೇಶ್, ಯಡನಗಳ್ಳಿ ಕೆಂಚೇಗೌಡ, ತಾ.ಪಂ ಮಾಜಿ ಸದಸ್ಯ ಗಿರೀಶ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಆರ್.ಸಿದ್ದಪ್ಪ ಅವಿನಾಶ್, ಪ್ರಸಾದ್ ಸೇರಿದಂತೆ ಹಲವಾರು ಕಾರ್ಯಕರ್ತರು ಉಪಸ್ಥಿತರಿದ್ದರು.

# ಇಂಗಲಗುಪ್ಪೆ ಗ್ರಾಮಸ್ಥರಿಂದ ತಹಸೀಲ್ದಾರ್ ನಯನಾಗೆ ಸನ್ಮಾನ


ಪಾಂಡವಪುರ, ಜು.7– ಪಾಂಡವಪುರ ತಾಲೂಕಿಗೆ ನೂತನ ತಹಸೀಲ್ದಾರ್ ಆಗಿ ನಿಯೋಜನೆಗೊಂಡ ಹಾಗೂ ಮೂಲತಃ ತಾಲೂಕಿನ ಇಂಗಲಗುಪ್ಪೆ ಗ್ರಾಮದವರಾದ ಎಸ್.ಎಲ್.ನಯನಾ ಸಚ್ಚಿದಾನಂದ ಅವರನ್ನು ಇಂಗಲಗುಪ್ಪೆ ಗ್ರಾಮಸ್ಥರು ಸನ್ಮಾನಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ ಮುಂದೆ ಗಿಡ ನೆಡಲಾಯಿತು. ಬಳಿಕ ಶಾಲಾ ಮಕ್ಕಳ ಬ್ಯಾಂಡ್‌ಸೆಟ್ ತಂಡದ ಹಾಗೂ ಶಾಲಾ ಮಕ್ಕಳ ಪೂರ್ಣಕುಂಭದ ಜತೆಗೆ ಮೆರವಣಿಗೆಯೊಂದಿಗೆ ತಹಸೀಲ್ದಾರ್ ನಯನ ಅವರನ್ನು ಕರೆತರಲಾಯಿತು. ಬಳಿಕ, ಟಿ.ಎಸ್.ಛತ್ರ ಹಾಗೂ ಇಂಗಲಗುಪ್ಪೆ ಗ್ರಾಮಸ್ಥರು ತಹಸೀಲ್ದಾರ್ ಎಸ್.ಎಲ್.ನಯನಾ ಅವರಿಗೆ ತವರಿನ ಸನ್ಮಾನ ಮಾಡಿ ಅಭಿನಂದಿಸಿದರು.



ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಎಸ್.ಎಲ್.ಲಿಂಗರಾಜು, ಗ್ರಾಪಂ ಉಪಾಧ್ಯಕ್ಷೆ ಸುಕನ್ಯಾ, ಮುಖಂಡರಾದ ಸಚ್ಚಿದಾನಂದ, ಇ.ಎಸ್. ನಾಗರಾಜು, ಇ.ಎಸ್.ಸೀತಾರಾಮಯ್ಯ, ದರ್ಶನ್, ಲಿಂಗರಾಜು, ಶಿವಣ್ಣ, ನಟರಾಜು, ರೇಣುಕಮ್ಮ, ವೆಂಕಟೇಶ್, ಲಾವಣ್ಯ ವೆಂಕಟೇಶ್, ಶ್ರೀಧರ್, ಎಸ್.ಎ.ಮಲ್ಲೇಶ್ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

# ಜು.13ರಂದು ಗುರುಪೂರ್ಣಿಮಾ ಭಕ್ತಿ ಸಮರ್ಪಣೆ



ಪಾಂಡವಪುರ, ಜು.7– ಸಮೀಪದ ದೊಡ್ಡೇಗೌಡನಕೊಪ್ಪಲು ಗ್ರಾಮದ ಓಂಕಾರೇಶ್ವರ ಶ್ರೀಕ್ಷೇತ್ರ ಕಾವೇರಿ ಸಾಯಿಧಾಮ ಮಂದಿರದಲ್ಲಿ ಜು.13 ರಂದು ಗುರುಪೂರ್ಣಿಮಾ ಭಕ್ತಿ ಸಮರ್ಪಣೆ ಹಾಗೂ ಶ್ರೀಸತ್ಯನಾರಾಯಣ ಪೂಜಾ ಕಾರ್ಯಕ್ರಮ ಆಯೋಜಿಸಲಾಗಿದೆ. ಭಕ್ತರು ಈ ವಿಶೇಷ ಕಾರ್ಯಕ್ರಮದಲ್ಲಿ ಭಾಗವಹಿಸಿ ಗುರುಕೃಪೆಗೆ ಪಾತ್ರರಾಗಬೇಕು ಎಂದು ದೇವಸ್ಥಾನದ ಮ್ಯಾನೇಜಿಂಗ್ ಟ್ರಸ್ಟಿ ಪ್ರಕಟಣೆಯಲ್ಲಿ ಕೋರಿದ್ದಾರೆ.

# ಸಂತೇಬಾಚಹಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಕೆ.ಆರ್.ಪೇಟೆ, ಜು.7(ಶ್ರೀನಿವಾಸ್)– ತಾಲೂಕಿನ ಸಂತೇಬಾಚಹಳ್ಳಿ ಗ್ರಾಪಂ ನೂತನ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಹಡವನಹಳ್ಳಿ ದೇವರಾಜು ಮತ್ತು ಉಪಾಧ್ಯಕ್ಷರಾಗಿ ಅಮಚಹಳ್ಳಿಯ ಅನುರಾಧಾ ಗಣೇಶ್ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷ ಮೋಹನ್ ಮತ್ತು ಉಪಾಧ್ಯಕ್ಷೆ ಮಂಗಳಮಂಜೇಗೌಡ ಅವರು ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಗುರುವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನ ಬಯಸಿ ಬಿಜೆಪಿ ಬೆಂಬಲಿತ ದೇವರಾಜು ಮತ್ತು ಜೆಡಿಎಸ್ ಬೆಂಬಲಿತ ಪ್ರಿಯದರ್ಶಿನಿ ಹಾಗೂ ಉಪಾಧ್ಯಕ್ಷ ಸ್ಥಾನ ಬಯಸಿ ಅಮಚಹಳ್ಳಿ ಅನುರಾಧಗಣೇಶ್ ಮತ್ತು ಡಿ.ಜೆ.ಮಂಜುಳಾ ನಾಮಪತ್ರ ಸಲ್ಲಿಸಿದರು. ಚುನಾವಣಾಧಿಕಾರಿಯಾಗಿ ತಾಪಂ ಇಓ ಸತೀಶ್, ಸಹ ಚುನಾವಣಾಧಿಕಾರಿಯಾಗಿ ವ್ಯವಸ್ಥಾಪಕ ಅನಿಲ್‌ಬಾಬು, ಪಿಡಿಓ ಯೋಗೇಶ್ ಮತ್ತು ಕೃಷ್ಣೇಗೌಡ ಕಾರ್ಯನಿರ್ವಹಿಸಿದರು. ನೂತನ ಅಧ್ಯಕ್ಷರು ಮತ್ತು ಉಪಾಧ್ಯಕ್ಷ ಆಯ್ಕೆಯನ್ನು ಚುನಾವಣಾಧಿಕಾರಿಗಳು ಪ್ರಕಟಿಸುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ಗ್ರಾಮ ಪಂಚಾಯಿತಿ ಆವರಣದಲ್ಲಿ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು.

ನೂತನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಸಚಿವ ನಾರಾಯಣಗೌಡರ ಆಪ್ತ ಸಹಾಯಕ ದಯಾನಂದ್, ಪಿಎಲ್‌ಸಿ ಬ್ಯಾಂಕ್ ನಿರ್ದೇಶಕ ಕೈಗೋನಹಳ್ಳಿ ಕುಮಾರ್, ಬಿಜೆಪಿ ಮುಖಂಡ ಡಿ.ಪಿ.ಪರಮೇಶ್, ಮರೀಗೌಡ, ನಾಯಕನಹಳ್ಳಿ ಲೋಕೇಶ್, ಭೀಮಣ್ಣ, ಅಘಲಯ ಶ್ರೀಧರ್, ಕೊಡಗಹಳ್ಳಿ ಜಯರಾಮೇಗೌಡ, ಮಂಜೇಗೌಡ, ಎನ್.ಡಿ.ರಾಮೇಗೌಡ, ಮಹೇಶ್, ರಂಗಸ್ವಾಮಿ, ಸೋಮಶೇಖರ್ ಮತ್ತಿತರರು ಅಭಿನಂದಿಸಿದರು.

ಮೈಸೂರು ಮಿತ್ರ



# ಭೂಕಂಪನ ಪ್ರದೇಶಗಳಿಗೆ ಕಂದಾಯ ಸಚಿವ ಅಶೋಕ್ ಭೇಟಿ

## ಪ್ರಕೃತಿ ವಿರುದ್ಧ ಹೋದರೆ ಅನಾಹುತ ತಪ್ಪಿದ್ದಲ್ಲ: ಜನರಿಗೆ ಸಚಿವರ ಎಚ್ಚರಿಕೆ

### ಮನೆ ಪೂರ್ಣ ಕುಸಿದಿದ್ದರೆ 5 ಲಕ್ಷ, ಅಲ್ಪ ಹಾನಿಗೆ 50 ಸಾವಿರ ಪರಿಹಾರ

ಮಡಿಕೇರಿ,ಜು.7– ಪ್ರಕೃತಿಯ ವಿರುದ್ಧ ಯಾರೂ ಹೋಗಬಾರದು, ಹೋದಲ್ಲಿ ಅನಾಹುತ ತಪ್ಪಿದ್ದಲ್ಲ ಎಂದು ಕಂದಾಯ ಸಚಿವ ಆರ್. ಅಶೋಕ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕಳೆದ ಕೆಲ ದಿನಗಳ ಹಿಂದೆ ಸರಣಿ ಭೂ ಕಂಪನ ಘಟಿಸಿದ ಕೊಡಗಿನ ಗಡಿ ಗ್ರಾಮ ಚೆಂಬು ಗ್ರಾಮಕ್ಕೆ ಭೇಟಿ ನೀಡಿದ ಸಚಿವ ಅಶೋಕ್ ಅಲ್ಲಿನ ಸ್ಥಿತಿಗತಿಗಳನ್ನು ಪರಿಶೀಲನೆ ನಡೆಸಿದರು. ಸರಕಾರ ಎಲ್ಲಾ ಪರಿಸ್ಥಿತಿಗಳನ್ನು ಎದುರಿಸಲು ಸಿದ್ಧವಾಗಿದೆ. ಜಿಲ್ಲಾಡಳಿತ ಕೂಡ ಮಳೆಗಾಲ ಎದುರಿಸಲು ಅಗತ್ಯ ಸಿದ್ಧತೆಗಳನ್ನು ಈಗಾಗಲೇ ಮಾಡಿಕೊಂಡಿದೆ. ಭಯಪಡುವ ಅಗತ್ಯವಿಲ್ಲ ಎಂದು ಸಾಂತ್ವನ ಹೇಳಿದರು.

ಚೆಂಬು ಗ್ರಾಮ ನಿವಾಸಿ ಅಕ್ಕಮ್ಮ ಎಂಬವರ ಮನೆಯ ಮೇಲೆ ಬರೆದ ಕುಸಿದು ಹಾನಿಯಾದ ಪ್ರದೇಶಕ್ಕೆ ತೆರಳಿದ ಅಶೋಕ್, ಸಂತ್ರಸ್ಥರಿಗೆ ಸಾಂತ್ವನ ಹೇಳಿದರು. ಇದೇ ಸಂದರ್ಭ ಮನೆಹಾನಿಗೆ ಒಳಗಾಗಿರುವ ಅಕ್ಕಮ್ಮ ಅವರಿಗೆ 24 ಸಾವಿರ ರೂ.ಗಳ ಪರಿಹಾರದ ಚೆಕ್ ಅನ್ನು ಹಸ್ತಾಂತರಿಸಿದರು. ಚೆಂಬು ಭಾಗದಲ್ಲಿ ಅತಿಯಾಗಿ ಮಳೆ ಸುರಿಯುತ್ತಿದ್ದು, ಅವಘಡಗಳು ಸಂಭವಿಸುತ್ತಿವೆ ಎಂದು ಶಾಸಕ ಕೆ.ಜಿ.ಬೋಪಯ್ಯ ಸಚಿವರಿಗೆ ವಿವರಿಸಿದರು. ಆತಂಕವಿರುವ ಪ್ರದೇಶಗಳಲ್ಲಿ ಮಳೆ ಹೆಚ್ಚಾಗಿ ಅನಾಹುತ ಸಂಭವಿಸುವ ಲಕ್ಷಣಗಳು ಕಂಡು ಬಂದಲ್ಲಿ ಅಂತಹ ಪ್ರದೇಶಗಳ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲು ಅಧಿಕಾರಿಗಳಿಗೆ ಸಚಿವ ಆರ್.ಅಶೋಕ್ ಸೂಚನೆ ನೀಡಿದರು.

ಕರ್ತೋಜೆ ಬಳಿ ರಾಷ್ಟ್ರೀಯ ಹೆದ್ದಾರಿಗೆ ಹಾನಿಯಾಗಿರುವ ಪ್ರದೇಶಕ್ಕೆ ಭೇಟಿ ನೀಡಿದ ಸಚಿವರು ಹೆದ್ದಾರಿ ಹಾನಿ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ಅಂತರ್ ಜಲ ಮತ್ತು ಭೂ ಭಾಗದ ಮಣ್ಣಿನ ಒತ್ತಡದಿಂದ ರಸ್ತೆಯಲ್ಲಿ ಉಬ್ಬು ಹೆಚ್ಚುತ್ತಿದೆ. ಇದೀಗ ಸ್ಥಳದಲ್ಲಿ ತಾತ್ಕಾಲಿಕ ದುರಸ್ತಿ ಕಾರ್ಯ ನಡೆಸಲಾಗುತ್ತಿದ್ದು, ಮಳೆಗಾಲ ಮುಕ್ತಾಯವಾದ ಬಳಿಕ ಶಾಶ್ವತ ಕಾಮಗಾರಿ ನಡೆಸಲಾಗುತ್ತದೆ ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮಾಹಿತಿ ನೀಡಿದರು.





ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಆರ್.ಅಶೋಕ್, ಪೂರ್ಣ ಪ್ರಮಾಣದಲ್ಲಿ ಮನೆ ಕುಸಿದು ಬಿದ್ದಲ್ಲಿ 5 ಲಕ್ಷ ರೂ. ಹಾಗೂ ಅಲ್ಪ ಪ್ರಮಾಣದಲ್ಲಿ ಮನೆಗೆ ಹಾನಿಯಾದಲ್ಲಿ 50 ಸಾವಿರ ರೂ. ಪರಿಹಾರ ನೀಡಲಾಗುತ್ತದೆ. ಮಳೆಯಿಂದ ಹಾನಿಯಾದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಈ ಕುರಿತು ಸೂಚನೆ ಹೊರಡಿಸಲಾಗುತ್ತದೆ. ಸರಕಾರದ ಬಳಿ ಹಣದ ಕೊರತೆ ಇಲ್ಲ, ಮನೆ ಹಾನಿಯಾದವರಿಗೆ ಸೂಕ್ತ ಪರಿಹಾರ ನೀಡಲಾಗುತ್ತದೆ. ಬೆಂಗಳೂರಿಗೆ ತೆರಳಿದ ಬಳಿಕ ಈ ಕುರಿತು ಅಧಿಕೃತ ಆದೇಶ ಹೊರಡಿಸಲಾಗುತ್ತದೆ ಎಂದು ಹೇಳಿದರು.

ಕಳೆದ ಬಾರಿ ಸಂಭವಿಸಿದ ಪ್ರಾಕೃತಿಕ ವಿಕೋಪ ಮತ್ತು ಕೈಗೊಳ್ಳಬೇಕಿರುವ ಮುಂಜಾಗೃತಾ ಕ್ರಮಗಳ ಕುರಿತು ತಜ್ಞರು ವರದಿ ನೀಡಿದ್ದಾರೆ. ಈ ವರದಿ ಆಧರಿಸಿಯೇ ಕೊಡಗಿನಲ್ಲಿ ಅಭಿವೃದ್ಧಿ ಕಾರ್ಯ ನಡೆಸಬೇಕು. ನೀತಿ ನಿಯಮ ಇಲ್ಲದೆ ಅಕ್ರಮವಾಗಿ ಕಾರ್ಯ ನಿರ್ವಹಿಸುತ್ತಿರುವ ಹೋಂ ಸ್ಟೇಗಳ ಮೇಲೆ ನಿಗಾ ವಹಿಸಬೇಕು. ಪರಿಸರಕ್ಕೆ ಪೂರಕವಾಗಿ ಹೋಂಸ್ಟೇ, ರೆಸಾರ್ಟ್ ಉದ್ಯಮ ನಡೆಸಬೇಕು. ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಕೆ.ಜಿ. ಬೋಪಯ್ಯ, ಜಿಲ್ಲಾಧಿಕಾರಿ ಡಾ. ಸತೀಶ, ಜಿ.ಪಂ ಸಿಇಓ ಭಂವರ್ ಸಿಂಗ್ ಮೀನಾ, ಪಶ್ಚಿಮ ಘಟ್ಟ ಸಂರಕ್ಷಣಾ ಕಾರ್ಯಪಡೆ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ, ಡಿಎಫ್‌ಓ ಪೂವಯ್ಯ, ರಾಷ್ಟ್ರೀಯ ಹೆದ್ದಾರಿ ರಾಜ್ಯ ಮುಖ್ಯ ಇಂಜಿನಿಯರ್ ರಘವೇಂದ್ರ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಹಾಜರಿದ್ದರು.

### ವಿಜ್ಞಾನಿಗಳಿಂದ ಪರಿಶೀಲನೆ

ಭೂ ಕುಸಿತ ಮತ್ತು ಭೂ ಕಂಪನ ಪೀಡಿತ ಕೊಡಗಿನ ಗಡಿ ಗ್ರಾಮಗಳಿಗೆ ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ ಮತ್ತು ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರದ ಹಿರಿಯ ಭೂ ವಿಜ್ಞಾನಿಗಳು ಆಗಮಿಸಿ ಪರಿಶೀಲನೆ ನಡೆಸಿದರು. ಕರಿಕೆ, ಚೆಂಬು, ಪೆರಾಜೆ ಮತ್ತಿತರ ಗ್ರಾಮಗಳಿಗೆ ತೆರಳಿದ ಜಿಎಸ್‌ಐ ಭೂ ಗರ್ಭ ಶಾಸ್ತ್ರ ಮತ್ತು ಭೂ ಕುಸಿತ ಅಧ್ಯಯನ ವಿಭಾಗದ ಡಾ.ಸಂಜೀವ್, ಹಿರಿಯ ಭೂ ವಿಜ್ಞಾನಿ ವಿ.ರಾಹುಲ್, ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರದ ಡಾ. ಜಿ.ಎಸ್. ಶ್ರೀನಿವಾಸ್ ರೆಡ್ಡಿ, ಭೂ ವಿಜ್ಞಾನಿ ಎಸ್.ಜಗದೀಶ್, ಸೂರತ್ಕಲ್ ಎನ್.ಐ.ಟಿ.ಕೆಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಶ್ರೀವಾಲ್ಸ ಕೊಳತ್ತಾಯರ್, ಡಾ.ಶ್ರೀಕುಮಾರ್ ಮತ್ತಿತರರು ಆಗಮಿಸಿ ವಾಸ್ತವ ಅಂಶಗಳ ಕುರಿತು ಅಧ್ಯಯನ ನಡೆಸಿದರು.

# ವಿರಾಜಪೇಟೆಯಲ್ಲಿ ಎಸಿ ಕೋರ್ಟ್ ಕಾರ್ಯಾರಂಭ

- ಪ್ರತಿ ಬುಧವಾರ ನಡೆಯಲಿರುವ ಕಲಾಪ
- ಪೊನ್ನಂಪೇಟೆ, ವಿರಾಜಪೇಟೆ ಜನರಿಗೆ ಅನುಕೂಲ



ವಿರಾಜಪೇಟೆ, ಜು.7– ವಕೀಲರ ಸಂಘದ ಹಲವು ವರ್ಷಗಳ ಪ್ರಯತ್ನ ಹಾಗೂ ಸ್ಥಳೀಯ ಶಾಸಕರ ಮುತುವರ್ಜಿಯಿಂದ ವಿರಾಜಪೇಟೆಯಲ್ಲಿ ಎಸಿ ಕೋರ್ಟ್ ಕಾರ್ಯಾರಂಭಗೊಂಡಿದೆ. ಇದರಿಂದ ಕಕ್ಷಿದಾರರಿಗೂ ಮತ್ತು ವಕೀಲರಿಗೂ ಅನುಕೂಲವಾಗಿದೆ ಎಂದು ವಕೀಲರ ಸಂಘದ ಅಧ್ಯಕ್ಷ ಐ.ಆರ್.ಪ್ರಮೋದ್ ಹೇಳಿದರು.

ವಿರಾಜಪೇಟೆ ಮಿನಿ ವಿಧಾನಸೌಧ ತಾಲೂಕು ಕಛೇರಿ ಸಭಾಂಗಣದಲ್ಲಿ ಜಿಲ್ಲಾ ಉಪವಿಭಾಗಧಿಕಾರಿ ನ್ಯಾಯಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೆವಿನ್ಯೂ ಪ್ರಕರಣದ ವಿಚಾರಣೆ ವಿರಾಜಪೇಟೆ ತಾಲೂಕು ತಹಸೀಲ್ದಾರ್ ಕಚೇರಿಯಲ್ಲಿ ಪ್ರತಿ ಬುಧುವಾರ ನಡೆಯಲಿದ್ದು, ಪೊನ್ನಂಪೇಟೆ ಮತ್ತು ವಿರಾಜಪೇಟೆ ತಾಲೂಕಿನ ಜನರು ದೂರದ ಮಡಿಕೇರಿಗೆ ಹೋಗಿ ಬರುವುದು ತಪ್ಪಿತಲ್ಲದೆ ಸಮಯ ಉಳಿತಾಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ವಿರಾಜಪೇಟೆ ತಹಸೀಲ್ದಾರ್ ಆರ್.ಯೋಗಾನಂದ ಅವರು ಮಾತನಾಡಿ ಜಿಲ್ಲಾ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಕಲಾಪ ವಿರಾಜಪೇಟೆ ತಾಲೂಕು ಮಟ್ಟದಲ್ಲಿ ನಡೆಯುತ್ತಿರುವುದು ರಾಜ್ಯದಲ್ಲಿಯೇ ಪ್ರಥಮ. ಇದು ಸಂತಸದ ವಿಚಾರವಾಗಿದೆ. ಇದರಿಂದ ಪೊನ್ನಂಪೇಟೆ ತಾಲೂಕಿನಿಂದ ಮಡಿಕೇರಿಗೆ ಹೋಗಿ ಬರುವುದಕ್ಕಿಂತ ವಿರಾಜಪೇಟೆ ಹತ್ತಿರ ಹಾಗೂ ಅನುಕೂಲವಾಗಿದೆ ಎಂದರು.

ಈ ಹಿಂದೆ ತಮ್ಮ ಕಚೇರಿಯಲ್ಲಿ 398 ಪ್ರಕರಣಗಳು ಬಾಕಿ ಇದ್ದು, ನಮ್ಮ ನ್ಯಾಯಾಲಯ ಕಲಾಪದಲ್ಲಿ ಈಗ 18 ಪ್ರಕರಣ ಮಾತ್ರ ಬಾಕಿ ಇರುವುದಾಗಿ ತಿಳಿಸಿದರಲ್ಲದೆ, ಉಪವಿಭಾಗಾಧಿಕಾರಿ ನ್ಯಾಯಾಲಯ ಕಲಾಪ ಮಿನಿವಿಧಾನ ಸೌಧ ಕಟ್ಟಡ ಕಾಮಗಾರಿ ಮುಗಿದ ಬಳಿಕ ಈ ನ್ಯಾಯಾಲಯ ಕಲಾಪಕ್ಕೆ ಅಗತ್ಯ ಕೊಠಡಿ ಮತ್ತು ಸೌಕರ್ಯ ಒದಗಿಸಲಾಗುವುದು ಎಂದರು.

ಸರಕಾರಿ ಅಪರ ಅಭಿಯೋಜಕರಾದ ಅನಿತಾ ಅವರು ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ವೇದಿಕೆಯಲ್ಲಿ ವಕೀಲರ ಸಂಘದ ಉಪಾಧ್ಯಕ್ಷ ಬಿ.ಎನ್. ಸುಬ್ಬಯ್ಯ, ಕಾರ್ಯದರ್ಶಿ ಎಂ.ಕೆ. ದಿನೇಶ್, ಖಜಾಂಚಿ ವಿ.ಜಿ. ರಾಕೇಶ್, ಸಮಿತಿ ಸದಸ್ಯೆ ಅನುಪಮ ಕಿಶೋರ್, ಸರ್ವೇ ಅಧೀಕ್ಷಕರಾದ ಬಾನಂಗಡ ಅರುಣ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಇಂದು ವಿಚಾರಗೋಷ್ಠಿ

ಮಡಿಕೇರಿ, ಜು.7– ಕೃಷ್ಣರಾಜಸಾಗರ, ಹಾರಂಗಿ, ಕಬಿನಿ ಮತ್ತು ಚಿಕ್ಕಹೊಳೆ ಅಣೆಕಟ್ಟೆಗಳ ನದಿ ಪಾತ್ರದಲ್ಲಿ ಪ್ರವಾಹದ ಸಂದರ್ಭದಲ್ಲಿ ಉಂಟಾಗಬಹುದಾದ ಪ್ರತಿಕೂಲ ಪರಿಣಾಮಗಳ ನಿರ್ವಹಣೆಯ ಕುರಿತು ಪಾಲುದಾರರ ಪಾತ್ರದ ಬಗ್ಗೆ ಅರಿವು ಮೂಡಿಸುವ ವಿಚಾರ ಗೋಷ್ಠಿ ಜು.8 ರಂದು ಬೆಳಗ್ಗೆ 11 ಗಂಟೆಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕು ಕೆಆರ್‌ಎಸ್ ಮೈಸೂರು ರಸ್ತೆಯ ಮೊಗರಹಳ್ಳಿ(ಮಂಟಿ) ಕುಸುಮ–ಚಂದ್ರಶೇಖರ್ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

# ಅಪಾಯದ ಮಟ್ಟ ತಲುಪಿದ ಕಾವೇರಿ: ತಗ್ಗು ಪ್ರದೇಶಗಳಿಗೆ ನುಗ್ಗಿದ ನೀರು

- ಕೆಲ ಗ್ರಾಮಗಳಲ್ಲಿ ಕಗ್ಗತ್ತಲು
- ಮನೆ ಬಿದ್ದು ಒಬ್ಬರಿಗೆ ಗಾಯ
- ಬರೆ ಕುಸಿತ, ನಿವಾಸಿಗಳ ಸ್ಥಳಾಂತರ

ಮಡಿಕೇರಿ,ಜು.7– ಕೊಡಗು ಜಿಲ್ಲೆಯಲ್ಲಿ ಭಾರೀ ಮಳೆ ಸುರಿಯುತ್ತಿದ್ದು, ಅಲ್ಲಲ್ಲಿ ಭೂ ಕುಸಿತವಾಗಿದೆಯಲ್ಲದೆ, ಮನೆಗಳಿಗೆ ಹಾನಿಯಾಗಿ ಜನ ಜೀವನ ಅಸ್ತವ್ಯಸ್ತಗೊಂಡಿದೆ. ಜೊತೆಗೆ ಪ್ರವಾಹದ ಪರಿಸ್ಥಿತಿ ಮುಂದುವರೆದಿದೆ.

ಭಾರೀ ಮಳೆ ಹಿನ್ನೆಲೆಯಲ್ಲಿ ಮನೆ ಹಾನಿ, ಪ್ರವಾಹ ಪರಿಸ್ಥಿತಿ ಮುಂದುವರೆದಿದೆ. ಶುಕ್ರವಾರ ಬೆಳಗಿನ 8.30ರವರೆಗೆ ಜಿಲ್ಲೆಯಾದ್ಯಂತ 3ನೇ ಬಾರಿಗೆ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಈ ಅವಧಿಯಲ್ಲಿ 115.6 ಮಿ.ಮೀ.ನಿಂದ 204 ಮಿಮೀ ವರೆಗೆ ವ್ಯಾಪಕ ಮಳೆ ಸುರಿಯಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕಾವೇರಿ ನದಿ ಪ್ರವಾಹ ಮಟ್ಟ ತಲುಪಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಭಾಗಮಂಡಲ–ಅಯ್ಯಂಗೇರಿ ರಸ್ತೆ ಕಳೆದ 4 ದಿನಗಳಿಂದ ನದಿ ನೀರಿನ ಪ್ರವಾಹದಲ್ಲಿ ಮುಳುಗಿದ್ದು, ರಸ್ತೆ ಸಂಚಾರ ಬಂದ್ ಆಗಿದೆ. ಮೂರ್ನಾಡು–ನಾಪೋಕ್ಲು ನಾಪೋಕ್ಲು–ಬೊಳಿಬಾಣೆ, ಸಿದ್ದಾಪುರ ಸಮೀಪದ ಕರಡಿಗೋಡು, ನೆಲ್ಯಹುದಿಕೇರಿ ಭಾಗಗಳಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದೆ.

ಗಾಳಿ ಸಹಿತ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಮರ ಮುರಿದು ವಿದ್ಯುತ್ ತಂತಿಗಳ ಮೇಲೆ ಬಿದ್ದ ಬಗ್ಗೆಯೂ ವರದಿಯಾಗಿದೆ. ದುರಸ್ತಿ ಕಾರ್ಯಗಳ ನಡುವೆಯೇ ಮಳೆಗೆ ಮರಗಳು ಮುರಿದು ಬೀಳುತ್ತಿರುವ ಪರಿಣಾಮ ಹಲವು ಗ್ರಾಮಗಳು ಕತ್ತಲಿನಲ್ಲಿ ಮುಳುಗಿವೆ.



**ಮನೆಗಳಿಗೆ ಹಾನಿ:** ಸುಂಟಿಕೊಪ್ಪ ಸಮೀಪದ ಗದ್ದೆಹಳ್ಳ ನಿವಾಸಿ ಖದೀಜ ಎಂಬವರ ಮನೆ ಮೇಲೆ ಬೀಟೆ ಮರ ಮುರಿದು ಬಿದ್ದಿದ್ದು, ಮನೆಗೆ ಹಾನಿಯಾಗಿದೆ. ಈ ಘಟನೆಯಲ್ಲಿ ಖದೀಜ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಸುಂಟಿಕೊಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಸುಂಟಿಕೊಪ್ಪ ಸಮೀಪದ ಕೆದಕಲ್ ಬಳಿ ದೇಜಪ್ಪ ಎಂಬವರಿಗೆ ಸೇರಿದ ಮನೆ ಗಾಳಿ ಮಳೆಗೆ ಸಂಪೂರ್ಣ ಕುಸಿದು ಬಿದ್ದು, ವಾಸಕ್ಕೆ ಯೋಗ್ಯವಿಲ್ಲದಾಗಿದೆ.

ಭಾಗಮಂಡಲ ವ್ಯಾಪ್ತಿಯಲ್ಲಿ ಭಾರೀ ಮಳೆ ಸುರಿಯುತ್ತಿದ್ದು, ಕೊಟ್ಟೂರು ಗ್ರಾಮದ ರಾಜು ಎಂಬವರ ಮನೆಯ ಪಕ್ಕದಲ್ಲೇ ಬರೆ ಜರಿದು ಬಿದ್ದಿದ್ದು, ಅಪಾಯ ಸ್ಥಿತಿ ಎದುರಾಗಿದೆ. ಈ ಕಾರಣದಿಂದ ಮನೆ ಮಂದಿಯನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ.

**ಲಘು ಭೂ ಕುಸಿತ:** ಮಡಿಕೇರಿ–ಮಾಣಿ ರಾಷ್ಟ್ರೀಯ ಹೆದ್ದಾರಿಯ ಕರ್ತೋಜೆ ಬಳಿ 2 ಬಾರಿ ಲಘು ಭೂ ಕುಸಿದು ಕೆಲಕಾಲ ರಸ್ತೆ ಸಂಪರ್ಕ ಬಂದ್ ಆಗಿತ್ತು ಜೆಸಿಬಿ ಸಹಾಯದಿಂದ ಮಣ್ಣನ್ನು ತೆರವುಗೊಳಿಸಿ ಹೆದ್ದಾರಿ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ ಮಧ್ಯಾಹ್ನದ ವೇಳೆ ಮಡಿಕೇರಿ–ಚೆಟ್ಟಳ್ಳಿ ರಸ್ತೆಯಲ್ಲಿಯೂ ಭೂ ಕುಸಿದು ಸಂಚಾರ ವ್ಯತ್ಯಯವಾಗಿತ್ತು. ಲೋಕೋಪಯೋಗಿ ಇಲಾಖೆ ಮಣ್ಣು ತೆರವುಗೊಳಿಸಿ ರಸ್ತೆ ಸಂಚಾರಕ್ಕೆ ಅನುವು ಮಾಡಿದೆ. ಮಡಿಕೇರಿ ಸಮೀಪದ ಹೆಬ್ಬೆಟ್ಟಗೇರಿ ಗ್ರಾಮದ ಕುಮಾರಸ್ವಾಮಿ ಬಡಾವಣೆಗೆ ತೆರಳುವ ಮಾರ್ಗದಲ್ಲಿ ಅಲ್ಪ ಪ್ರಮಾಣದ ಭೂ ಕುಸಿತವಾಗಿದ್ದು, ಪಂಚಾಯಿತಿ ವತಿಯಿಂದ ಮಣ್ಣನ್ನು ತೆರವುಗೊಳಿಸಲಾಗಿದೆ. ಮಡಿಕೇರಿ ಭಾಗಮಂಡಲ ರಸ್ತೆಯ ಬೆಟ್ಟಗೇರಿ ಬಳಿ ಮರ ರಸ್ತೆಗೆ ಮುರಿದು ಬಿದ್ದ ಪರಿಣಾಮ ವಾಹನಗಳು ಸಾಲುಗಟ್ಟಿ ನಿಲ್ಲುವಂತಾಯಿತು. ಅರಣ್ಯ ಇಲಾಖೆ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಮರ ತೆರವುಗೊಳಿಸಿದ ಬಳಿಕ ವಾಹನ ಸಂಚಾರ ಎಂದಿನಂತೆ ಮುಂದುವರೆಯಿತು.

**ದಾಖಲೆ ಸರಿಗಟ್ಟಿದ ಮಳೆ:** ಕೊಡಗು ಜಿಲ್ಲೆಯಲ್ಲಿ ಕಳೆದ ವರ್ಷದ ದಾಖಲೆಯ ಮಳೆಯನ್ನು ಈ ಬಾರಿಯ ಮಳೆ ಸರಿಗಟ್ಟಿದೆ. ಈ ಬಾರಿ ಜನವರಿಯಿಂದ ಜು.7ರ ಬೆಳಗಿನ 8.30ಕ್ಕೆ ಕೊನೆಗೊಂಡಂತೆ ಜಿಲ್ಲೆಯಾದ್ಯಂತ 1081.9 ಮಿಮೀ ಮಳೆಯಾಗಿದೆ ಇದೇ ಅವಧಿಯಲ್ಲಿ ಕಳೆದ ವರ್ಷ 951.61 ಮಿಮೀ ಮಳೆಯಾಗಿತ್ತು.

ಮಡಿಕೇರಿ ತಾಲೂಕಿಗೆ ಈ ವರ್ಷ 1588.02 ಮಿಮೀ, ಕಳೆದ ವರ್ಷ 1399.64 ಮಿಮೀ ಮಳೆಯಾಗಿತ್ತು. ವಿರಾಜಪೇಟೆ ವ್ಯಾಪ್ತಿಯಲ್ಲಿ ಈ ವರ್ಷ 869.64 ಮಿ.ಮೀ ಮಳೆ ಸುರಿದರೆ, ಕಳೆದ ವರ್ಷ 827.38 ಮಿ.ಮೀ. ಮಳೆ ದಾಖಲಾಗಿತ್ತು.

### ಇಂದು ಶಾಲಾ–ಕಾಲೇಜುಗಳಿಗೆ ರಜೆ

ಜಿಲ್ಲೆಯಾದ್ಯಂತ ಮತ್ತೆ ಆರೆಂಜ್ ಅಲರ್ಟ್ ಘೋಷಣೆ ಮಾಡಿರುವ ಬೆನ್ನಲ್ಲೆ ಶುಕ್ರವಾರವೂ ಜಿಲ್ಲೆಯ ಎಲ್ಲಾ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಭಾರೀ ಮಳೆ ಮುಂದುವರೆದಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ರಜೆಯನ್ನು ಜು.8ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಮಾಹಿತಿ ನೀಡಿದ್ದಾರೆ.

# ಬಿಜೆಪಿ ತೆಕ್ಕೆಗೆ ಗುಂಡ್ಲುಪೇಟೆ ಎಪಿಎಂಸಿ

## ಅಧ್ಯಕ್ಷರಾಗಿ ರವಿ, ಉಪಾಧ್ಯಕ್ಷರಾಗಿ ವೆಂಕಟನಾಯ್ಕ ಆಯ್ಕೆ


ಗುಂಡ್ಲುಪೇಟೆ,ಜು.7(ಸೋಮ್.ಜಿ)– ತೀವ್ರ ಕುತೂಹಲ ಕೆರಳಿಸಿದ್ದ ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆಡಳಿತ ಮಂಡಳಿ ಚುನಾವಣೆಯ ಗದ್ದುಗೆಯನ್ನು ಈ ಬಾರಿ ಬಿಜೆಪಿ ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಬಿಜೆಪಿಯ ಕಮರಹಳ್ಳಿ ರವಿ(ಶಿವಪ್ರಸಾದ್) ಅಧ್ಯಕ್ಷರಾಗಿ, ಸೋಮನಪುರ ವೆಂಕಟನಾಯ್ಕ ಉಪಾಧ್ಯಕ್ಷರಾಗಿ ತಲಾ 9 ಮತಗಳನ್ನು ಪಡೆದು ಆಯ್ಕೆಯಾದರು. ಇವರ ವಿರುದ್ಧ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ಆರ್.ಎಸ್. ನಾಗರಾಜು ಹಾಗೂ ರಾಜು 7 ಮತ ಪಡೆದು ಪರಾಜಿತರಾದರು ಎಂದು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ತಹಸೀಲ್ದಾರ್ ಸಿ.ಜಿ.ರವಿಶಂಕರ್ ಪ್ರಕಟಿಸಿದರು.

ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ತಲಾ 6 ಸ್ಥಾನಗಳನ್ನು ಪಡೆದುಕೊಂಡಿದ್ದರೂ ಮತದಾನದ ಹಕ್ಕು ಪಡೆದಿದ್ದ ಟಿಎಪಿಸಿಎಂಎಸ್ ಅಧ್ಯಕ್ಷರನ್ನೂ ಒಳಗೊಂಡಂತೆ ಕಾಂಗ್ರೆಸ್ 7 ಮತಗಳ ಬಲ ಹೊಂದಿತ್ತು. ಮೂವರು ನಾಮನಿರ್ದೇಶಿತರ ಬೆಂಬಲದಿಂದ ಬಿಜೆಪಿ 9 ಮತಗಳನ್ನು ಹೊಂದಿದ್ದರಿಂದ ನಿರಾಯಾಸವಾಗಿ ಗದ್ದುಗೆ ಹಿಡಿದಿದೆ. ಆದರೂ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರಿಂದ ಚುನಾವಣೆ ನಡೆಯಿತು.

ನಂತರ ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಶಾಸಕ ಸಿ.ಎಸ್. ನಿರಂಜನಕುಮಾರ್, ಇದೇ ಮೊದಲ ಬಾರಿಗೆ ಬಿಜೆಪಿ ತಾಲೂಕಿನಲ್ಲಿ ಎಪಿಎಂಸಿ ಗದ್ದುಗೆ ಹಿಡಿದಿದೆ. ತರಕಾರಿ ಬೆಳೆಯುವ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಾಗುವುದು. ಸಹಕಾರ ಇಲಾಖೆಯಿಂದ 6 ಕೋಟಿ ಅನುದಾನ ಬಿಡುಗಡೆಯಾಗುವ ಹಂತದಲ್ಲಿದ್ದು ಬೇಗೂರಿನಲ್ಲಿ ಹತ್ತಿ ಮಾರುಕಟ್ಟೆ ಆರಂಭಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಮುಖಂಡರಾದ ಎನ್. ಮಲ್ಲೇಶ್, ಕೊಡಸೋಗೆ ಶಿವಬಸಪ್ಪ ಇತರರು ಇದ್ದರು.



ಗುಂಡ್ಲುಪೇಟೆ ತಾಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ನೂತನ ಅಧ್ಯಕ್ಷ ಕಮರಹಳ್ಳಿ ರವಿ ಹಾಗೂ ಉಪಾಧ್ಯಕ್ಷ ವೆಂಕಟನಾಯ್ಕ ಅವರನ್ನು ಮುಖಂಡರು ಅಭಿನಂದಿಸಿದರು. ನಿರಂಜನಕುಮಾರ್, ಶಿವಬಸಪ್ಪ, ಗಿರೀಶ್ ಇದ್ದರು.

# ಜು.13ರಂದು ಚಾಮರಾಜನಗರದಲ್ಲಿ ಶ್ರೀ ಚಾಮರಾಜೇಶ್ವರಸ್ವಾಮಿ ಮಹಾರಥೋತ್ಸವ



ಚಾಮರಾಜನಗರ, ಜು.7– ಚಾಮರಾಜನಗರದಲ್ಲಿರುವ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ಕೆಂಪನಂಜಾಂಬ ಸಮೇತ ಶ್ರೀ ಚಾಮರಾಜೇಶ್ವರಸ್ವಾಮಿ ಯವರ ಮಹಾರಥೋತ್ಸವವು ಜು.13ರಂದು ನಡೆಯಲಿದೆ.

ಮಹಾರಥೋತ್ಸದ ಅಂಗವಾಗಿ ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿವೆ. ಈ ಹಿನ್ನೆಲೆಯಲ್ಲಿ ಗುರುವಾರ ಅಂಕುರಾರ್ಪಣ ಪೂರ್ವಕ ವೃಷಭಾಧಿವಾಸ ನೆರವೇರಿತು. 7ರಂದು ಬೆಳಿಗ್ಗೆ 11.30ರಿಂದ 12 ಗಂಟೆಗೆ ಕನ್ಯಾ ಲಗ್ನ ಮುಹೂರ್ತದಲ್ಲಿ ಧ್ವಜಾರೋಹಣ ಪೂರ್ವಕ ಬೇರಿತಾಡನಾನಂತರ ಶಿಭಿಕಾರೋಹಣೋತ್ಸವ ನಡೆಯಿತು. 8 ರಂದು ಚಂದ್ರಮಂಡಲಾರೋಹಣೋತ್ಸವ, 9 ರಂದು ಅನಂತ ಪೀಠಾರೋಹಣೋತ್ಸವ, 10 ರಂದು ಪುಷ್ಪಮಂಟಪಾರೋಹಣೋತ್ಸವ,11 ರಂದು ವೃಷಭಾರೋಹಣೋತ್ಸವ, 12 ರಂದು ವಸಂತೋತ್ಸವ ಪೂರ್ವಕ ಗಜ ವಾಹನೋತ್ಸವ ಕಾರ್ಯಕ್ರಮಗಳು ನಡೆಯಲಿವೆ.

ಜು.13ರಂದು ಪೂರ್ವಾಷಾಢ ನಕ್ಷತ್ರದಲ್ಲಿ ರಥಸ್ಥಂ ವೃಷಭಾರೂಢಂ ಚಂದ್ರನಾಲಿಪ್ತ ತಾಂಡವಂ, ಸೋಪಹಾರಂ ಶಿವಂ ದೃಷ್ಟ್ವಾ ಪುನರ್ಜನ್ಮವಿದ್ಯತೆ ಎಂಬ ಸಿದ್ಧಾಂತ ರೀತ್ಯ ಪ್ರಾತಃಕಾಲ 11 ರಿಂದ 11.30ರ ಶುಭ ಕನ್ಯಾ ಲಗ್ನದಲ್ಲಿ ಶ್ರೀಮನ್ಮಹಾರಥಾರೋಹಣ ನಡೆಯಲಿದೆ. ಅನಂತರ ಹಂಸಾರೋಹಣಾನಂತರ ನಟೇಶೋತ್ಸವ ಜರುಗಲಿದೆ.

ಜು.14ರಂದು ಮೃಗಾಯಾತ್ರಾ ಪೂರ್ವಕ ಅಶ್ವಾರೋಹಣಾನಂತರ ಮಹಭೂತಾರೋಹಣ, ದೇವಿ ಪ್ರಣಯಕಲಹ ಸಂಧಾನೋತ್ಸವ, 15ರಂದು ಹಗಲು ಚೂರ್ಣೋತ್ಸವ ಪೂರ್ವಕ ಅವಭೃತ ತೀರ್ಥಸ್ನಾನ ರಾತ್ರಿ ಧ್ವಜಾವರೋಹಣ, ಮೌನಬಲಿ, 16ರಂದು ಪುಷ್ಪಯಾಗ ಪೂರ್ವಕ ಕೈಲಾಸಯಾನಾ ರೋಹಣೋತ್ಸವ, 17ರಂದು ಮಹಾಸಂಪ್ರೋಕ್ಷಣಾ ಪೂರ್ವಕ ನಂದಿವಾಹನೋತ್ಸವ ಕಾರ್ಯಕ್ರಮಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

# ಸಿಸಿ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ

ಹನೂರು, ಜು.7(ಸೋಮು)– ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವ ಮೂಲಕ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು ಎಂದು ಶಾಸಕ ಆರ್. ನರೇಂದ್ರ ಸೂಚಿಸಿದ್ದಾರೆ.

ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುರುಬರದೊಡ್ಡಿ, ಚಿಗತಾಪುರ, ಡಿ.ಎಂ ಸಮುದ್ರ ಹಾಗೂ ಕೌದಳ್ಳಿ ಗ್ರಾಮದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.



ಕಳೆದ ಬಾರಿ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸೋಲಿಗರ ಪೋಡುಗಳು ಸೇರಿದಂತೆ ವಿವಿಧ ಗ್ರಾಮಗಳ ಎಸ್ಸಿ, ಎಸ್ಟಿ ಕಾಲೊನಿಯಲ್ಲಿ ಶೇ.80ರಷ್ಟು ಸಿಸಿ ರಸ್ತೆ ಹಾಗೂ ಚರಂಡಿಯನ್ನು ನಿರ್ಮಿಸಲಾಗಿತ್ತು. ಆದರೆ ಅನುದಾನದ ಕೊರತೆಯಿಂದ ಕಾಮಗಾರಿ ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ ಎಂದು ಅವರು ಹೇಳಿದರು.

ಪ್ರಸ್ತುತ ಕ್ರಿಯಾ ಯೋಜನೆ ತಯಾರಿಸಿ ಅನುದಾನ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಹಾಗಾಗಿ ವಿಧಾನಸಭಾ ಕ್ಷೇತ್ರಕ್ಕೆ ಆರ್‌ಡಿಪಿಆರ್ ಯೋಜನೆಯಡಿ 5 ಕೋಟಿ ರೂ. ಅನುದಾನ ದೊರಕಿದ್ದು, ಇದರಲ್ಲಿ ತಲಾ 15 ಲಕ್ಷ ರೂ. ವೆಚ್ಚದಡಿ ಕುರುಬರದೊಡ್ಡಿ, ಚಿಗತಾಪುರ, ಗುಳ್ಯಪುದುನಗರ, ಎಂ.ಜಿ. ದೊಡ್ಡಿ ಹಾಗೂ 90 ಲಕ್ಷ ರೂ. ವೆಚ್ಚದಡಿ ಕೌದಳ್ಳಿಯಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆಯನ್ನು ನೆರವೇರಿಸಲಾಗುತ್ತಿದೆ. ಕಾಮಗಾರಿಯ ಜವಾಬ್ದಾರಿ ಹೊತ್ತವರು ಕಾಮಗಾರಿಯಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ರಾಮಪುರ ಬಸವರಾಜು, ಎಲ್ಲೇಮಾಳ ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಿ, ಕೌದಳ್ಳಿ ಗ್ರಾಪಂ ಅಧ್ಯಕ್ಷ ನಾಗರಾಜು ಸದಸ್ಯ ರಾದ ವಾಜೀದ್, ಗುತ್ತಿಗೆದಾರರಾದ ಚಾಂದ್ ಪಾಷಾ, ಸಿಕಂದರ್ ಪಾಷಾ, ಮುಖಂಡರಾದ ಅಜ್ಜಿಪುರ ನಾಗರಾಜು, ನಸ್ರುಲ್ಲಾ ಇನ್ನಿತರರು ಹಾಜರಿದ್ದರು.

## ಇಂದು ಶ್ವಾನ, ಬೆಕ್ಕುಗಳಿಗೆ ರೇಬೀಸ್ ಚುಚ್ಚುಮದ್ದು

ಚಾಮರಾಜನಗರ, ಜು.7– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಆಚರಿಸಲಾಗುವ ವಿಶ್ವ ಪ್ರಾಣಿ ಜನ್ಯ ದಿನದ ಅಂಗವಾಗಿ ಶ್ವಾನ ಹಾಗೂ ಬೆಕ್ಕುಗಳಿಗೆ ರೇಬೀಸ್ ಚುಚ್ಚುಮದ್ದು ಕಾರ್ಯಕ್ರಮವನ್ನು ಜು.8ರಂದು ಬೆಳಿಗ್ಗೆ 9 ಗಂಟೆಗೆ ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿರುವ ಇಂದಿರಾ ಕ್ಯಾಂಟೀನ್ ಹಿಂಭಾಗವಿರುವ ಜಿಲ್ಲಾ ಪಶುವೈದ್ಯಕೀಯ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪಶುಪಾಲನಾ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೋವಿಡ್ ಲಸಿಕೆ ಪಡೆದ ವಿದ್ಯಾರ್ಥಿನಿಯರು ಅಸ್ವಸ್ಥ



ಚಾಮರಾಜನಗರ, ಜು.6(ಎಸ್‌ಎಸ್)– ಕೋವಿಡ್ ಲಸಿಕೆ ಪಡೆದ ನಂತರ ಕೆಲವು ವಿದ್ಯಾರ್ಥಿನಿಯರು ಅಸ್ವಸ್ಥಗೊಂಡ ಘಟನೆ ತಾಲೂಕಿನ ಜ್ಯೋತಿಗೌಡನಪುರ ಗ್ರಾಮದಲ್ಲಿರುವ ಕಿತ್ತೂರು ಚನ್ನಮ್ಮ ವಸತಿ ಶಾಲೆಯಲ್ಲಿ ನಡೆದಿದೆ.

ವಸತಿ ಶಾಲೆಯಲ್ಲಿರುವ 17 ವಿದ್ಯಾರ್ಥಿಗಳಿಗೆ ಬುಧವಾರ ಕೋವಿಡ್ ಲಸಿಕೆ ಹಾಕಲಾಗಿತ್ತು. ಇವರಲ್ಲಿ ಓರ್ವ ವಿದ್ಯಾರ್ಥಿನಿ ರಾತ್ರಿ ಅಸ್ವಸ್ಥಗೊಂಡಳು. ಆಕೆಯನ್ನು ತಕ್ಷಣವೇ ನಗರದ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಯಿತು. ಶುಕ್ರವಾರ ಬೆಳಗ್ಗೆ ಲಸಿಕೆ ಪಡೆದ ವಿದ್ಯಾರ್ಥಿಗಳು ಹಾಗೂ ಲಸಿಕೆ ಪಡೆಯದಿದ್ದರೂ ಸಹ ಭಯಗೊಂಡ ವಿದ್ಯಾರ್ಥಿನಿಯರು ಸೇರಿ 21 ವಿದ್ಯಾರ್ಥಿನಿಯರು ಅಸ್ವಸ್ಥಗೊಂಡರು. ಈ ಎಲ್ಲರನ್ನೂ ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತು. ಶಾಲೆಯ ಪ್ರಾಂಶುಪಾಲ ಗೌರಿಶಂಕರ್ ಈ ಬಗ್ಗೆ ಮಾಹಿತಿ ನೀಡಿದ್ದು, ವಿದ್ಯಾರ್ಥಿನಿಯರು ಎಲ್ಲರೂ ಈಗ ಚೆನ್ನಾಗಿದ್ದು, ಆಸ್ಪತ್ರೆಯಿಂದ ಬಿಡುಗಡೆಗೊಂಡಿದ್ದಾರೆ ಎಂದರು.

## ರೈತ ಮುಖಂಡ ಎ.ಎಸ್. ಚನ್ನಬಸಪ್ಪ ನಿಧನ



ಚಾಮರಾಜನಗರ, ಜು.7(ಎಸ್‌ಎಸ್)– ರೈತ ಸಂಘದ ಸಕ್ರಿಯ ಮುಖಂಡರು ಹಾಗೂ ಚಾಮರಾಜನಗರ ತಾಲೂಕು ತೆಂಗು ಬೆಳೆಗಾರರ ಸಂಸ್ಕರಣ ಮತ್ತು ಮಾರಾಟ ಸಹಕಾರ ಸಂಘದ ಅಧ್ಯಕ್ಷರೂ ಆಗಿದ್ದ ತಾಲೂಕಿನ ಆಲೂರು ಗ್ರಾಮದ ನಿವಾಸಿ ಎ.ಎಸ್. ಚನ್ನಬಸಪ್ಪ (59) ಅವರು ಗುರುವಾರ ಮಧ್ಯಾಹ್ನ ನಿಧನರಾದರು.

ಮೃತ ಎ.ಎಸ್. ಚನ್ನಬಸಪ್ಪ ಅವರು ರೈತ ಸಂಘದ ಮುಂಚೂಣಿ ನಾಯಕರಾಗಿದ್ದರು. ರೈತ ಸಂಘದ ಜಿಲ್ಲಾ ಉಪಾಧ್ಯಕ್ಷರಾಗಿದ್ದರು.

ಮೃತರು ಪತ್ನಿ, ಪುತ್ರ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಜು.8) ಮಧ್ಯಾಹ್ನ 12 ಗಂಟೆಗೆ ಅವರ ಸ್ವಗ್ರಾಮ ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದಲ್ಲಿ ನಡೆಯಲಿದೆ. **ಸಂತಾಪ:** ಎ.ಎಸ್. ಚನ್ನಬಸಪ್ಪ ಅವರ ನಿಧನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸಂತಾಪ ಸೂಚಿಸಿದ್ದಾರೆ.

## ಅಲಮೇಲಮ್ಮ



ಗುಂಡ್ಲುಪೇಟೆ, ಜು.7(ಸೋಮ್.ಜಿ)– ತಾಲೂಕು ಬ್ರಾಹ್ಮಣ ಸಭಾ ಅಧ್ಯಕ್ಷರು ಹಾಗೂ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಪ್ರಧಾನ ಅರ್ಚಕರಾದ ಗೋಪಾಲಕೃಷ್ಣ ಭಟ್ಟರ ತಾಯಿ ಹಾಗೂ ತಾಲೂಕಿನ ಕಣ್ಣೇಗಾಲ ಗ್ರಾಮದ ವಾಸಿ ಅಲಮೇಲಮ್ಮ(86) ಬುಧವಾರ ರಾತ್ರಿ ನಿಧನರಾದರು.

ದಿವಂಗತರು ಗೋಪಾಲಕೃಷ್ಣ ಭಟ್ ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿ ಮತ್ತು ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು. ಶಾಸಕ ಸಿ.ಎಸ್.ನಿರಂಜನಕುಮಾರ್, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ಚಾಮುಲ್ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜುಂಡಪ್ರಸಾದ್, ಚಾಮುಲ್ ನಿರ್ದೇಶಕ ಎಂ.ಪಿ.ಸುನಿಲ್, ಹೆಚ್.ಎಂ. ಗಣೇಶ್ ಪ್ರಸಾದ್ ಸೇರಿದಂತೆ ಗಣ್ಯರು ಅಂತಿಮದರ್ಶನ ಪಡೆದರು.

**ಸಂತಾಪ:** ಅಲಮೇಲಮ್ಮ ಅವರ ನಿಧನಕ್ಕೆ ತಾಲೂಕು ಬ್ರಾಹ್ಮಣ ಸಮಾಜ, ವಿಪ್ರ ಮಹಿಳಾ ಸಂಘ ಹಾಗೂ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಸೋಮಶೇಖರ್ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.

## ಚಿಕ್ಕಮಾದಪ್ಪ



ಗುಂಡ್ಲುಪೇಟೆ ಜು–7 (ಸೋಮ್.ಜಿ) ತಾಲೂಕಿನ ಚಿಕ್ಕತುಪ್ಪೂರು ಗ್ರಾಮದ ವಾಸಿ ನಿವೃತ್ತ ಶಿಕ್ಷಕ ಚಿಕ್ಕಮಾದಪ್ಪ(89) ಬುಧವಾರ ರಾತ್ರಿ ನಿಧನರಾದರು.

ತಾಲೂಕು ನಿವೃತ್ತ ನೌಕರರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಮೃತರು ಪತ್ನಿ ಮಲ್ಲಮ್ಮಣ್ಣಮ್ಮ, ಮೂವರು ಪುತ್ರರು, ಮೂವರು ಪುತ್ರಿಯರು ಸೇರಿ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು.

**ಅಂತಿಮ ದರ್ಶನ:** ಶಾಸಕ ಸಿ.ಎಸ್.ನಿರಂಜನಕುಮಾರ್, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್. ನಂಜಪ್ಪ, ಚಾಮುಲ್ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜುಂಡಪ್ರಸಾದ್, ಮುಖಂಡ ಹೆಚ್.ಎಂ. ಗಣೇಶ್ ಪ್ರಸಾದ್ ಸೇರಿದಂತೆ ಹಲವಾರು ಗಣ್ಯರು ಅಂತಿಮದರ್ಶನ ಪಡೆದರು.

# ರಾಜ್ಯ ಮುಖಂಡರು, ಶಾಸಕರು ಸೇರಿದಂತೆ ಗಣ್ಯರನ್ನು ನಿಂದಿಸಿದ್ದಕ್ಕೆ ದಯಾನಿಧಿ ಉಚ್ಚಾಟನೆ

ಚಾಮರಾಜನಗರ, ಜು.7(ಎಸ್‌ಎಸ್)– ತಾಪಂ ಮಾಜಿ ಉಪಾಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಪಿ.ಎಸ್. ದಯಾನಿಧಿ ಅವರು ಚಾಮುಲ್ ಅಧ್ಯಕ್ಷರ ಚುನಾವಣೆ ದಿನದಂದು ಪಕ್ಷದ ರಾಜ್ಯ ಮುಖಂಡರು, ಶಾಸಕರು, ಮಾಜಿ ಶಾಸಕರು, ಜಿಲ್ಲಾ ಅಧ್ಯಕ್ಷರು ಹಾಗೂ ಮುಖಂಡರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಹಾಗಾಗಿ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ಪಕ್ಷದ ಜಿಲ್ಲಾ ವಕ್ತಾರರೂ ಆದ ಚಾಮುಲ್ ನಿರ್ದೇಶಕ ಅಯ್ಯನಪುರ ಶಿವಕುಮಾರ್ ಸ್ಪಷ್ಟಪಡಿಸಿದರು.

ನಗರದಲ್ಲಿ ಗುರುವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಯಾನಿಧಿ ಅವರು ಕಳೆದ ಎರಡು ವರ್ಷಗಳಿಂದಲೂ ಪಕ್ಷದ ಮುಖಂಡರು, ಕಾರ್ಯಕರ್ತರಲ್ಲಿ ಗೊಂದಲವನ್ನುಂಟು ಮಾಡುತ್ತಿದ್ದರು. ನಾನಾ ಸಂದರ್ಭಗಳಲ್ಲಿ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದರು. ಅವರಿಗೆ ಅನೇಕ ಬಾರಿ ಎಚ್ಚರಿಕೆ ನೀಡಿದ್ದರೂ ಸಹ ಅವರು, ತಮ್ಮ ತಪ್ಪನ್ನು ತಿದ್ದಿಕೊಳ್ಳಲಿಲ್ಲ ಹಾಗಾಗಿ ರಾಜ್ಯ ಮುಖಂಡರ ಸೂಚನೆ ಮೇರೆಗೆ ಪಕ್ಷದಿಂದ 6 ವರ್ಷಗಳ ಕಾಲ ಉಚ್ಚಾಟಿಸಲಾಯಿತು ಎಂದು ಅವರು ಸ್ಪಷ್ಟಪಡಿಸಿದರು.

ಬಿ.ಎಸ್.ಯಡಿಯೂರಪ್ಪ ಅವರು ಪಕ್ಷದ ಪ್ರಶ್ನಾತೀತ ನಾಯಕರು. ಅವರ ಪುತ್ರ ಬಿ.ಎಸ್. ವಿಜಯೇಂದ್ರ ರಾಜ್ಯ ಉಪಾಧ್ಯಕ್ಷರಾಗಿದ್ದಾರೆ. ಇವರಿಬ್ಬರನ್ನು ಪಕ್ಷದಿಂದ ಮೂಲೆಗುಂಪು ಮಾಡುತ್ತಿದ್ದಾರೆ. ನಾನು ಇವರಿಬ್ಬರ ಬೆಂಬಲಿಗ ಎಂಬ ಕಾರಣಕ್ಕೆ ನನ್ನನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ದಯಾನಿಧಿ ಅವರು ಸುಳ್ಳು ಹೇಳುತ್ತಿದ್ದಾರೆ. ಈ ಮೂಲಕ ಪಕ್ಷದಲ್ಲಿ ಗೊಂದಲ ಸೃಷ್ಟಿಮಾಡುತ್ತಿದ್ದಾರೆ ಎಂದು ಶಿವಕುಮಾರ್ ಆರೋಪಿಸಿದರು.

ಜಿಲ್ಲೆ ಬಿಜೆಪಿಯಲ್ಲಿ ಗುಂಪುಗಾರಿಕೆ ಇಲ್ಲ. ಚುನಾವಣೆಯಲ್ಲಿ ಗೆಲುವಷ್ಟೇ ಗುರಿಯಾಗಿರುವುದರಿಂದ ಯಾರೊಬ್ಬ ಮುಖಂಡರೂ ಹಾಗೂ ಕಾರ್ಯಕರ್ತರ ಮೇಲೆ ಕ್ರಮಕೈಗೊಳ್ಳುವುದಿಲ್ಲ. ಆದರೆ ದಯಾನಿಧಿ ಅವರ ಮೇಲೆ ಸಾಕಷ್ಟು ದೂರುಗಳು ಬಂದ ಹಿನ್ನೆಲೆಯಲ್ಲಿ ಉಚ್ಚಾಟಿಸಲಾಗಿದೆ ಹೊರತು ಬೇರೆ ಯಾವುದೇ ಕಾರಣ ಇಲ್ಲ ಎಂದು ಪ್ರಶ್ನೆಗಳಿಗೆ ಉತ್ತರಿಸಿದರು.

ಜಿಪಂ ಮಾಜಿ ಸದಸ್ಯ ಸಿ.ಎನ್. ಬಾಲರಾಜು, ಟ್ರಕ್ ಟರ್ಮಿನಲ್ ಮಾಜಿ ಅಧ್ಯಕ್ಷ ಹನುಮಂತ ಶೆಟ್ಟಿ, ತಾಲೂಕು ಅಧ್ಯಕ್ಷ ಬಸವಣ್ಣ, ಚಾಮುಲ್ ಮಾಜಿ ನಿರ್ದೇಶಕ ಕಿಲಗೆರೆ ಬಸವರಾಜು, ಟೌನ್ ಅಧ್ಯಕ್ಷ ರಾಜು, ಮಾಧ್ಯಮ ಪ್ರಮುಖ್ ಚಂದ್ರಶೇಖರ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಒಂದನೇ ಪುಟದಿಂದ

## 6 ಸಾವಿರ ನಿವೇಶನ ಹಂಚಿಕೆ ಘೋಷಣೆ

ಅಧಿಕಾರಕ್ಕೆ ಬಂದ ಮೇಲೆ 65 ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು ಜನರಿಗೆ ಅಂತಿಮ ಕಂತಿನಲ್ಲಿ ಆರು ಸಾವಿರ ಮನೆಗಳನ್ನು ಒದಗಿಸಲು ತೀರ್ಮಾನಿಸಲಾಗಿದೆ ಎಂದರು. ಮೈಸೂರಿನ ಕೆ.ಆರ್.ಎಸ್. ನಿಸರ್ಗ ಬಡಾವಣೆಯಲ್ಲಿ 523 ನಿವೇಶನಗಳನ್ನು ಜುಲೈ 8 ರಂದು, ದಾವಣಗೆರೆ, ಹರಿಹರದಲ್ಲಿ ಇದೇ 20 ರಂದು 568 ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು. ಅಲ್ಲದೆ ಬಳ್ಳಾರಿ,ವಿಜಯಪುರ,ಗದಗ,ಹುನಗುಂಡ ಸೇರಿದಂತೆ ರಾಜ್ಯದ ವಿವಿಧೆಡೆ ಬಡಾವಣೆಗಳನ್ನು ನಿರ್ಮಿಸಲಾಗಿದ್ದು ಹಂಚಿಕೆ ಮಾಡಲಾಗುವುದು ಎಂದರು. ನಿವೇಶನ ಹಂಚಿಕೆ ಮಾಡಲು ಮುಖ್ಯ ಇಂಜಿನಿಯರ್ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ, ಸಮಿತಿಯು ಅರ್ಜಿದಾರರ ಮುಂದೆಯೇ ಸಾರ್ವಜನಿಕವಾಗಿ ಲಾಟರಿ ಎತ್ತಿ, ನಿವೇಶನಗಳನ್ನು ಹಂಚಲಾಗುವುದು ಎಂದು ಸ್ಪಷ್ಟಪಡಿಸಿದರು.

ಅಂದ ಹಾಗೆ ಮುಂದಿನ ದಿನಗಳಲ್ಲಿ ಗೃಹ ಮಂಡಳಿಯ ವತಿಯಿಂದ ಭೂ ಸ್ವಾಧೀನ ಮಾಡಿಕೊಂಡು ಜನರಿಗೆ ನಿವೇಶನ ಹಂಚಿಕೆ ಮಾಡುವ, ಮನೆ ನಿರ್ಮಿಸಿಕೊಡುವ ಕೆಲಸದಿಂದ ಹಿಂದೆ ಸರಿದರೂ, ನಿವೇಶನಗಳನ್ನು ಅಭಿವೃದ್ಧಿಪಡಿಸಲು ರೈತರು ಸಹಭಾಗಿತ್ವ ನೀಡಿದರೆ ಅದನ್ನು ಒಪ್ಪಿಕೊಳ್ಳುವುದಾಗಿ ಸೋಮಣ್ಣ ಹೇಳಿದರು.

ಕನಿಷ್ಠ ಐವತ್ತು ಎಕರೆ ಭೂಮಿ ಒದಗಿಸಲು ರೈತರು ಸಜ್ಜಾದರೆ ಅಂತಹವರ ಜತೆ ಒಪ್ಪಂದ ಮಾಡಿಕೊಂಡು ನಿವೇಶನಗಳನ್ನು ಅಭಿವೃದ್ಧಿಪಡಿಸುತ್ತೇವೆ. ಜಿಲ್ಲಾ ಮಟ್ಟದಲ್ಲಿ ಈ ಸಹಭಾಗಿತ್ವದಡಿ ಸರ್ಕಾರಕ್ಕೆ ಶೇಕಡಾ ಐವತ್ತರಷ್ಟು ಪಾಲು ನೀಡಬೇಕು,ಉಳಿದ ಐವತ್ತರಷ್ಟು ಭೂಮಿಯನ್ನು ಅಭಿವೃದ್ಧಿಪಡಿಸಿ, ರೈತರಿಗೆ ಕೊಡುತ್ತೇವೆ ಎಂದು ನುಡಿದರು.

ಇದೇ ರೀತಿ ತಾಲೂಕು ಮಟ್ಟದಲ್ಲಿ ರೈತರು ಒದಗಿಸುವ ಭೂಮಿಗೆ ಶೇಕಡಾ 60:40ರ ಅನುಪಾತದಲ್ಲಿ ಒಪ್ಪಂದ ಮಾಡಿಕೊಳ್ಳಲಾಗುವುದು ಎಂದ ಅವರು,ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ಶೇಕಡಾ 60ರಷ್ಟು ಭೂಮಿಯನ್ನು ಸರ್ಕಾರ ಇಟ್ಟುಕೊಂಡು ಶೇಕಡಾ 40 ರಷ್ಟು ಭೂಮಿಯನ್ನು ರೈತರಿಗೆ ಬಿಟ್ಟು ಕೊಡಲಿದೆ ಎಂದು ನುಡಿದರು. ಕೇವಲ ಭೂ ಒಡೆಯರಾದ ರೈತರ ಜತೆ ಮಾತ್ರ ಸಹಭಾಗಿತ್ವ ಮಾಡಿಕೊಳ್ಳಲಾಗುವುದೇ ವಿನಃ ನಮ್ಮ ಬಳಿ ಭೂಮಿ ಇದೆ ಎಂದು ರೈತರಲ್ಲದವರು ಮುಂದೆ ಬಂದರೆ ಅದನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

## ಈ ಸಲ ಅದ್ದೂರಿ ದಸರಾ

ಅವರು ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿ, ದಸರಾ ಗಜಪಡೆಯ ಅಂತಿಮ ಪಟ್ಟಿಯನ್ನು ಜು.30ರೊಳಗೆ ಸಿದ್ಧಪಡಿಸಲಾಗುವುದು. ಇನ್ನೆರಡು ದಿನದಲ್ಲಿ ಈ ವರ್ಷದ ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಆನೆಗಳ ಆರೋಗ್ಯ ತಪಾಸಣೆ ಆರಂಭಿಸಿ, ಜು.20ರೊಳಗೆ ಪೂರ್ಣಗೊಳಿಸಲಾಗುವುದು. ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಆನೆಗಳಲ್ಲಿ ನಾಗರಹೊಳೆಯ ತಿತಿಮತಿ ಹಾಗೂ ಸುತ್ತಮುತ್ತಲಿನ ಆನೆ ಶಿಬಿರ, ಕೊಡಗು ಜಿಲ್ಲೆಯ ದುಬಾರೆ ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ರಾಮಾಪುರ ಆನೆ ಶಿಬಿರದಿಂದ ಆನೆಗಳನ್ನು ಆಯ್ಕೆ ಮಾಡಲಾಗುತ್ತದೆ. ಆರೋಗ್ಯ ತಪಾಸಣೆ ಪೂರ್ಣಗೊಂಡ ಬಳಿಕ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಿ, ಅನುಮತಿಗಾಗಿ ಸರ್ಕಾರಕ್ಕೆ ಕಳುಹಿಸಲಾಗುತ್ತದೆ ಎಂದರು.

ಈ ಬಾರಿ ದಸರಾ ಮಹೋತ್ಸವ 10 ದಿನ ಮುಂಚಿತವಾಗಿ ಬಂದಿದೆ. ಅ.5ರಂದು ಜಂಬೂಸವಾರಿ ನೆರವೇರಲಿದೆ. ಸರ್ಕಾರ ಈ ಬಾರಿ ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ನಡೆಸಲು ನಿರ್ಧರಿಸಿದರೆ, ಅರಮನೆಯಿಂದ ಬನ್ನಿಮಂಟಪದವರೆಗೆ ಜಂಬೂಸವಾರಿ ಮೆರವಣಿಗೆ ಸಾಗಲಿದೆ. ಹಾಗಾಗಿ ಜಂಬೂಸವಾರಿಗೂ 55 ದಿನ ಮುಂಚಿತವಾಗಿ ಆನೆಗಳನ್ನು ಮೈಸೂರಿಗೆ ಕರೆತರಬೇಕಾಗುತ್ತದೆ. ಈಗಾಗಲೇ ವಿವಿಧ ಆನೆ ಶಿಬಿರಗಳಲ್ಲಿರುವ ಆನೆಗಳ ಬಗ್ಗೆ ಮಾಹಿತಿ ಪಡೆಯುವ ಪ್ರಕ್ರಿಯೆ ಆರಂಭವಾಗಿದೆ. ಆನೆಗಳ ಆರೋಗ್ಯ ಸ್ಥಿತಿ, ಗಂಡಾನೆಗಳ ಮಸ್ತಿ, ಸ್ವಭಾವ, ಆರೋಗ್ಯ ಮಾಹಿತಿ, ಹೆಣ್ಣಾನೆ ದೇಹ ಸ್ಥಿತಿ ಖಚಿತಪಡಿಸಿಕೊಂಡ ಬಳಿಕ ಮತ್ತೊಮ್ಮೆ ಆರೋಗ್ಯ ತಪಾಸಣೆ ನಡೆಸಿ, ಪಶುವೈದ್ಯರಿಂದ ಆನೆಗಳು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಫಿಟ್ ಆಗಿರುವ ದೃಢೀಕರಣ ಪಡೆದ ಬಳಿಕವೇ ಪಟ್ಟಿ ಸಿದ್ಧಪಡಿಸಲಾಗುತ್ತದೆ ಎಂದು ತಿಳಿಸಿದರು. ಆನೆಗಳ ಅಂತಿಮ ಪಟ್ಟಿ ಸಲ್ಲಿಸಿದ ಬಳಿಕ ದಸರಾ ಕಾರ್ಯನಿರ್ವಾಹಕ ಸಮಿತಿ, ದಸರಾ ಉನ್ನತ ಮಟ್ಟದ ಸಮಿತಿಗೆ ಸಲ್ಲಿಸಿ, ಒಪ್ಪಿಗೆ ಪಡೆಯಲಾಗುವುದು. ಆ ನಂತರವಷ್ಟೇ ಗಜಪಯಣಕ್ಕೆ ದಿನಾಂಕ, ಅರಮನೆಗೆ ಆನೆಗಳ ಪ್ರವೇಶದ ದಿನಾಂಕ ನಿಗಧಿ ಮಾಡಲಾಗುತ್ತದೆ. ತಾಲೀಮು ಹಾಗೂ ಆನೆಗಳ ಆರೈಕೆಗೆ ಕನಿಷ್ಠ 55 ದಿನದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

**ಅರ್ಜುನ ಭಾಗಿ:** ಅಂಬಾರಿ ಆನೆ ಅಭಿಮನ್ಯು ನಮ್ಮ ಹೀರೋ. ಈ ವರ್ಷ ಆತನೇ ಅಂಬಾರಿ ಹೊರುವ ಬಗ್ಗೆ ನಿರ್ಧಾರವಾಗಬೇಕು. ಆತನ ಆರೋಗ್ಯ ಚೆನ್ನಾಗಿರಬೇಕು. ಅದರೊಂದಿಗೆ ಮಹೇಂದ್ರ, ಭೀಮ, ಧನಂಜಯ ಆನೆಗಳು ಅಂಬಾರಿ ಹೊರುವ ಸಾಮರ್ಥ್ಯ ಹೊಂದಿವೆ. 6 ಬಾರಿ ಅಂಬಾರಿ ಹೊತ್ತಿರುವ ಅರ್ಜುನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದರು.

## ನಕಲಿ ಟಿಟಿಇ ಬಂಧನ

ರೈಲಿನಲ್ಲೇ ಕಾಲ ಕಳೆಯುತ್ತಿದ್ದ ಮಲ್ಲೇಶ್, ದಿನಕ್ಕೊಂದು ಮಾರ್ಗ ಬದಲಿಸುತ್ತಾ, ಬೇರೆ ಬೇರೆ ರೈಲುಗಳಲ್ಲಿ ಕಾರ್ಯಾಚರಣೆ ನಡೆಸಿ, ರೈಲ್ವೆ ಇಲಾಖಾ ಅಧಿಕಾರಿಗಳಿಗೆ ಸಿಕ್ಕಿ ಬೀಳದಂತೆ ಚಾಕಚಕ್ಯತೆಯಿಂದ ಹಣ ವಸೂಲಿ ಮಾಡುತ್ತಿದ್ದ ಎಂದು ಆರ್‌ಪಿಎಫ್ ಸಿಬ್ಬಂದಿಗಳಿಗೆ ತಿಳಿದುಬಂದಿದೆ. ವಿಚಾರಣೆ ನಡೆಸಿದ ನಂತರ ಆರೋಪಿಯನ್ನು ಹೆಚ್ಚಿನ ತನಿಖೆಗಾಗಿ ರೈಲ್ವೆ ಪೊಲೀಸರಿಗೆ ಒಪ್ಪಿಸಲಾಗಿದೆ. ಪ್ರಕರಣವೂ ದಾಖಲಾಗಿದ್ದು, ಪೊಲೀಸರು, ಆತನ ಪೂರ್ವಾಪರ ಮಾಹಿತಿ ಸಂಗ್ರಹಿಸುತ್ತಿದ್ದಾರೆ ಎಂದು ಅಸಿಸ್ಟೆಂಟ್ ರೈಲ್ವೆ ಕಮರ್ಷಿಯಲ್ ಮ್ಯಾನೇಜರ್ ರಂಗನಾಥರೆಡ್ಡಿ ತಿಳಿಸಿದ್ದಾರೆ.

ದಂಡ ವಸೂಲಿ ಮಾಡಿದ ಟಿಟಿಇ ರಶೀದಿ ನೀಡುತ್ತಿಲ್ಲ ಎಂದು ತಿಂಗಳ ಹಿಂದೆಯೇ ಪ್ರಯಾಣಿಕರಿಂದ ದೂರುಗಳು ಬಂದಿದ್ದವು. ಆ ಹಿನ್ನೆಲೆಯಲ್ಲಿ ರೈಲು ಬೋಗಿಗಳಲ್ಲಿ ಅಗತ್ಯ ಎಚ್ಚರಿಕಾ ಕ್ರಮ ವಹಿಸಲಾಗಿತ್ತು. ಹಾಗಾಗಿ ಇಂದು ಮಲ್ಲೇಶ್ ಸಿಕ್ಕಿಬಿದ್ದಿದ್ದಾನೆ. ಈ ರೀತಿ ಗುರುತಿನ ಚೀಟಿ ಇಲ್ಲದೇ ಟಿಕೆಟ್ ತಪಾಸಣೆ ನಡೆಸಿ, ದಂಡದ ಹಣಕ್ಕೆ ರಶೀದಿ ನೀಡದಿರುವುದು ಕಂಡು ಬಂದಲ್ಲಿ ಪ್ರಯಾಣಿಕರು ತಕ್ಷಣ ರೈಲ್ವೆ ಇಲಾಖೆ ಅಧಿಕಾರಿಗಳಿಗೆ ದೂರು ನೀಡಬೇಕೆಂದು ಅವರು ಸಲಹೆ ನೀಡಿದ್ದಾರೆ.

## ಗೆಸ್ಟ್ ಹೌಸ್ ಕಾಂಪೌಂಡ್ ಧ್ವಂಸ

ಚಾಮುಂಡಿ ಗೆಸ್ಟ್ ಹೌಸ್‌ನ ಹಿಂಭಾಗದ ಅಂದರೆ ದಿವಾನ್ಸ್ ರಸ್ತೆಯಲ್ಲಿ ನ್ಯಾಯನಿವಾಸ ಕರ್ನಾಟಕ ಉಚ್ಚ ನ್ಯಾಯಾಲಯದ ಅತಿಥಿ ಗೃಹಕ್ಕೆ ಹೊಂದಿಕೊಂಡಂತಿರುವ ಕಾಂಪೌಂಡ್ ಅನ್ನು ಇದೀಗ ಕೆಡವಲಾಗಿದೆ. ಕಾಂಪೌಂಡ್ ಶಿಥಿಲಗೊಂಡು ದುರಸ್ತಿ ಮಾಡುವ ಸಲುವಾಗಿಯಂತೂ ಅದನ್ನು ಕೆಡವಲಿಲ್ಲ. ಯಾಕೆಂದರೆ ಆ ಕಾಂಪೌಂಡ್ ಗಟ್ಟಿಮುಟ್ಟಾಗಿಯೇ ಇದೆ. ಹಾಗಾದರೆ ಕೆಡವಿದ್ದು ಯಾಕೆ ಎಂದು ನೋಡಿದರೆ 'ಶೌಚಾಲಯ' ನಿರ್ಮಾಣಕ್ಕಾಗಿ. ಈ ಶೌಚಾಲಯವನ್ನು ನಿರ್ಮಿಸುತ್ತಿರುವುದು ನಗರ ಪಾಲಿಕೆ ಎಂಬುದು ವಿಪರ್ಯಾಸ. ಈ ಕಟ್ಟಡ ಮತ್ತು ಕಾಂಪೌಂಡ್ ಅನ್ನು ರಕ್ಷಿಸಬೇಕಾದ ಪಾಲಿಕೆಯೇ ಶೌಚಾಲಯ ನಿರ್ಮಿಸುವುದಕ್ಕಾಗಿ ಅದನ್ನು ಕೆಡವಿರುವುದು ತೀವ್ರ ವಿರೋಧಕ್ಕೆ ಕಾರಣವಾಗಿದೆ. ಶೌಚಾಲಯ ನಿರ್ಮಾಣವಾಗುತ್ತಿರುವ ಸ್ಥಳದ ಮುಂದೆ ಭಾರೀ ಗಾತ್ರದ ಮರವೊಂದಿದ್ದು, ಅದನ್ನೂ ಕೂಡ ಕೆಡವಲಾಗುತ್ತದೆ ಎಂದು ಹೇಳಲಾಗುತ್ತಿದೆ. ಪಾಲಿಕೆ ಮಾಡಿರುವ ಮತ್ತೊಂದು ಯಡವಟ್ಟು ಎಂದರೆ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಫುಟ್‌ಪಾತ್ ಅನ್ನೂ ಕೂಡ ಶೌಚಾಲಯಕ್ಕಾಗಿ ಆಕ್ರಮಿಸಿಕೊಳ್ಳಲಾಗುತ್ತಿದೆ. ಶೌಚಾಲಯ ನಿರ್ಮಾಣವಾದ ನಂತರ ಪಾದಚಾರಿಗಳು ನಡೆದಾಡಲು ಫುಟ್‌ಪಾತ್ ಇಲ್ಲದೇ ವಾಹನ ದಟ್ಟಣೆ ಇರುವ ರಸ್ತೆಯಲ್ಲೇ ಜೀವ ಕೈಯ್ಯಲ್ಲಿ ಹಿಡಿದು ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ವಿಚಿತ್ರವೆಂದರೆ ಈ ರಸ್ತೆಯಲ್ಲಿ ಶೌಚಾಲಯದ ಅಗತ್ಯವೇ ಇಲ್ಲ. ಅದಕ್ಕೆ ಉದಾಹರಣೆ ಎಂದರೆ ಅನತಿ ದೂರದಲ್ಲಿರುವ ಇ-ಶೌಚಾಲಯ ಯಾರೂ ಬಳಸದೇ ಅನುಪಯುಕ್ತವಾಗಿ ಬಿದ್ದಿದೆ. ಹೀಗಿದ್ದರೂ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಪಾರಂಪರಿಕ ಕಟ್ಟಡದ ಕಾಂಪೌಂಡ್ ಕೆಡವಿ ಶೌಚಾಲಯ ನಿರ್ಮಿಸಬೇಕಾದ ಅಗತ್ಯತೆ ಪಾಲಿಕೆಗೆ ಏನಿತ್ತು? ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ. ಮೈಸೂರಿನಲ್ಲಿ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವ ಸಲುವಾಗಿ 'ಮೈಸೂರು ಪಾರಂಪರಿಕ ಪ್ರದೇಶ ಸಂರಕ್ಷಣಾ ಮತ್ತು ಅಭಿವೃದ್ಧಿ ಸಮಿತಿ' ಇದೆ. ಈ ಸಮಿತಿಗೆ ಜಿಲ್ಲಾಧಿಕಾರಿಗಳೇ ಅಧ್ಯಕ್ಷರಾಗಿರುತ್ತಾರೆ. ಯಾವುದೇ ಪಾರಂಪರಿಕ ಕಟ್ಟಡವನ್ನು ದುರಸ್ತಿ ಮಾಡಬೇಕಾದರೂ ಕೂಡ ಈ ಸಮಿತಿಯಿಂದ ಅನುಮತಿ ಪಡೆಯಬೇಕಾಗುತ್ತದೆ. ಹೀಗಿರುವಾಗ ಕೇವಲ ಶೌಚಾಲಯ ನಿರ್ಮಾಣಕ್ಕಾಗಿ ಪಾರಂಪರಿಕ ಕಟ್ಟಡದ ಕಾಂಪೌಂಡ್ ಅನ್ನು ಕೆಡವಲು ಜಿಲ್ಲಾಧಿಕಾರಿಗಳು ಅನುಮತಿ ನೀಡಿದ್ದಾರೆಯೇ? ಎಂಬ ಪ್ರಶ್ನೆ ಸಾರ್ವಜನಿಕರದ್ದಾಗಿದೆ.

ಹುಣಸೂರು ರಸ್ತೆಯಲ್ಲಿ ಅಪಘಾತಗಳು ನಡೆಯುತ್ತಿದೆ ಎಂಬ ಕಾರಣಕ್ಕಾಗಿ ರಸ್ತೆ ಅಗಲೀಕರಣಕ್ಕಾಗಿ ಪಾರಂಪರಿಕ ಕಟ್ಟಡವಾದ ಜಲದರ್ಶಿನಿಯ ಕಾಂಪೌಂಡ್ ಅನ್ನು ಕೆಡವಿ ರಸ್ತೆ ಅಗಲೀಕರಣ ಮಾಡಲು ಮುಂದಾದಾಗ ತೀವ್ರ ವಿರೋಧ ವ್ಯಕ್ತವಾಗಿ ಒಡೆದಿದ್ದ ಕಾಂಪೌಂಡ್ ಅನ್ನು ಹಿಂದಿನ ಪಾರಂಪರಿಕ ಶೈಲಿಯಲ್ಲೇ ನಿರ್ಮಿಸಿದ ಉದಾಹರಣೆ ನಮ್ಮ ಮುಂದಿರುವಾಗ ಈ ವಿಚಾರ ಪಾಲಿಕೆ ಅಧಿಕಾರಿಗಳಿಗೆ ಗೊತ್ತಾಗಲಿಲ್ಲವೇ? ಪಾರಂಪರಿಕ ಕಟ್ಟಡದ ನೂರು ಅಡಿ ಒಳಗಾಗಿ ಯಾವುದೇ ಕಟ್ಟಡವನ್ನು ನಿರ್ಮಿಸುವಂತಿಲ್ಲ ಎಂದು ನಿಯಮವಿರುವಾಗ ಅಧಿಕಾರಿಗಳು ಕಾಂಪೌಂಡ್ ಕೆಡವಿರುವುದು ಹ್ಯಾಗೆ ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.

> **ಚಾಮುಂಡಿ ಗೆಸ್ಟ್ ಹೌಸ್ ಪಾರಂಪರಿಕ ಕಟ್ಟಡವಾಗಿದ್ದು, ಅಲ್ಲಿ ಬದಲಾವಣೆ ಮಾಡಬೇಕಾದರೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ 'ಮೈಸೂರು ಪಾರಂಪರಿಕ ಪ್ರದೇಶ ಸಂರಕ್ಷಣಾ ಮತ್ತು ಅಭಿವೃದ್ಧಿ ಸಮಿತಿ'ಯ ಒಪ್ಪಿಗೆ ಪಡೆಯಬೇಕು. ಯಾವುದೇ ಪಾರಂಪರಿಕ ಕಟ್ಟಡದ ಆವರಣ ಮತ್ತು ಕಾಂಪೌಂಡ್ ಅನ್ನು ಹಾನಿ ಮಾಡುವಂತಿಲ್ಲ. ಈಗ ಶೌಚಾಲಯ ನಿರ್ಮಾಣಕ್ಕಾಗಿ ಕೆಡವಿರುವ ಕಾಂಪೌಂಡ್ ಅನ್ನು ನೂರು ವರ್ಷದ ಹಿಂದೆ ಎಂತಹ ವಸ್ತುಗಳನ್ನು ಬಳಸಿ ನಿರ್ಮಿಸಿದ್ದರೋ ಅಂತಹುದ್ದೋ ವಸ್ತುಗಳನ್ನು ಬಳಸಿ ಅದೇ ಶೈಲಿಯಲ್ಲಿ ಮರು ನಿರ್ಮಾಣ ಮಾಡಬೇಕಾಗಿದೆ. ಕಾಂಪೌಂಡ್ ಕೆಡವಿದವರ ವಿರುದ್ಧ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕಾಗಿದೆ.**
>
> – ರಂಗರಾಜು, ಸದಸ್ಯರು, 'ಮೈಸೂರು ಪಾರಂಪರಿಕ ಪ್ರದೇಶ ಸಂರಕ್ಷಣಾ ಮತ್ತು ಅಭಿವೃದ್ಧಿ ಸಮಿತಿ'

# ಕ್ಲಿಕ್ ಮಾಡಿ ಪಡೆದಂತಹ ಜ್ಞಾನ ಹೆಚ್ಚು ಕಾಲ ನೆನಪಿನಲ್ಲಿರದು

**● ಮಕ್ಕಳಿಗೆ ಮೈಸೂರು ಡಿಸಿ ಡಾ.ಬಗಾದಿ ಗೌತಮ್ ಕಿವಿಮಾತು ● ಸಾಧ್ಯವಾದಷ್ಟು ಟಿವಿಯಿಂದ ದೂರವಿರಲು ಮಕ್ಕಳಿಗೆ ಸಲಹೆ**

ಮೈಸೂರು, ಜು.7(ಎಂಕೆ)– ಅಧ್ಯಯನ ಮೆದುಳಿಗಷ್ಟೇ ಅಲ್ಲದೆ ಮನಸ್ಸಿನಾಳಕ್ಕೂ ಮುಟ್ಟುವಂತಿರಬೇಕು. ಇದು ಏಕಾಗ್ರತೆ, ಶಿಸ್ತಿನ ಅಧ್ಯಯನದಿಂದ ಮಾತ್ರ ಸಾಧ್ಯ ಎಂದು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅಧ್ಯಯನ ಕುರಿತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿ ಸಂಘದ ಉದ್ಘಾಟನೆ ಹಾಗೂ ಪ್ರಮಾಣ ವಚನ ಸ್ವೀಕಾರ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ಅಧ್ಯಯನ ನಡೆಸಿ ಕಲಿತ ವಿಚಾರ ದೀರ್ಘಕಾಲದವರೆಗೂ ನೆನಪಿನಲ್ಲಿರಬೇಕಾದರೆ ವಿಶ್ಲೇಷಣಾತ್ಮಕ ಅಧ್ಯಯನ ಅವಶ್ಯಕವಾಗಿದೆ ಎಂದರು.

ಒಂದು ಕ್ಲಿಕ್‌ನಿಂದ ಮಾಹಿತಿ ಪಡೆದುಕೊಳ್ಳುವ ಸಂದರ್ಭದಲ್ಲಿ ತಿಳಿದುಕೊಂಡ ವಿಷಯವನ್ನು ದೀರ್ಘ ಕಾಲದವರೆಗೆ ನೆನಪಿನಲ್ಲಿಡಲು ಸಾಧ್ಯವಿಲ್ಲ. ಪುಸ್ತಕಗಳ ಶಿಸ್ತಿನ ಹಾಗೂ ಏಕಾಗ್ರತೆಯ ಅಧ್ಯಯನ, ಸಕಾರಾತ್ಮಕ ಚಿಂತನೆಗಳಿಂದ ಕಲಿತದ್ದನ್ನು ಹಲವು ವರ್ಷಗಳ ಕಾಲ ಸ್ಮರಣೆಯಲ್ಲಿಟ್ಟುಕೊಳ್ಳಬಹುದು ಎಂದು ತಿಳಿಸಿದರು.

**ಟಿವಿಯಿಂದ ಅಂತರ ಕಾಯ್ದುಕೊಳ್ಳಿ:** ವಿದ್ಯಾರ್ಥಿಗಳು ಸಾಧ್ಯವಾದಷ್ಟು ಟಿವಿಯಿಂದ ಅಂತರ ಕಾಯ್ದುಕೊಳ್ಳಬೇಕು. ಅನವಶ್ಯಕ ವಿಚಾರಗಳನ್ನು ನೋಡುವುದರಿಂದ ನಮ್ಮ ಬುದ್ಧಿಶಕ್ತಿ ಕುಂಠಿತಗೊಳ್ಳುವ ಜೊತೆಗೆ ನಮ್ಮಲ್ಲಿ ನಕಾರಾತ್ಮಕ ಆಲೋಚನೆಗಳು ಹೆಚ್ಚಾಗುವುದಲ್ಲದೆ ಆಲೋಚನಾ ಶಕ್ತಿಯೂ ಕುಂದುತ್ತದೆ. ಕ್ರೀಡೆ, ಜೀವನಕ್ಕೆ ಅಳವಡಿಸಿಕೊಳ್ಳುವ ಅಂಶಗಳನ್ನೊಳಗೊಂಡ ಸಿನಿಮಾಗಳನ್ನು ವೀಕ್ಷಣೆ ಮಾಡಬಹುದು. ಅದಕ್ಕಾಗಿ ಅಗತ್ಯವಿದ್ದರೆ ಮಾತ್ರ ಸಮಯ ನೀಡಿ. ಇಲ್ಲವಾದರೆ ಪುಸ್ತಕ ಓದುವತ್ತ ಹೆಚ್ಚಾಗಿ ತೊಡಗಿಸಿಕೊಳ್ಳಿ ಎಂದು ಡಾ.ಬಗಾದಿ ಗೌತಮ್ ಕಿವಿಮಾತು ಹೇಳಿದರು.

**ಮಾನವತಾವಾದ ಮುಖ್ಯ:** ಕಮ್ಯೂನಿಸಂ, ಕ್ಯಾಪಿಟಲಿಸಂ ಎಂಬುದನ್ನು ಶಾಶ್ವತವಾಗಿ ತೊರೆದು ಅತ್ಯಂತ ಮುಖ್ಯವಾಗಿರುವ ಹ್ಯೂಮನಿಸಂ(ಮಾನವತಾವಾದ) ಮತ್ತು ಆಧ್ಯಾತ್ಮಿಕತೆಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸ್ವಾಮಿ ವಿವೇಕಾನಂದರು ಆಧ್ಯಾತ್ಮಿಕತೆಯಲ್ಲಿ ಅಪಾರ ನಂಬಿಕೆಯುಳ್ಳವರಾಗಿದ್ದು, ಪ್ರತಿಯೊಬ್ಬರಿಗೂ ಮಾರ್ಗದರ್ಶನ ನೀಡಿದ್ದಾರೆ ಎಂದು ತಿಳಿಸಿಕೊಟ್ಟರು. ಇದಕ್ಕೂ ಮುನ್ನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳಾಗಿ ಆಯ್ಕೆಯಾದ ವಿದ್ಯಾರ್ಥಿಗಳು ಪ್ರಮಾಣ ವಚನ ಸ್ವೀಕರಿಸಿದರು. ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿ ದ್ವಿತೀಯ ಪಿಯುಸಿ ವಿದ್ಯಾರ್ಥಿ ಪಾರ್ಥ್ ನಂದನ್ ಶೇಟಿಯಾ, ಉಪಾಧ್ಯಕ್ಷನಾಗಿ 10ನೇ ತರಗತಿ ವಿದ್ಯಾರ್ಥಿ ಸೌರವ್, ಪ್ರಧಾನ ಕಾರ್ಯದರ್ಶಿಯಾಗಿ ಪ್ರಥಮ ಪಿಯುಸಿ ವಿದ್ಯಾರ್ಥಿ ಶ್ರೇಯಸ್ ಹಾಗೂ ಜಂಟಿ ಕಾರ್ಯದರ್ಶಿಯಾಗಿ 10ನೇ ತರಗತಿ ವಿದ್ಯಾರ್ಥಿ ಶ್ರೀಗಿರಿ ವಿ.ಪಾಟೀಲ್ ಸೇರಿ 17 ವಿಭಾಗಗಳ ಕಾರ್ಯದರ್ಶಿಗಳಾಗಿ ಆಯ್ಕೆಯಾದ ವಿದ್ಯಾರ್ಥಿಗಳು ಸಂಸ್ಕೃತ, ಕನ್ನಡ, ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ, ರಾಮಕೃಷ್ಣ ವಿದ್ಯಾಶಾಲೆಯ ಸ್ವಾಮಿ ಯುಕ್ತೇಶಾನಂದಜೀ, ಎಸ್.ಬಾಲಾಜಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳಾಗಿ ಆಯ್ಕೆಯಾದ ವಿದ್ಯಾರ್ಥಿಗಳು ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು.

> ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಅತ್ಯುತ್ತಮ ಗ್ರಂಥಾಲಯವಿದೆ. ಪುಸ್ತಕಗಳ ಓದು ಜ್ಞಾನ, ಶಬ್ದ ಭಂಡಾರ, ಆಲೋಚನಾ ಶಕ್ತಿ ಹಾಗೂ ವಿಶ್ಲೇಷಣಾ ಶಕ್ತಿಯನ್ನು ಹೆಚ್ಚಿಸುತ್ತದೆ. ಅಲ್ಲದೆ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ನೀಡುತ್ತದೆ.
>
> **–ಡಾ.ಬಗಾದಿ ಗೌತಮ್, ಜಿಲ್ಲಾಧಿಕಾರಿ**

### ಅಖಿಲ ಭಾರತ ಅಂತರ ವಿವಿ ಖೋ–ಖೋ ಪಂದ್ಯಾವಳಿ

# ಮೈಸೂರು ವಿವಿ ಮಹಿಳಾ ತಂಡ ಚಾಂಪಿಯನ್




ಖೋ ಖೋ ಪಂದ್ಯಾವಳಿಯಲ್ಲಿ ಚಾಂಪಿಯನ್ ಪಟ್ಟಗಳಿಸಿದ ಮೈಸೂರು ವಿವಿ ಮಹಿಳಾ ತಂಡಕ್ಕೆ ಶಾಸಕ ಎಲ್.ನಾಗೇಂದ್ರ ಪ್ರಶಸ್ತಿ ನೀಡಿ ಗೌರವಿಸಿದರು. ಈ ವೇಳೆ ಮೈಸೂರು ವಿವಿ ಕುಲಸಚಿವ ಪ್ರೊ.ಶಿವಪ್ಪ, ಮೈಸೂರು ವಿವಿ ಸಂಘಟನಾ ಕಾರ್ಯದರ್ಶಿ ಮತ್ತು ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೃಷ್ಣಯ್ಯ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾದ ಡಾ.ಚೈತ್ರ ನಾರಾಯಣ್, ಪ್ರೊ.ದೊಡ್ಡಯ್ಯಚಾರಿ ಮತ್ತಿತರರು ಉಪಸ್ಥಿತರಿದ್ದರು.



ಚಾಂಪಿಯನ್ ಪಟ್ಟಗಳಿಸಿದ ಮೈಸೂರು ವಿವಿ ಮಹಿಳಾ ತಂಡ ಫೈನಲ್ ಪಂದ್ಯದ ರೋಚಕ ಕ್ಷಣ.

ಮೈಸೂರು, ಜು.7(ಜಿಎ)– ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಮಹಿಳಾ ಖೋ ಖೋ ಪಂದ್ಯಾವಳಿಯಲ್ಲಿ ಮೈಸೂರು ವಿವಿ ಖೋ–ಖೋ ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿದೆ. ಫೈನಲ್ ಪಂದ್ಯದಲ್ಲಿ ಪಂಜಾಬಿನ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯ ತಂಡವನ್ನು ಮೈಸೂರು ವಿವಿ ತಂಡವು 10–7 ಪಾಯಿಂಟ್‌ಗಳ ಮೂಲಕ ಸೋಲಿಸಿ ಮೊದಲ ಬಾರಿಗೆ ಚಾಂಪಿಯನ್ ಪಟ್ಟವನ್ನು ಮುಡಿಗೇರಿಸಿಕೊಂಡಿದೆ.

ಕಳೆದ ಎರಡು ದಿನಗಳಿಂದ ಮೈಸೂರು ವಿವಿಯ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಮಹಿಳಾ ಖೋ ಖೋ ಪಂದ್ಯಾವಳಿಯಲ್ಲಿ ದೇಶದ ವಿವಿಧ ವಿವಿಗಳಿಂದ 16 ತಂಡಗಳು ಭಾಗವಹಿಸಿದ್ದವು. ಗುರುವಾರ ನಡೆದ ರೋಚಕ ಫೈನಲ್ ಪಂದ್ಯದಲ್ಲಿ ಮೈಸೂರು ವಿವಿ ತಂಡ ಜಯ ಗಳಿಸಿತು. ರನ್ನರ್ ಅಪ್ ಆಗಿ ಪಂಜಾಬಿನ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯ ತಂಡ ಹಾಗೂ ಔರಂಗಾಬಾದ್‌ನ ಅಂಬೇಡ್ಕರ್ ವಿವಿ ಮತ್ತು ರೋಹ್ಟಕ್‌ನ ಎ.ಡಿ.ವಿವಿಗಳು ಮೂರನೇ ಸ್ಥಾನ ಪಡೆದುಕೊಂಡವು.

ಇದಕ್ಕೂ ಮುನ್ನ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಮೈಸೂರು, ಔರಂಗಾಬಾದ್‌ನ ಅಂಬೇಡ್ಕರ್ ವಿಶ್ವವಿದ್ಯಾನಿಲಯವನ್ನು 8–7ರಲ್ಲಿ ಸೋಲಿಸಿ ಅಂತಿಮ ಘಟ್ಟಕ್ಕೆ ಪ್ರವೇಶಿಸಿದ್ದರೆ, ಲವ್ಲಿ ವಿಶ್ವವಿದ್ಯಾಲಯವು ರೋಹ್ಟಕ್‌ನ ಎ.ಡಿ.ವಿಶ್ವವಿದ್ಯಾಲಯನ್ನು 9–6 ಪಾಯಿಂಟ್‌ಗಳಿಂದ ಮಣಿಸಿ ಫೈನಲ್ ಪ್ರವೇಶಿಸಿತ್ತು. ಮೈಸೂರು ಇದುವರೆಗೂ ಮೂರು ಬಾರಿ ಮೂರನೇ ಸ್ಥಾನ ಪಡೆದಿದ್ದೇ ಸಾಧನೆಯಾಗಿತ್ತು.

ಮೊದಲ ಸುತ್ತಿನ ಚೇಸಿಂಗ್‌ನಲ್ಲಿ ಮೈಸೂರು ತಂಡ ಉತ್ತಮ ಪ್ರದರ್ಶನ ನೀಡಿತು. ಎಲ್.ಮೋನಿಕಾ ಪಂಜಾಬ್ ತಂಡದ ಮೂವರನ್ನು ಔಟ್ ಮಾಡಿದರೆ, ಎಸ್.ವಿನುತಾ, ಬಿ.ಚೈತ್ರಾ, ಅರ್ಪಿತಾ ತಲಾ ಒಂದೊಂದು ಅಂಕದ ಕಾಣಿಕೆ ನೀಡಿದರು. ಲವ್ಲಿ ವಿಶ್ವವಿದ್ಯಾಲಯದ ನೀತಾ ದೇವಿ 4.20 ನಿಮಿಷ ಅಂಗಳದಲ್ಲಿದ್ದರು. ಉಳಿದವರನ್ನು ಎರಡು ನಿಮಿಷಗಳೊಳಗೆ ಮೈಸೂರು ಔಟ್ ಮಾಡಿತು. ಅದರಿಂದ ಮೈಸೂರು 6–0ಯ ಮುನ್ನಡೆ ಪಡೆಯಿತು.

ಡಾಡ್ಜರಿಂಗ್‌ನಲ್ಲಿ ಮೈಸೂರು ವಿವಿ ತಂಡದ ತೇಜಸ್ವಿನಿ, ಮೋನಿಕಾ ಹಾಗೂ ಚೈತ್ರಾ ಕ್ರಮವಾಗಿ 8 ನಿಮಿಷ, 2.5 ನಿಮಿಷ, 3.5 ನಿಮಿಷ ಡಾಡ್ಜರಿಂಗ್ ಆಟವಾಡಿದರು. ತೇಜಸ್ವಿನಿ ಅವರನ್ನು ಔಟ್ ಮಾಡಲು ಲವ್ಲಿ ವಿವಿ ತಂಡದ ಆಟಗಾರ್ತಿಯರು ಸುಸ್ತಾದರು. ಮೂವರ ತಂತ್ರದಿಂದ ಎದುರಾಳಿಗಳಿಗೆ ಹೆಚ್ಚು ಅಂಕ ಸಿಗಲಿಲ್ಲ. ಲವ್ಲಿ ತಂಡವು ಒಬ್ಬರನ್ನು ಔಟ್ ಮಾಡುವತ್ತ ಗುರಿಯನ್ನು ಇರಿಸದಿದ್ದರಿಂದ ಬೆಲೆ ತೆರಬೇಕಾಯಿತು. 3–6ರ ಹಿನ್ನಡೆ ಅನುಭವಿಸಬೇಕಾಯಿತು. ಎರಡನೇ ಸುತ್ತಿನ ಚೇಸಿಂಗ್‌ನಲ್ಲೂ ಮೈಸೂರಿನ ಮೋನಿಕಾ ನಾಲ್ವರನ್ನು ಔಟ್ ಮಾಡುವ ಮೂಲಕ ಮೈಸೂರಿನ ಗೆಲುವನ್ನು ಸುಲಭಗೊಳಿಸಿದರು. ನಂತರ ನಡೆದ ಡಿಫೆನ್ಸ್‌ನಲ್ಲಿ ಚೈತ್ರಾ 4.30 ನಿಮಿಷ ಕಣದಲ್ಲಿದ್ದರು.

ತೇಜಸ್ವಿನಿ, ವಿನುತಾ, ಮೋನಿಕಾ ಕ್ರಮವಾಗಿ 2.30 ನಿ., 1.40ನಿ, 2 ನಿಮಿಷ ಆಟವಾಡಿಸಿದರೆ, ಕೊನೆಯ 30 ಸೆಕೆಂಡ್‌ಗಳಲ್ಲಿ ಪಿ.ಅರ್ಪಿತಾ ಉತ್ತಮ ಆಟದಿಂದ ಮೈಸೂರಿಗೆ ಗೆಲುವು ದಕ್ಕಿತು. ಮೈಸೂರಿನ ತೇಜಸ್ವಿನಿ ಉತ್ತಮ ಡಿಫೆಂಡರ್, ಮೋನಿಕಾ ಉತ್ತಮ ಚೇಸರ್, ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿಯ ನೀತಾ ದೇವಿ ಡಾಡ್ಜರ್ ಪ್ರಶಸ್ತಿಗೆ ಪಾತ್ರರಾದರು.

## ವೀರಶೈವ ಮಹಾಸಭಾದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.7(ಪಿಎಂ)–ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಪ್ರತಿ ವರ್ಷದಂತೆ 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ.90ಕ್ಕಿಂತಲೂ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಸ್ವ–ವಿವರಗಳೊಂದಿಗೆ (ಇತ್ತೀಚಿನ 1 ಭಾವಚಿತ್ರ, ದೃಢೀಕರಿಸಿದ ಅಂಕಪಟ್ಟಿ ಮತ್ತು ಜಾತಿ ಪ್ರಮಾಣಪತ್ರ) ಅರ್ಜಿಯನ್ನು (www.veerashaivamahasabha.in) ಆನ್‌ಲೈನ್ ಮೂಲಕ ಜು.20ರೊಳಗೆ ಸಲ್ಲಿಸಬೇಕು. ಆನ್‌ಲೈನ್ ಮೂಲಕ ಬಂದ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು. ಅಂಚೆ, ಕೊರಿಯರ್ ಅಥವಾ ಖುದ್ದು ಅರ್ಜಿ ಸಲ್ಲಿಸಲು ಅವಕಾಶವಿಲ್ಲ ಎಂದು ಶಾಸಕರೂ ಆದ ಮಹಾಸಭಾದ ಅಧ್ಯಕ್ಷ ಡಾ.ಶಾಮನೂರು ಶಿವಶಂಕರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಿಎಚ್.ಡಿ ಪದವೀಧರರು

### ಕೆಕೇಡ ಎಸ್.ಮುತ್ತಮ್ಮ



ಮೈಸೂರು, ಜು. 7–ಡಾ. ಎಸ್. ಶಂಕರಪ್ಪ ಅವರ ಮಾರ್ಗದರ್ಶನದಲ್ಲಿ ಕೆಕೇಡ ಎಸ್.ಮುತ್ತಮ್ಮ (ಮೈಸೂರಿನ ವಸಂತನಗರದ ನಿವಾಸಿ ಪಟ್ಟಮಾಡ ಅರುಣ್ ಚೆರ್ಮಣ ಅವರ ಪತ್ನಿ) ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

### ಎಂ.ಶುಭಾಂಗಿನಿ



ಡಾ.ಎಂ.ಪ್ರಭು ಅವರ ಮಾರ್ಗದರ್ಶನದಲ್ಲಿ ಎಂ.ಶುಭಾಂಗಿನಿ ವಾಣಿಜ್ಯ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

### ಡಿ.ಪಿ. ದಿಲೀಪ



ಡಾ. ಕೆ.ಸಿ. ಬಸವರಾಜು ಅವರ ಮಾರ್ಗದರ್ಶನದಲ್ಲಿ ಡಿ.ಪಿ. ದಿಲೀಪ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

## ಇಂದು ಕಾರ್ಯಾಗಾರ


ಮೈಸೂರು,ಜು.7(ಆರ್‌ಕೆ)–ಪ್ರವಾಹ ಸಂದರ್ಭ ನದಿ ಪಾತ್ರದಲ್ಲಿ ಉಂಟಾಗಬಹುದಾದ ಪ್ರತಿಕೂಲ ಪರಿಣಾಮಗಳ ನಿರ್ವಹಣೆ ಕುರಿತಂತೆ ನಾಳೆ (ಜು.8) ಕೆಆರ್‌ಎಸ್ ರಸ್ತೆಯ ಮೊಗರಹಳ್ಳಿ (ಮಂಟಿ) ಬಳಿಯ ಕುಸುಮಾ ಚಂದ್ರಶೇಖರ್ ಕಲ್ಯಾಣ ಮಂಟಪದಲ್ಲಿ ಜಾಗೃತಿ ಕಾರ್ಯಾಗಾರ ಏರ್ಪಡಿಸಿದೆ. ಕಾವೇರಿ ನೀರಾವರಿ ನಿಗಮದಿಂದ ಆಯೋಜಿಸಿರುವ ಕೆಆರ್‌ಎಸ್, ಹಾರಂಗಿ, ಕಬಿನಿ ಮತ್ತು ಚಿಕ್ಕಹೊಳೆ ಅಣೆಕಟ್ಟೆಗಳ ನದಿ ಪಾತ್ರದಲ್ಲಿ ಉಂಟಾಗಬಹುದಾದ ಪ್ರವಾಹ ಸಂದರ್ಭ ಅನುಸರಿಸಬೇಕಾದ ಮುಂಜಾಗ್ರತಾ ಕ್ರಮ ಕುರಿತ ಕಾರ್ಯಾಗಾರವನ್ನು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಉದ್ಘಾಟಿಸುವರು. ಶಾಸಕ ರವೀಂದ್ರ ಶ್ರೀಕಂಠಯ್ಯ ಅಧ್ಯಕ್ಷತೆ ವಹಿಸುವ ಕಾರ್ಯಾಗಾರದಲ್ಲಿ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ, ಸಚಿವರಾದ ಕೆ.ಗೋಪಾಲಯ್ಯ, ಕೆ.ಸಿ.ನಾರಾಯಣಗೌಡ, ಡಾ.ಅಶ್ವತ್ಥನಾರಾಯಣ, ವಿ.ಸೋಮಣ್ಣ, ಎಸ್.ಟಿ.ಸೋಮಶೇಖರ್, ಬಿ.ಸಿ.ನಾಗೇಶ್, ಸಂಸದರಾದ ಸುಮಲತಾ ಅಂಬರೀಶ್, ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್, ಟಿ.ಕೆ.ಸುರೇಶ್, ಬಿ.ಎನ್.ಬಚ್ಚೇಗೌಡ, ಪ್ರಜ್ವಲ್ ರೇವಣ್ಣ, ಶಾಸಕರು, ಪರಿಷತ್ ಸದಸ್ಯರು, ಹಿರಿಯ ಅಧಿಕಾರಿಗಳು ಭಾಗವಹಿಸುವರು.

## ಜು.10ರಂದು ಶಿಕ್ಷಣ ರತ್ನ ಪ್ರಶಸ್ತಿ ಪ್ರದಾನ

ಮೈಸೂರು, ಜು. 7–ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಜು.10ರಂದು ಶಿಕ್ಷಕಿ, ಕವಯತ್ರಿ ಹಾಗೂ ನಿರೂಪಕಿ ಬಿ.ಶೋಭಾ ಅವರ ಚಿಗುರೆಲೆಯ ಸಂಭ್ರಮ ಚೊಚ್ಚಲಗಾನ, ಕವನ ಸಂಕಲನ ಕೃತಿ ಲೋಕಾರ್ಪಣೆ, ಶಿಕ್ಷಣ ರತ್ನ ಪ್ರಶಸ್ತಿ ಪ್ರದಾನ ಮತ್ತು ಕವಿಗೋಷ್ಠಿ ನಡೆಯಲಿದೆ ಎಂದು ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಜಯಂತಿ ಹೇಳಿದ್ದಾರೆ.



ನಿಶಾಂತ್



ವೈ.ಎಸ್.ರಮ್ಯ

ಅಂದು ಬೆಳಗ್ಗೆ 10ಕ್ಕೆ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಐಡಿಯಲ್ ಜಾವಾ ರೋಟರಿ ಶಾಲೆ ಆವರಣದಲ್ಲಿ ನಡೆಯುವ ಸಮಾರಂಭದಲ್ಲಿ ನಿಶಾಂತ್ ಎ.ನಾಯ್ಡು ಮತ್ತು ವೈ.ಎಸ್.ರಮ್ಯ ಅವರಿಗೆ ಶಿಕ್ಷಣ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು.

## ಎಸ್‌ಬಿಎಂ ನಿವೃತ್ತ ನೌಕರರ ಸಂಘದ ರಜತ ಮಹೋತ್ಸವ



ಮೈಸೂರು,ಜು.7(ಎಂಟಿವೈ)–ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ (ಎಸ್‌ಬಿಎಂ) ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ ಪಿಂಚಣಿದಾರರು ಸ್ಥಾಪಿಸಿಕೊಂಡಿರುವ ಸಂಘದ ರಜತ ಮಹೋತ್ಸವ ಹಾಗೂ ಮೈಸೂರು ಬ್ಯಾಂಕ್ ವಿಶ್ರಾಂತಿ ಗೃಹ ಉದ್ಘಾಟನಾ ಸಮಾರಂಭ ಜು.9ರಂದು ಬೆಳಗ್ಗೆ 11ಕ್ಕೆ ನಡೆಯಲಿದೆ ಎಂದು ಸಂಘದ ಮೈಸೂರು ಕಾರ್ಯದರ್ಶಿ ರಾಮಚಂದ್ರ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಐಶ್ವರ್ಯ ಪಾರ್ವತಿ ಬಡಾವಣೆಯಲ್ಲಿ ವಿಶ್ರಾಂತಿ ಗೃಹವನ್ನು ನಿರ್ಮಿಸಿದ್ದು, ಮೈಸೂರು ಬ್ಯಾಂಕ್ ಪಿಂಚಣಿದಾರರು ಹಾಗೂ ಅದರಲ್ಲಿ ಕಾರ್ಯ ನಿರ್ವಹಿಸಿದವರಿಗೆ ರಿಯಾಯಿತಿ ದರದಲ್ಲಿ ಕೊಠಡಿಗಳನ್ನು ನೀಡಲಾಗುತ್ತದೆ. ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಸ್ಟೇಟ್ ಬ್ಯಾಂಕ್ ಇಂಡಿಯಾದ ಉಪ ಪ್ರಧಾನ ವ್ಯವಸ್ಥಾಪಕರಾದ ಎಂ.ಅರುಣಗಿರಿ, ರಾಜೇಶ್ ಕುಮಾರ್ ಚೌಧರಿ, ಜಿಲ್ಲಾ ಹೌಸಿಂಗ್ ಸೊಸೈಟಿ ಅಧ್ಯಕ್ಷ ಟಿ.ಶಿವಪ್ರಕಾಶ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಪದಾಧಿಕಾರಿಗಳಾದ ಜಿ.ಎಚ್.ಹುಚ್ಚಪ್ಪ, ಗುರುಮೂರ್ತಿ, ಬಸವಣ್ಣ, ಕೆ.ರಘುರಾಂ ಇದ್ದರು.

# ದೇವೇಗೌಡರ ವಿರುದ್ಧ ಅವಹೇಳನಕಾರಿ ಹೇಳಿಕೆ: ರಾಜಣ್ಣ ಕ್ಷಮೆ ಯಾಚನೆಗೆ ಒಕ್ಕಲಿಗರ ಸಂಘ ಆಗ್ರಹ



ಮೈಸೂರು, ಜು.7(ಎಂಟಿವೈ)– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಮಾಜಿ ಶಾಸಕ ಕೆ.ಎನ್.ರಾಜಣ್ಣ ಕೂಡಲೇ ದೇವೇಗೌಡರ ಕಾಲಿಗೆ ನಮಸ್ಕರಿಸಿ, ಕ್ಷಮೆ ಯಾಚಿಸಬೇಕು ಎಂದು ಒಕ್ಕಲಿಗರ ಸಂಘ ಮೈಸೂರು ಪೂರ್ವ ವಲಯದ ಅಧ್ಯಕ್ಷ ಎಂ.ಸುರೇಶ್‌ಗೌಡ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ದೇವೇಗೌಡರು ದೇಶದ ಪ್ರಧಾನಿ ಹುದ್ದೆ ಅಲಂಕರಿಸಿದ ಏಕೈಕ ಕನ್ನಡಿಗರಾಗಿದ್ದಾರೆ. ಸದಾ ರಾಜ್ಯದ ಒಳಿತನ್ನೇ ಬಯಸುವ ದೇವೇಗೌಡರ ಬಗ್ಗೆ ವಿವಿಧ ಕ್ಷೇತ್ರದ ಗಣ್ಯರು ಗೌರವಿಸುತ್ತಾರೆ. ಪಕ್ಷಾತೀತವಾಗಿ ಎಲ್ಲಾ ಪಕ್ಷದ ಮುಖಂಡರೂ ಗೌರವಿಸುವ ವ್ಯಕ್ತಿತ್ವವನ್ನು, ಮಧುಗಿರಿಯ ಮಾಜಿ ಶಾಸಕ ಕೆ.ಎನ್.ರಾಜಣ್ಣ ನೀಡಿರುವ ಹೇಳಿಕೆ ತಲೆ ತಗ್ಗಿಸುವಂತಹದ್ದು ಎಂದು ಕಿಡಿಕಾರಿದರು.

ಇಬ್ಬರ ಹೆಗಲಿನ ನೆರವಿನೊಂದಿಗೆ ಓಡಾಡುತ್ತಿರುವ ದೇವೇಗೌಡ ನಾಲ್ಕು ಜನರ ಹೆಗಲಿನೊಂದಿಗೆ ಹೋಗುವ ಸಮಯ ದೂರವಿಲ್ಲ ಎಂದು ಹೇಳಿಕೆ ನೀಡಿರುವ ರಾಜಣ್ಣ ಅಮರರಾಗಿರುತ್ತಾರೆಯೇ? ಅವರಿಗೆ ಸಾವೇ ಬರುವುದಿಲ್ಲವೇ ಎಂದು ಪ್ರಶ್ನಿಸಿದರು. ಪ್ರತಿಯೊಬ್ಬರು ಹುಟ್ಟಿದ ಮೇಲೆ ಸಾಯಲೇಬೇಕು. ಯಾರು ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಒಂದಲ್ಲಾ ಒಂದು ದಿನ ರಾಜಣ್ಣ ಅವರನ್ನೂ ನಾಲ್ಕು ಜನ ಹೊತ್ತುಕೊಂಡು ಹೋಗುವ ಕಾಲ ಬರುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಕೂಡಲೇ ರಾಜಣ್ಣ ಅವರು ದೇವೇಗೌಡರ ಕಾಲಿಗೆ ಬಿದ್ದು ಕ್ಷಮೆ ಕೇಳಬೇಕು. ಇಲ್ಲದಿದ್ದರೆ, ಒಕ್ಕಲಿಗರ ಸಂಘದಿಂದ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕಲಿಗರ ಸಂಘ ಪೂರ್ವ ವಲಯದ ಪದಾಧಿಕಾರಿಗಳಾದ ಪ್ರತಾಪ್, ಚಿಕ್ಕೇಗೌಡ, ಸಿಂಗ್ರಿಗೌಡ, ಪದ್ಮಸುರೇಶ್, ಸಂಪತ್ ಇದ್ದರು.

## ಜು.15ಕ್ಕೆ 'ಓ ಮೈ ಲವ್' ತೆರೆಗೆ

ಮೈಸೂರು, ಜು.7(ಎಂಟಿವೈ)– ಕುಟುಂಬದ ಸದಸ್ಯರೆಲ್ಲರೂ ಕುಳಿತು ನೋಡಬಹುದಾದ 'ಓ ಮೈ ಲವ್' ಕನ್ನಡ ಚಲನಚಿತ್ರ ಜು.15ರಂದು ರಾಜ್ಯದಾದ್ಯಂತ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಸ್ಮೈಲ್ ಶ್ರೀನು ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕುಟುಂಬ ಸದಸ್ಯರೆಲ್ಲರೂ ಕುಳಿತು ನೋಡಬಹುದಾದ ಕಥಾ ಹಂದರವುಳ್ಳ ಚಿತ್ರಗಳಿಲ್ಲ ಎಂಬ ನೋವು ಚಿತ್ರಾಭಿಮಾನಿಗಳಲ್ಲಿತ್ತು. ಅದನ್ನು ನಿವಾರಿಸುವುದರೊಂದಿಗೆ ಮನೋರಂಜನೆ ನೀಡುವ ನಿಟ್ಟಿನಲ್ಲಿ 'ಓ ಮೈ ಲವ್' ಚಿತ್ರ ನಿರ್ಮಿಸಲಾಗಿದೆ. ಈ ಚಲನಚಿತ್ರದಲ್ಲಿ ಆರು ಹೊಡೆದಾಟದ ದೃಶ್ಯ ಹಾಗೂ ಆರು ಹಾಡುಗಳಿವೆ. ಈಗಾಗಲೇ ಹಾಡುಗಳಿಗೆ ಉತ್ತಮ ಸ್ಪಂದನೆ ದೊರೆತಿದೆ. ಹಿರಿಯ ನಟ ಶಶಿಕುಮಾರ್ ಅವರ ಪುತ್ರ ಅಕ್ಷಿತ್ ಶಶಿಕುಮಾರ್ ನಾಯಕನಾಗಿ ಹಾಗೂ ಕೀರ್ತಿ ಕಲ್ಕೆರಿ ನಾಯಕಿಯಾಗಿ ಅಭಿನಯಿಸಿದ್ದಾರೆ. ಜಿ.ಸಿ.ಬಿ. ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ಚಿತ್ರವನ್ನು ಜಿ. ರಾಮಾಂಜಿನಿ ನಿರ್ಮಿಸಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಚಿತ್ರದ ನಾಯಕ ನಟ ಅಕ್ಷಿತ್ ಶಶಿಕುಮಾರ್, ನಾಯಕಿ ಕೀರ್ತಿ ಕಲ್ಕೆರಿ ಇದ್ದರು.

## ಜು.10ರಂದು ತಪ್ತ ಮುದ್ರಾಧಾರಣೆ

ಮೈಸೂರು,ಜು.7–ಶ್ರೀ ಕೃಷ್ಣ ಮಿತ್ರ ಮಂಡಳಿ ಹಾಗೂ ಶ್ರೀ ಕೃಷ್ಣ ಟ್ರಸ್ಟ್ ವತಿಯಿಂದ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಜು.10ರಂದು ಮಧ್ಯಾಹ್ನ 11.45ರಿಂದ 3.30ರವರೆಗೆ ಉಡುಪಿ, ಶ್ರೀ ಪಲಿಮಾರು ಪೀಠಾಧಿಪತಿ ಶ್ರೀ ವಿದ್ಯಾಧೀಶ ತೀರ್ಥ ಸ್ವಾಮಿಯವರು ತಪ್ತ ಮುದ್ರಾಧಾರಣೆ ನಡೆಸಿಕೊಡಲಿದ್ದಾರೆ. ಆಸ್ತಿಕ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕಾಗಿ ಕೋರಲಾಗಿದೆ.



ಶಾಸಕ ಸಾ.ರಾ.ಮಹೇಶ್ ಅವರು ಈ ಹಿಂದೆ ಪ್ರವಾಸೋದ್ಯಮ ಸಚಿವರಾಗಿದ್ದ ವೇಳೆ ಚುಂಚನಕಟ್ಟೆಯ ಧನುಷ್ಕೋಟಿ ಜಲಪಾತ ಮತ್ತು ಶ್ರೀರಾಮ ದೇವಾಲಯದ ಅಭಿವೃದ್ಧಿಗೆ 10 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿದ ಪರಿಣಾಮ ಚುಂಚನಕಟ್ಟೆ ಉತ್ತಮ ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ. ಇದಕ್ಕಾಗಿ ಶಾಸಕ ಸಾ.ರಾ.ಮಹೇಶ್ ರನ್ನು ಅಭಿನಂದಿಸುತ್ತೇವೆ.

– ಚುಂಚನಕಟ್ಟೆ ಗ್ರಾಮಸ್ಥರು.

# ಚುಂಚನಕಟ್ಟೆ ಧನುಷ್ಕೋಟಿಯಲ್ಲಿ ಧುಮ್ಮುಕ್ಕುತ್ತಿರುವ 'ಕಾವೇರಿ'

ಚುಂಚನಕಟ್ಟೆ, ಜು.7(ಮಧು)– ಹಾಲಿನ ನೊರೆಯಂತೆ ಉಕ್ಕಿ ಹರಿಯುತ್ತಿರುವ ಜೀವನದಿ... ಶ್ರೀರಾಮನ ಸಮೀಪವೇ ಭೋರ್ಗರೆಯುತ್ತಿರುವ ಧನುಷ್ಕೋಟಿ ಜಲಪಾತ... ನದಿಯ ನರ್ತನದ ವೈಭವ ನೋಡಲು ಎರಡು ಕಣ್ಣು ಸಾಲದು... ನೀರಿನ ರಮಣೀಯ ದೃಶ್ಯ ವೀಕ್ಷಿಸಲು ಪ್ರವಾಹದಂತೆ ಹರಿದು ಬರುತ್ತಿರುವ ಪ್ರವಾಸಿಗರು... ಸೆಲ್ಫಿ ತೆಗೆದುಕೊಳ್ಳಲು ಮುಗಿ ಬೀಳುತ್ತಿರುವ ಯುವ ಜನತೆ ... ಇದು ಕೆ.ಆರ್.ನಗರ ತಾಲೂಕಿನ ಚುಂಚನಕಟ್ಟೆಯ ಕಾವೇರಿ ನದಿ ಬಳಿ ಕಂಡು ಬರುತ್ತಿರುವ ರಮ್ಯ ರಮಣೀಯ ದೃಶ್ಯ.

ಕೆಲ ದಿನಗಳಿಂದ ಮುನಿಸಿಕೊಂಡಿದ್ದ ಮಳೆರಾಯ ಇದೀಗ ಕೃಪೆ ತೋರಿರುವುದರಿಂದ ಕಳೆದ ಬಾರಿಯಂತೆ ಈ ಬಾರಿಯೂ ಕೊಡಗಿನಲ್ಲಿ ವ್ಯಾಪಕ ಹಾಗೂ ನದಿ ಪಾತ್ರದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಮೈಸೂರು, ಮಂಡ್ಯ ಜಿಲ್ಲೆಗಳ ರೈತರ ಜೀವನದಿ ಕಾವೇರಿ ನದಿ ಮೈದುಂಬಿ ಹರಿಯುತ್ತಿದ್ದು, ಪ್ರವಾಸಿಗರನ್ನು ತನ್ನತ್ತ ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಕಾವೇರಿ ನದಿ ತುಂಬಿ ಹರಿಯುತ್ತಿರುವ ಪರಿಣಾಮ ಚುಂಚನಕಟ್ಟೆಯ ಶ್ರೀರಾಮ ದೇವಸ್ಥಾನದ ಸಮೀಪವಿರುವ ಈ ಧನುಷ್ಕೋಟಿ ಜಲಪಾತ ಬೋರ್ಗರೆದು ಧುಮ್ಮಿಕ್ಕುವ ದೃಶ್ಯ ನೋಡಲು ಎರಡು ಕಣ್ಣುಗಳು ಸಾಲದು. ಇಲ್ಲಿಗೆ ಸಾವಿರಾರು ಪ್ರವಾಸಿಗರ ದಂಡು ಆಗಮಿಸಿ ಜಲಪಾತದ ವೈಭವವನ್ನು ಸವಿಯುತ್ತಿದ್ದಾರೆ.

ಮಳೆ ಇಲ್ಲದೆ ತನ್ನ ಸೊಬಗನ್ನು ಕಳೆದುಕೊಂಡಿದ್ದ ಈ ಜಲಪಾತವು ಈಗ 40ಕ್ಕೂ ಹೆಚ್ಚು ಅಡಿ ಎತ್ತರದಿಂದ ಭೋರ್ಗರೆಯುತ್ತ ಬೀಳುತ್ತಿರುವುದರಿಂದ ನೀರು ಹಾಲಿನಂತೆ ಉಕ್ಕುತ್ತಿದ್ದು, ಕಳೆದ ವರ್ಷ ಜೂನ್ ತಿಂಗಳಲ್ಲಿ ತುಂಬಿ ಹರಿದಿದ್ದ ನದಿ ಈ ಬಾರಿ ವರುಣನ ಅವಕೃಪೆಯಿಂದ ಜುಲೈ ತಿಂಗಳಲ್ಲಿ ನದಿ ತುಂಬಿ ಹರಿಯುತ್ತಿರುವುದು ಪ್ರಕೃತಿ ಪ್ರಿಯರಲ್ಲಿ ಸಂತಸ ಮನೆ ಮಾಡಿದೆ. ಕೆಲ ತಿಂಗಳಿಂದ ಕಳೆ ಕಳೆದುಕೊಂಡಿದ್ದ ಕಾವೇರಿ ನದಿ ಇದೀಗ ಮಳೆ ಬೀಳುತ್ತಿರುವ ಹಿನ್ನೆಲೆಯಲ್ಲಿ ಮತ್ತೆ ತನ್ನ ಸೌಂದರ್ಯ ತುಂಬಿಕೊಂಡಿದ್ದು ಈ ಸೊಬಗನ್ನು ವೀಕ್ಷಿಸಲು ಜಿಲ್ಲೆ ಮತ್ತು ಹೊರ ಜಿಲ್ಲೆಯ ಪ್ರವಾಸಿಗರ ದಂಡೆ ಹರಿದು ಬರುತ್ತಿದ್ದು 20 ಸಾವಿರಕ್ಕೂ ಅಧಿಕ ಕ್ಯೂಸೆಕ್ಸ್ ಪ್ರಮಾಣದಲ್ಲಿ ಹರಿಯುತ್ತಿರುವ ನದಿಯ ನೀರಿನ ರಮಣೀಯ ದೃಶ್ಯ ಕಂಡು ಮೂಖ ವಿಸ್ಮಿತರಾಗುತ್ತಿದ್ದಾರೆ.

ಮೈದುಂಬಿ ಹರಿಯುತ್ತಿರುವ ಕಾವೇರಿ ವೀಕ್ಷಣೆ ಮಾಡಲು ಹೆಚ್ಚಾಗಿ ಯುವಕ ಮತ್ತು ಯುವತಿಯರು ಅಲ್ಲದೇ ಪ್ರವಾಸಿಗರು ಬರುತ್ತಿದ್ದು, ಇಲ್ಲಿ ಪ್ರತಿಷ್ಠಾಪಿಸಲಾಗಿರುವ ಆಂಜನೇಯ ವಿಗ್ರಹದ ಎದುರು ಸೆಲ್ಫಿ ತೆಗೆದುಕೊಳ್ಳಲು ನಾ ಮುಂದು ತಾಮುಂದು ಎಂಬಂತೆ ಮುಗಿ ಬೀಳುತ್ತಿರುವುದು ಸಾಮಾನ್ಯವಾಗಿದೆ. ಇದೇ ರೀತಿ ನದಿಯ ಕೂದಲೆಳೆ ದೂರದಲ್ಲಿರುವ ರಾಮಸಮುದ್ರ ಅಣ್ಣೆಕಟ್ಟೆ ಮತ್ತು ಚುಂಚನಕಟ್ಟೆಯಿಂದ ಸುಮಾರು 7 ಕಿಮೀ ದೂರದಲ್ಲಿರುವ ಸಕ್ಕರೆ ಗ್ರಾಮದ ಬಳಿಯ ಬಳ್ಳೂರು ಚಾಮರಾಜ ನಾಲೆ ಅಣ್ಣೆಕಟ್ಟೆ ಮೇಲೆ ಕಾವೇರಿ ನದಿ ನೀರು ಮೈದುಂಬಿ ಹರಿಯುವ ದೃಶ್ಯ ನಯನಮನೋಹರವಾಗಿದ್ದು ಇಲ್ಲಿಗೂ ಸಹ ಪ್ರವಾಸಿಗರ ದಂಡು ಹೆಚ್ಚಾಗಿ ಕಂಡು ಬರುತ್ತಿದೆ.

## ನೇರಳೆ–ಹಂಪಾಪುರದಲ್ಲಿ ನಾಳೆ ಕಾರ್ನಾಡು ಮಾಲಮ್ಮ ಮಂಡಲ ಪೂಜೆ

ನಂಜನಗೂಡು, ಜು.7– ನಂಜನಗೂಡು ತಾಲೂಕು ಕೌಲಂದೆ ಹೋಬಳಿಯ ನೇರಳೆ–ಹಂಪಾಪುರದಲ್ಲಿ ಜು.9ರಂದು ಶ್ರೀಕಾರ್ನಾಡು ಮಾಲಮ್ಮ ದೇವಿಯ ಮಂಡಲದ ಪೂಜೆಯನ್ನು ಏರ್ಪಡಿಸಲಾಗಿದೆ.



ಹಂಪಾಪುರ ಗ್ರಾಮದಲ್ಲಿ ನೆಲೆಗೊಂಡಿರುವ ಕಾರ್ನಾಡು ಮಾಲಮ್ಮನವರ ದೇವಸ್ಥಾನ ಸಂಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಮೇ.23ರಂದು ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ಹೋಮ ಹವನ ಮತ್ತು ಉತ್ಸವಗಳೊಂದಿಗೆ ಉದ್ಘಾಟನೆಗೊಂಡಿತ್ತು. ಅಂದು ಶ್ರೀ ಬೇಗೂರು ಮಾಲರಸಮ್ಮ, ಶ್ರೀ ಚಿಕ್ಕಮಾಲರಸಮ್ಮ, ಶ್ರೀ ಕಾರ್ನಾಡು ಮಾಲಮ್ಮ, ಶ್ರೀ ಹೊಳೆ ಮಸಣಮ್ಮ, ಶ್ರೀ ಪವಾಡ ಮಾಲಾರಸಮ್ಮ, ಶ್ರೀ ಸಿದ್ದರಾಮೇಶ್ವರ ಮತ್ತು ಶ್ರೀ ಹೊಳೆ ಚಿಕ್ಕಮ್ಮ ಚಿಕ್ಕದೇವಿಯರ ಉತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಿತ್ತು. ಮಂಡಲ ಪೂಜೆ ಅಂಗವಾಗಿ ಶುಕ್ರವಾರ (ಜು.8) ಬೆಳಗ್ಗೆ 6.30ರಿಂದ 7.30ರ ಸಮಯದಲ್ಲಿ ಶ್ರೀಕಾರ್ನಾಡು ಮಾಲಮ್ಮ ದೇವಸ್ಥಾನದಲ್ಲಿ ಹೋಮ–ಹವನ ನಡೆಯಲಿದೆ. ಮರುದಿನ (ಜು.9) ಮಂಡಲ ಪೂಜೆ ಮತ್ತು ಉತ್ಸವಗಳು ಅತ್ಯಂತ ವಿಜೃಂಭಣೆಯಿಂದ ನಡೆಯಲಿದ್ದು, ಸಾವಿರಾರು ಭಕ್ತಾದಿಗಳು ಭಾಗವಹಿಸುವ ನಿರೀಕ್ಷೆ ಇದೆ. ನಂತರ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.




ತಿ.ನರಸೀಪುರದ ಕುರುಬ ಸಮಾಜ, ಸಂಗೊಳ್ಳಿ ರಾಯಣ್ಣ ಯುವಕರ ಬಳಗ ಹಾಗೂ ಕನಕ ಸೇನಾ ಸಮಿತಿಯಿಂದ 2ನೇ ವರ್ಷದ ಕಂಡಾಯ ಉತ್ಸವ ಗುರುವಾರ ವಿಜೃಂಭಣೆಯಿಂದ ನಡೆಯಿತು. ಗುಂಜಾ ನರಸಿಂಹಸ್ವಾಮಿ ದೇವಾಲಯದ ಬಳಿಯ ಕಾವೇರಿ ಕಪಿಲ ಸ್ಫಟಿಕ ಸರೋವರದಲ್ಲಿ ಕಂಡಾಯಕ್ಕೆ ಹೂವಿನ ಅಲಂಕಾರ ಮಾಡಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

### ಕೇರಳದ ವೈನಾಡಿನಲ್ಲಿ ಭಾರೀ ಮಳೆ ಹಿನ್ನೆಲೆ

## ಕಬಿನಿ ಜಲಾಶಯ ಭರ್ತಿಗೆ 6 ಅಡಿ ಬಾಕಿ

• ಜಲಾಶಯಕ್ಕೆ 19 ಸಾವಿರ ಕ್ಯೂಸೆಕ್ಸ್ ಒಳಹರಿವು • 5 ಸಾವಿರ ಕ್ಯೂಸೆಕ್ಸ್ ಹೊರಹರಿವು



ಕೇರಳದಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಬಿನಿ ಜಲಾಶಯಕ್ಕೆ ನೀರು ಹರಿದು ಬರುತ್ತಿರುವುದರಿಂದ ಬಿದರಹಳ್ಳಿ ಸರ್ಕಲ್ ಗ್ರಾಮದ ನಿವಾಸಿಗಳು ಆತಂಕ ಒಳಗಾಗಿದ್ದಾರೆ. ಕಳೆದ 4 ವರ್ಷಗಳ ಹಿಂದೆ ಉಂಟಾದ ಪ್ರವಾಹದಿಂದ ಮನೆ ಕಳೆದುಕೊಂಡು ಬೀದಿ ಪಾಲಾದ 48 ಕುಟುಂಬಗಳಿಗೆ ಸರ್ಕಾರ ಇಲ್ಲಿಯವರೆಗೆ ಸೂರು ಕಲ್ಪಿಸಿಲ್ಲ. ಇದೀಗ ಮತ್ತೆ ಅದೇ ಆತಂಕ ಎದುರಾಗಿದೆ. ಹೀಗಾಗಿ ಸರ್ಕಾರ ಈ ಬಗ್ಗೆ ಕ್ರಮ ಕೈಗೊಂಡು ಮನೆ ನಿರ್ಮಿಸಿ ಕೊಡಬೇಕು.

– ಕಾತುರಾಯ, ಬಿದರಹಳ್ಳಿ ಸರ್ಕಲ್ ನಿವಾಸಿ.

ಹೆಚ್.ಡಿ.ಕೋಟೆ, ಜು.7(ಮಂಜು)– ಕಳೆದ ಒಂದು ವಾರದಿಂದ ಕೇರಳದ ವೈನಾಡಿನಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಕಬಿನಿ ಜಲಾಶಯ ಭರ್ತಿಯಾಗಲು 6 ಅಡಿ ಬಾಕಿ ಇದೆ ಎಂದು ಕಬಿನಿ ಸಹಾಯಕ ಕಾರ್ಯ ಪಾಲಕ ಅಭಿಯಂತರ ಜನಾರ್ಧನ್ ತಿಳಿಸಿದ್ದಾರೆ.

ಒಟ್ಟು 2284 ಗರಿಷ್ಠ ಮಟ್ಟದ ಕಬಿನಿ ಜಲಾಶಯದಲ್ಲಿ ಪ್ರಸ್ತುತ 2278 ಅಡಿಗಳಷ್ಟು ನೀರು ಶೇಖರಣೆಯಾಗಿದೆ. ಜಲಾಶಯಕ್ಕೆ 19 ಸಾವಿರ ಕ್ಯೂಸೆಕ್ಸ್ ನೀರು ಹರಿದು ಬರುತ್ತಿದ್ದು, ಕೇರಳದ ವೈನಾಡಿನಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಇನ್ನೂ ಹೆಚ್ಚಿನ ಒಳಹರಿವು ಹರಿದು ಬರುವ ಸಾಧ್ಯತೆ ಇರುವುದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಜಲಾಶಯದ ಸುಭಾಷ್ ಕಬಿನಿ ಪವರ್ ಪ್ರಾಜೆಕ್ಟ್ (ವಿದ್ಯುತ್ ಉತ್ಪಾದನಾ ಘಟಕ)ನಿಂದ 5 ಸಾವಿರ ಕ್ಯೂಸೆಕ್ಸ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಜಲಾಶಯಕ್ಕೆ 19 ಸಾವಿರ ಕ್ಯೂಸೆಕ್ಸ್ ಹರಿದು ಬರುತ್ತಿರುವುದರಿಂದ ಶುಕ್ರವಾರ, ಶನಿವಾರ ಜಲಾಶಯದ ಪ್ರಮುಖ 4 ಕ್ರಸ್ಟ್ ಗೇಟ್‌ಗಳ ಮೂಲಕ ನದಿಗೆ ನೀರು ಹರಿಸುವ ಸಾಧ್ಯತೆ ಇದೆ. ಹೀಗಾಗಿ ನದಿ ಪಾತ್ರದ ಜನರು, ಮೀನುಗಾರರು, ದನ ಕಾಯುವವರು ಹಾಗೂ ರೈತರು ನದಿಗೆ ಇಳಿಯದೇ ಸುರಕ್ಷಿತ ಪ್ರದೇಶಕ್ಕೆ ತೆರಳುವಂತೆ ಜನಾರ್ಧನ್ ಮನವಿ ಮಾಡಿದ್ದಾರೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 2275 ಅಡಿ ನೀರು ಸಂಗ್ರಹವಾಗಿತ್ತು. ಅಲ್ಲದೇ 1402 ಕ್ಯೂಸೆಕ್ಸ್ ಒಳಹರಿವು, 700 ಕ್ಯೂಸೆಕ್ಸ್ ಹೊರ ಹರಿವಿತ್ತು.

## ಸ್ಕೂಟರ್ ಮೇಲೆ ಬಿದ್ದ ವಿದ್ಯುತ್ ಕಂಬ: ಇಬ್ಬರಿಗೆ ಗಾಯ

ಹೆಚ್.ಡಿ.ಕೋಟೆ, ಜು.7 (ಮಂಜು)– ಪಟ್ಟಣದ ತೊರಳ್ಳಿ ಸರ್ಕಾರಿ ಶಾಲೆ ಬಳಿ ಸ್ಕೂಟರ್ ಮೇಲೆ ವಿದ್ಯುತ್ ಕಂಬ ಬಿದ್ದ ಪರಿಣಾಮ ಸವಾರರಿಬ್ಬರು ತೀವ್ರ ಗಾಯಗೊಂಡು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಪಟ್ಟಣದ ನಿವಾಸಿಗಳಾದ ಧನಂಜಯ ಮತ್ತು ಟಿಪ್ಪು ಗಾಯಗೊಂಡವರು. ಇವರಿಬ್ಬರು ಸ್ಕೂಟರ್‌ನಲ್ಲಿ ತೆರಳುತ್ತಿದ್ದ ವೇಳೆ ತೊರಳ್ಳಿ ಗ್ರಾಮದ ಸರ್ಕಾರಿ ಶಾಲೆಯ ಬಳಿ ವಿದ್ಯುತ್ ಕಂಬ ಇವರಿಬ್ಬರ ಮೇಲೆ ಬಿದ್ದಿದೆ. ಈ ವೇಳೆ ಸ್ಥಳದಲ್ಲಿದ್ದ ಗ್ರಾಮಸ್ಥರು ತೀವ್ರ ಗಾಯಗೊಂಡ ಇವರಿಬ್ಬರನ್ನು ರಕ್ಷಿಸಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದಾರೆ. ಘಟನೆಯಲ್ಲಿ ಸ್ಕೂಟರ್ ಸಂಪೂರ್ಣ ಜಖಂಗೊಂಡಿದೆ. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಸಹಾಯಕ ಕಾರ್ಯ ಪಾಲಕ ಅಭಿಯಂತರ ಸಂದೀಪ್ ಪರಿಶೀಲಿಸಿದರು. ಅಲ್ಲದೇ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

# ಕಾಂಗ್ರೆಸ್‌ನಲ್ಲಿ ಯಾವುದೇ ಬಣ ರಾಜಕೀಯ, ಭಿನ್ನಾಭಿಪ್ರಾಯವಿಲ್ಲ

ಮುಂಬರುವ ಚುನಾವಣೆಯಲ್ಲಿ 'ಕೈ' ಗೆ ಬಹುಮತ: ಶಾಸಕ ಯತೀಂದ್ರ ವಿಶ್ವಾಸ



ನಂಜನಗೂಡು, ಜು.7(ಸುದರ್ಶನ್)– ಕಾಂಗ್ರೆಸ್‌ನಲ್ಲಿ ಯಾವುದೇ ಬಣ ರಾಜಕೀಯ, ಭಿನ್ನಾಭಿಪ್ರಾಯವಿಲ್ಲ. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬಹುಮತ ಬರಲಿದ್ದು, ಅಧಿಕಾರ ಹಿಡಿಯುವುದು ನಿಶ್ಚಿತ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ತಾಂಡವಪುರದಲ್ಲಿ 80 ಲಕ್ಷ, ಬಂಚಳ್ಳಿ ಹುಂಡಿಯಲ್ಲಿ 30 ಲಕ್ಷ, ಕೆಂಪಿಸಿದ್ದನಹುಂಡಿಯಲ್ಲಿ 80 ಲಕ್ಷ, ಹೆಜ್ಜಿಗೆ ಗ್ರಾಮದಲ್ಲಿ 35 ಲಕ್ಷ ಒಟ್ಟು 2 ಕೋಟಿ 25 ಲಕ್ಷ ರೂ. ವೆಚ್ಚದ ಒಳಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಜನರು ಈಗಾಗಲೇ ಬೆಲೆ ಏರಿಕೆ, ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ದುರಾಡಳಿತ ನೋಡಿ ಬೇಸತ್ತಿದ್ದು, ಎಲ್ಲೆಡೆ ಜನವಿರೋಧಿ ಅಲೆ ಇದೆ. ಜೊತೆಗೆ ಮಾಜಿ ಸಿಎಂ ಸಿದ್ದರಾಮಯ್ಯ ಅವಧಿಯ ಕಾಂಗ್ರೆಸ್ ಸರ್ಕಾರದ ಸಾಧನೆಗಳು, ಜನಪರ ಯೋಜನೆಗಳು ಜನರ ಮನಸ್ಸಿನಲ್ಲಿ ಹಚ್ಚ ಹಸಿರಾಗಿದೆ. ಹೀಗಾಗಿ ಈ ಬಾರಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯುವುದು ಖಚಿತ ಎಂದರು.

ಸಚಿವ ಡಾ.ಸುಧಾಕರ್ ಪ್ರತಿ ಚುನಾವಣೆಯಲ್ಲೂ ಸಿದ್ದರಾಮಯ್ಯ ಕ್ಷೇತ್ರ ಹುಡುಕಾಟದಲ್ಲಿದ್ದಾರೆ ಎಂಬ ಹೇಳಿಕೆ ನೀಡುತ್ತಾರೆ. ಆದರೆ ಬೇರೆ ಪಕ್ಷದ ನಾಯಕರು ಒಂದೇ ಕ್ಷೇತ್ರದಲ್ಲಿ ಗೆಲ್ಲುವುದು ಕಷ್ಟ. ಆದರೆ ಸಿದ್ದರಾಮಯ್ಯನವರು ರಾಜ್ಯದ ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಗೆಲ್ಲುವ ಸಾಮರ್ಥ್ಯ ಹೊಂದಿದ್ದಾರೆ. ಜೊತೆಗೆ ಎಲ್ಲಾ ಶಾಸಕರು ತಮ್ಮ ಕ್ಷೇತ್ರ ಬಿಟ್ಟು ಕೊಡುತ್ತೇವೆಂದು ಆಹ್ವಾನಿಸಿದ್ದಾರೆ. ಒಂದು ವೇಳೆ ಅವರು ವರುಣಾ ಕ್ಷೇತ್ರದಿಂದಲೇ ಸ್ಪರ್ಧಿಸುವುದಾದರೆ ನಾನು ಸಂತೋಷದಿಂದ ಕ್ಷೇತ್ರ ಬಿಟ್ಟು ಕೊಡಲಿದ್ದೇನೆ ಎಂದರು.

ಸಿದ್ದರಾಮಯ್ಯ 75 ಅಮೃತ ಮಹೋತ್ಸವ ಯಾವುದೇ ಬಲ ಪ್ರದರ್ಶನಕ್ಕಾಗಿ ಆಯೋಜಿಸಿಲ್ಲ. ಬದಲಾಗಿ ಸಿದ್ದರಾಮ್ಮಯ್ಯನವರು 45 ವರ್ಷ ಸುದೀರ್ಘ ರಾಜಕೀಯ ಸೇವೆ ಮತ್ತು ಅವರ ಸಾಧನೆ ಸ್ಮರಣಾರ್ಥ ಆಯೋಜಿಸಲಾಗುತ್ತಿದೆ ಎಂದರು. ತಾಲೂಕಿನ ತಾಂಡವಪುರ, ಬಂಚಳ್ಳಿಹುಂಡಿಯಲ್ಲಿ ಚರಂಡಿ ನೀರು ರಸ್ತೆಗೆ ನುಗ್ಗಿ ಸಮಸ್ಯೆಯುಂಟಾಗಿತ್ತು. ಅಲ್ಲದೆ ಒಳಚರಂಡಿ ಕಾಮಗಾರಿ ಸಹ ಅಪೂರ್ಣಗೊಂಡಿತ್ತು ಈ ಕಾಮಗಾರಿ ಪೂರ್ಣಗೊಳಿಸಿ ಸಮಸ್ಯೆ ನಿವಾರಿಸುವ ಸಲುವಾಗಿ 80 ಲಕ್ಷ ವೆಚ್ಚದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಈ ಕಾಮಗಾರಿಗಳು ಶೀಘ್ರ ಪೂರ್ಣಗೊಂಡು ಜನರಿಗೆ ಅನುಕೂಲವಾಗಲಿದೆ ಎಂದರು.

ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ತಾಂಡವಪುರ ಗ್ರಾಪಂ ಅಧ್ಯಕ್ಷೆ ನಾಗವೇಣಿ, ಮುಖಂಡರಾದ ದಕ್ಷಿಣಮೂರ್ತಿ, ಇಂಧನ್‌ಬಾಬು, ಶಿವಕುಮಾರ್, ಗಿರೀಶ್, ಸಿ.ಆರ್. ಮಹದೇವು, ಜಗದೀಶ್, ಗ್ರಾಪಂ ಸದಸ್ಯರಾದ ಪ್ರಭುಸ್ವಾಮಿ, ಶ್ರೀಕಂಠಸ್ವಾಮಿ, ಚಂದ್ರು, ಧರ್ಮರಾಜು, ರಾಕೇಶ್, ಶಿವರಾಜು, ಗಿರಿಧರ್, ಕೆಂಪಣ್ಣ, ಸೇರಿದಂತೆ ಇತರರಿದ್ದರು.

### ಹುಣಸೂರಿನ ಉಪಅಧೀಕ್ಷಕರ ಕಚೇರಿಯಲ್ಲಿ ರೌಡಿಗಳ ಪರೇಡ್

## ರೌಡಿಶೀಟರ್‌ಗಳಿಗೆ ಖಡಕ್ ವಾರ್ನಿಂಗ್



ಹುಣಸೂರು, ಜು.7(ಕೆಕೆ)– ಹುಣಸೂರಿನ ಉಪಅಧೀಕ್ಷಕರ ಕಚೇರಿ ಆವರಣದಲ್ಲಿ ಉಪವಿಭಾಗ ಮಟ್ಟದ ರೌಡಿ ಪರೇಡ್ ನಡೆಸಲಾಯಿತು.

ಉಪವಿಭಾಗದ ಎಚ್.ಡಿ.ಕೋಟೆ, ಪಿರಿಯಾಪಟ್ಟಣ, ಸರಗೂರು, ಹುಣಸೂರು ವ್ಯಾಪ್ತಿಯ 9 ಠಾಣಾ ವ್ಯಾಪ್ತಿಯ ಸುಮಾರು 250ಕ್ಕೂ ಹೆಚ್ಚು ರೌಡಿಶೀಟರ್ ಪಟ್ಟಿಯಲ್ಲಿರುವವರು ಪರೇಡ್‌ನಲ್ಲಿ ಭಾಗವಹಿಸಿದ್ದರು. ಅಡಿಷನಲ್ ಎಸ್‌ಪಿ ಶಿವಕುಮಾರ್ ಆಯಾ ಠಾಣಾ ವ್ಯಾಪ್ತಿಯ ರೌಡಿಶೀಟರ್‌ಗಳ ಸಮಗ್ರ ಮಾಹಿತಿಯನ್ನು ಠಾಣಾ ಇನ್ಸ್ ಪೆಕ್ಟರ್‌ಗಳಿಂದ ಪಡೆದರು.

ನಂತರ ಮಾತನಾಡಿದ ಅಡಿಷನಲ್ ಎಸ್‌ಪಿ ಶಿವಕುಮಾರ್, ಒಮ್ಮೆ ರೌಡಿಶೀಟರ್ ಪಟ್ಟಿ ದಾಖಲಾದರೆ, ನಿಮ್ಮ ಮೇಲೆ ಪೊಲೀಸರು ಸದಾ ಕಣ್ಗಾವಲಾಗಿರುತ್ತಾರೆ. ಅಕ್ರಮ ಚಟುವಟಿಕೆ, ರೌಡಿ ಚಟುವಟಿಕೆ, ಇತರ ಚಟುವಟಿಕೆಗಳಲ್ಲಿ ಭಾಗವಹಿಸದೆ ಒಳ್ಳೆಯ ನಡತೆ, ಸಮಾಜದಲ್ಲಿ ಉತ್ತಮ ಒಡನಾಟ ರೂಢಿಸಿಕೊಂಡು ಸಮಾಜಮುಖಿ ಕೆಲಸದಲ್ಲಿ ತೊಡಗಿಸಿಕೊಳ್ಳಿ. ಪದೇ ಪದೇ ನಿಮ್ಮ ವಿರುದ್ಧ ಕೇಸ್ ದಾಖಲಾದಲ್ಲಿ ನಿಮ್ಮ ಭವಿಷ್ಯ ಹಾಳಾಗುವ ಜೊತೆಗೆ ಕುಟುಂಬಗಳು ತೊಂದರೆಗೆ ಸಿಲುಕಲಿವೆ ಎಂದು ಎಚ್ಚರಿಸಿದರು. ಈ ವೇಳೆ ಡಿವೈಎಸ್‌ಪಿ.ರವಿಪ್ರಸಾದ್, ಹುಣಸೂರು ಗ್ರಾಮಾಂತರ ಠಾಣೆ ನಿರೀಕ್ಷಕ ಸಿ.ವಿ.ರವಿ, ನಗರ ಠಾಣೆ ಶ್ರೀನಿವಾಸ್, ಇನ್ಸ್‌ಪೆಕ್ಟರ್‌ಗಳಾದ ಜಗದೀಶ್, ಆನಂದ್, ಬಸವರಾಜು, ಎಸ್‌ಐಗಳಾದ ಜಯಪ್ರಕಾಶ್, ಜಮೀರ್ ಅಹಮದ್, ಎಎಸ್‌ಐ ರಂಗಸ್ವಾಮಿ ಸೇರಿದಂತೆ ಉಪವಿಭಾಗದ ಪೊಲೀಸ್ ಅಧಿಕಾರಿಗಳು ಹಾಜರಿದ್ದರು.

## ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಪಂ ಸದಸ್ಯರ ಪಾತ್ರ ಅಪಾರ

ಎಸ್‌ಐಆರ್‌ಡಿ ಸಂಸ್ಥೆ ಸಂಪನ್ಮೂಲ ವ್ಯಕ್ತಿ ರಾಜಾ ಹುಣಸೂರು ಪ್ರತಿಪಾದನೆ



ತಿ.ನರಸೀಪುರ, ಜು.7(ಎಸ್‌ಕೆ)– ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಪಂ ಸದಸ್ಯರು ಬಹುಮುಖ್ಯ ಪಾತ್ರ ವಹಿಸಿದ್ದಾರೆ ಎಂದು ಎಸ್‌ಐಆರ್‌ಡಿ ಸಂಸ್ಥೆ ಸಂಪನ್ಮೂಲ ವ್ಯಕ್ತಿ ರಾಜಾ ಹುಣಸೂರು ಪ್ರತಿಪಾದಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಆಯೋಜಿಸಿದ್ದ ಗ್ರಾಪಂ ಸದಸ್ಯರ ಮಹಾ ಒಕ್ಕೂಟದ ರಚನಾ ಸಮಿತಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಜನಸಾಮಾನ್ಯರ ದುಃಖ ದುಮ್ಮಾನಗಳಿಗೆ ಸ್ಪಂದಿಸುವ ಗ್ರಾಪಂ ಸದಸ್ಯರಿಗೆ ಅತ್ಯುನ್ನತ ಗೌರವ ಸಲ್ಲಬೇಕು ಎಂದರು.

ಗ್ರಾಮದ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವ ಸಂದರ್ಭ ಅಧಿಕಾರಿ ವರ್ಗ ಹಾಗೂ ಮೇಲಿನ ಹಂತದ ಚುನಾಯಿತ ಸದಸ್ಯರ ಹಸ್ತಕ್ಷೇಪದಿಂದಾಗಿ ಗ್ರಾಪಂ ಸದಸ್ಯರು ಹಲವು ಸಮಸ್ಯೆ ಎದುರಿಸುತ್ತಿದ್ದು ಸಂಘಟಿತರಾಗುವ ಮೂಲಕ ಪರಿಹಾರ ಕಂಡುಕೊಳ್ಳಬೇಕು ಎಂದರು.

ಒಕ್ಕೂಟದ ರಾಜ್ಯ ಜಂಟಿ ಕಾರ್ಯದರ್ಶಿ ನಿಶಾಂತ್ ಮಾತನಾಡಿ, ಗ್ರಾಪಂಗೆ ಕೊಟ್ಟಿರುವ ಪರಮಾಧಿಕಾರವನ್ನು ಗ್ರಾಪಂ ಚುನಾಯಿತ ಪ್ರತಿನಿಧಿಗಳು ತಮ್ಮ ಜ್ಞಾನ ಹೆಚ್ಚಿಸಿಕೊಳ್ಳುವ ಮೂಲಕ ಪಂಚಾಯಿತಿ ಸಭೆಗಳಲ್ಲಿ ನಿರ್ಣಯ ಕೈಗೊಳ್ಳಲು ಬಳಸಬೇಕು ಎಂದರು.

ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಮಾತನಾಡಿ, ಗ್ರಾಪಂ ಸದಸ್ಯರ ಸಮಸ್ಯೆ ಬಗೆಹರಿಸುವುದು, ಗೌರವಧನ ಹೆಚ್ಚಳ, ಉಚಿತ ಬಸ್‌ಪಾಸ್ ಮತ್ತು ಅನುದಾನ ಹೆಚ್ಚಳ ಸೇರಿದಂತೆ ಹಲವು ಬೇಡಿಕೆ ಈಡೇರಿಸಲು ಒತ್ತಾಯಿಸಿ ರಾಜ್ಯ ಒಕ್ಕೂಟದಿಂದ ಕಾರ್ಯತಂತ್ರ ರೂಪಿಸಲಾಗಿದೆ ಎಂದರು

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧ್ಯಕ್ಷ ನಾಗರಾಜು ಮಾತನಾಡಿ, ಜಿಲ್ಲೆಯ ವಿವಿಧ ಗ್ರಾಪಂಗಳಲ್ಲಿ ಅಧ್ಯಕ್ಷರು ಮತ್ತು ಸದಸ್ಯರಿಗೆ ಪಿಡಿಓಗಳು ಸರಿಯಾದ ಮಾಹಿತಿ ನೀಡದೆ ಸದಸ್ಯರನ್ನು ಒಡೆದಾಳುವ ನೀತಿ ಅನುಸರಿಸುತ್ತಿದ್ದಾರೆ ಎಂಬ ದೂರು ಬಂದಿದ್ದು, ಇದರ ವಿರುದ್ಧ ಹೋರಾಟ ರೂಪಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಮಟ್ಟದಲ್ಲಿ ಸರ್ಕಾರದ ಗಮನ ಸೆಳೆಯುವ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದರು.

ಇದೇ ವೇಳೆ ತಾಲೂಕು ಒಕ್ಕೂಟದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಒಕ್ಕೂಟದ ತಾಲೂಕು ಅಧ್ಯಕ್ಷರಾಗಿ ರಂಗಸಮುದ್ರ ಪಂಚಾಯಿತಿ ಸದಸ್ಯ ಮಂಜುನಾಥ್.ಆರ್, ತಾಲೂಕು ಪ್ರಧಾನ ಕಾರ್ಯದರ್ಶಿ ಚಿದರವಳ್ಳಿ ಗ್ರಾಪಂ ಸದಸ್ಯ ಮಹೇಶ್.ಕೆ ಹಾಗೂ ಖಜಾಂಚಿಯಾಗಿ ಕುಪ್ಪೆ ಗ್ರಾಪಂ ಸದಸ್ಯೆ ಭಾಗ್ಯಮ್ಮ, ಉಪಾಧ್ಯಕ್ಷರಾಗಿ ಶಿವಮ್ಮ ದೇವರಾಜು, ಶ್ರೀನಿವಾಸಮೂರ್ತಿ, ಗರ್ಗೇಶ್ವರಿ ಗ್ರಾಪಂ ಮಸೂರ್ ಅಹಮದ್, ಚಂದ್ರಮ್ಮ, ಸುಮಿತ್ರ, ಶಿವಮ್ಮ, ಸಹ ಕಾರ್ಯ ದರ್ಶಿಗಳಾಗಿ ಸರಸ್ವತಿ, ನಂಜಮಣ್ಣಿ, ಮಂಗಳಮ್ಮ, ಗರ್ಗೇಶ್ವರಿ ಗ್ರಾಪಂ ಸದಸ್ಯ ನಿರಂಜನ್, ಶಾಂತರಾಜು ಮತ್ತು ಗಂಗಾಧರ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ನಾಗೇಶ್, ನಬಿದುಲ್ಲ, ರಾಘವೇಂದ್ರ, ಮಹದೇವಸ್ವಾಮಿ, ಮಂಗಳಮ್ಮ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಮಿತಿ ಉಪಾಧ್ಯಕ್ಷ ರಂಗಸ್ವಾಮಿ, ಸದಸ್ಯರಾದ ಧನಂಜಯ್ ಹಾಗೂ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಂಪನ್ಮೂಲ ವ್ಯಕ್ತಿ ಅಣ್ಣೇಗೌಡ, ತಾಲೂಕಿನ ವಿವಿಧ ಗ್ರಾಪಂಗಳ ನೂರಾರು ಸದಸ್ಯರು ಭಾಗವಹಿಸಿದ್ದರು.



## ಆಶಾ ನಿಧನ



ಹೆಚ್.ಡಿ.ಕೋಟೆ, ಜು.7– ಬಿಜೆಪಿ ಮುಖಂಡ ಜಕ್ಕಹಳ್ಳಿ ಜೆ.ಪಿ. ಶಿವರಾಜು ಅವರ ಪುತ್ರಿ ಆಶಾ(52) ಗುರುವಾರ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಮೃತರ ಸ್ವಗ್ರಾಮದ ಜಮೀನಿನಲ್ಲಿ ನೆರವೇರಲಿದೆ.

## ಮಾದನಹಳ್ಳಿ ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಣೆ

ಮಲ್ಕುಂಡಿ, ಜು.7(ಚನ್ನಪ್ಪ)– ಶಿಕ್ಷಣದಿಂದ ಮಾತ್ರ ಉತ್ತಮ ಪ್ರಜೆಯಾಗಲು ಸಾಧ್ಯ ಎಂದು ದೊಡ್ಡ ಕೌಲಂದೆ ಪೊಲೀಸ್ ಠಾಣೆ ಎಸ್‌ಐ ಮಹೇಂದ್ರ ತಿಳಿಸಿದರು.

ಇಲ್ಲಿನ ಮಾದನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಮೀರಾ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಪ್ರಯುಕ್ತ ಶಾಲೆ ಮಕ್ಕಳಿಗೆ ನೋಟ್‌ಬುಕ್ ಮತ್ತು ಪೆನ್ ವಿತರಿಸಿ ಮಾತನಾಡಿದ ಅವರು, ಪೋಷಕರು ತಮ್ಮ ಮಕ್ಕಳಿಗಾಗಿ ಆಸ್ತಿ ಮಾಡುವುದಕ್ಕಿಂತ ಗುಣಮಟ್ಟದ ಶಿಕ್ಷಣ ಕೊಡಿಸಬೇಕು. ಸರ್ಕಾರ ಮಕ್ಕಳ ಶಿಕ್ಷಣಕ್ಕಾಗಿ ಹೆಚ್ಚು ಒತ್ತು ನೀಡುತ್ತಿದೆ. ಹೀಗಾಗಿ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸುವ ಮೂಲಕ ಸರ್ಕಾರದ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಪೋಷಕರು ತಿಂಗಳಿಗೊಮ್ಮೆ ಶಾಲೆಗೆ ಭೇಟಿ ನೀಡಿ ತಮ್ಮ ಮಕ್ಕಳ ಬಗ್ಗೆ ವಿಚಾರಿಸಬೇಕು. ಇದರಿಂದ ಮಕ್ಕಳು ತಮ್ಮ ಓದಿನತ್ತ ಗಮನ ಕೇಂದ್ರಿಕರಿಸುತ್ತಾರೆ. ಶಿಕ್ಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಅವರ ಭವಿಷ್ಯಕ್ಕೆ ದಾರಿದೀಪವಾಗಬೇಕು ಎಂದರು.

ಈ ವೇಳೆ ಕೃಷಿ ಟ್ರಾಕ್ಟರ್ ಮಾಲೀಕರ ಸಂಘದ ತಾಲೂಕು ಅಧ್ಯಕ್ಷ ಮೂರ್ತಿ, ನಂಜುಂಡಸ್ವಾಮಿ, ದೇವಣ್ಣ, ಅಂಕನಾಥಪ್ಪ, ಲಕ್ಷ್ಮಿ, ಎಂ.ಕೆ.ಸುಬ್ಬಣ್ಣ, ಮಲ್ಲಿಕಾರ್ಜುನಪ್ಪ, ಮಹದೇವಪ್ಪ ಹಾಗೂ ಶಿಕ್ಷಕ ವೃಂದ ಹಾಜರಿದ್ದರು.



## ಚಾಮುಂಡೇಶ್ವರಿ ಕ್ಷೇತ್ರ ನಗರ ಪ್ರದೇಶದ ಬಡವರಿಗೆ

# 2446 ಮನೆ ನಿರ್ಮಾಣಕ್ಕೆ ನಿರ್ಧಾರ

● ಜು.17ರಂದು ಶಂಕುಸ್ಥಾಪನೆ ● ಮಂಡಕಳ್ಳಿ ಬಳಿ 40 ಎಕರೆಯಲ್ಲಿ ಮನೆ ನಿರ್ಮಾಣ



ಮೈಸೂರು ನಗರ ಪಾಲಿಕೆ ಸಭಾಂಗಣದಲ್ಲಿ ನಡೆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ನಗರ ಆಶ್ರಯ ವಸತಿ ಸಮಿತಿ ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರು ಯೋಜನೆ ಅನುಷ್ಠಾನದ ಜಾಗವನ್ನು ರಾಜೀವ್ ಗಾಂಧಿ ವಸತಿ ನಿಗಮದ ಅಧಿಕಾರಿಗಳಿಗೆ ಹಸ್ತಾಂತರಿಸಿದರು. ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಮತ್ತಿತರರಿದ್ದರು.

ಮೈಸೂರು, ಜು.7(ಎಸ್‌ಬಿಡಿ)– ಸೂರಿಗಾಗಿ ಕನವರಿಸುತ್ತಿದ್ದ ಬಡವರ ಕನಸು ನನಸಾಗುವ ಕಾಲ ಸನ್ನಿಹಿತವಾಗಿದ್ದು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು ಎರಡೂವರೆ ಸಾವಿರ ಮನೆಗಳ ನಿರ್ಮಾಣಕ್ಕೆ ಜು.17ರಂದು ಶಂಕುಸ್ಥಾಪನೆ ನೆರವೇರಲಿದೆ.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ನಗರ ಆಶ್ರಯ ವಸತಿ ಸಮಿತಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ನಗರ ಪಾಲಿಕೆಯ ನವೀಕೃತ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಗುರುವಾರ ನಡೆದ ಸಮಿತಿಯ ಸಭೆಯಲ್ಲಿ 159 ಕೋಟಿ ರೂ. ಅಂದಾಜು ಮೊತ್ತದಲ್ಲಿ 2,446 ಮನೆಗಳ ನಿರ್ಮಾಣ ಯೋಜನೆ ಹಾಗೂ ಫಲಾನುಭವಿಗಳ ಅಂತಿಮ ಪಟ್ಟಿಗೆ ಅನುಮೋದನೆ ನೀಡುವುದರ ಜೊತೆಗೆ ಶಂಕುಸ್ಥಾಪನೆ ದಿನಾಂಕವನ್ನೂ ನಿಗದಿಪಡಿಸಲಾಯಿತು. ಈ ಮೂಲಕ ಹಲವು ವರ್ಷಗಳಿಂದ ಅರ್ಜಿ ಹಾಕಿ, ಸೂರಿಗಾಗಿ ಕಾದು ಕುಳಿತಿದ್ದ ಬಡವರಿಗೆ ಸಿಹಿ ಸುದ್ದಿ ನೀಡಲಾಯಿತು.

ಮಂಡಕಳ್ಳಿಯ 40 ಎಕರೆ ಜಾಗದಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ(ಆರ್‌ಜಿಹೆಚ್‌ಸಿಎಲ್)ದ ಮೂಲಕ ಮನೆಗಳನ್ನು ನಿರ್ಮಿಸಲಿದ್ದು, ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರು, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ ಹಾಗೂ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಅವರೊಂದಿಗೆ ನಿಗಮದ ಪ್ರಧಾನ ವ್ಯವಸ್ಥಾಪಕ ಮಹದೇವ ಪ್ರಸಾದ್ ಅವರಿಗೆ ದಾಖಲೆಗಳನ್ನು ನೀಡುವ ಮೂಲಕ ಭೂಮಿ ಹಸ್ತಾಂತರಿಸಿದರು.

ಮಹತ್ವದ ಯೋಜನೆ ಹಾಗೂ ಬಹುತೇಕ ಫಲಾನುಭವಿಗಳ ಆಯ್ಕೆ ಅಂತಿಮವಾದ ಹಿನ್ನೆಲೆಯಲ್ಲಿ ಶಾಸಕ ಜಿಟಿಡಿ, ಸಭೆಯ ನಡುವೆಯೇ ವಸತಿ ಸಚಿವ ವಿ.ಸೋಮಣ್ಣ ಅವರನ್ನು ಮೊಬೈಲ್ ಮೂಲಕ ಸಂಪರ್ಕಿಸಿ, ಶಂಕುಸ್ಥಾಪನೆ ದಿನಾಂಕವನ್ನೂ ನಿಗದಿಪಡಿಸಿದರು. ಜು.17ರಂದು ಬೆಳಗ್ಗೆ 11 ಗಂಟೆಗೆ ವಸತಿ ಸಚಿವರು ಸೇರಿದಂತೆ ಹಲವು ಗಣ್ಯರ ಸಮ್ಮುಖದಲ್ಲಿ ಯೋಜನೆಗೆ ಚಾಲನೆ ನೀಡಲಿದ್ದು, ಇದಕ್ಕೆ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ ಜಿಟಿಡಿ ಮಾತನಾಡಿ, ಈ ಹಿಂದೆ ವಸತಿ ಯೋಜನೆಗಳಡಿ ನಿರ್ಮಿಸಿದ ವಸತಿ ಸಮುಚ್ಛಯದಲ್ಲಿ ಹಲವರು ಅನಧಿಕೃತವಾಗಿ ಸೇರಿಕೊಂಡಿದ್ದರಿಂದ ಅರ್ಹರಿಗೆ ವಂಚನೆಯಾಗಿದೆ. ರಾಜರಾಜೇಶ್ವರಿನಗರ ಬೋಗಾದಿ ಆಶ್ರಯ ಬಡಾವಣೆಯಲ್ಲಿ ಫೋರ್ಜರಿ ಮಾಡಿ ಮೂರು ಮನೆಗಳನ್ನು ಬೇರೆಯವರನ್ನು ಕಬಳಿಸಿರುವ ಬಗ್ಗೆ ಮಾಹಿತಿ ಇದೆ. ಸಂಬಂಧಿಸಿದ ಕಡತಗಳನ್ನು ಅಧಿಕಾರಿಗಳು ಪ್ರಸ್ತುತಪಡಿಸಬೇಕು. ಇಂತಹ ಅಕ್ರಮಗಳಿಗೆ ಅವಕಾಶ ನೀಡದೆ ಫಲಾನುಭವಿಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡಬೇಕೆಂಬ ಉದ್ದೇಶದಿಂದ ಸಮಗ್ರ ದಾಖಲೆಗಳ ಪರಿಶೀಲನೆ ನಡೆಸಲಾಗಿದೆ. ಹಾಗಾಗಿ ಯೋಜನೆ ಅನುಷ್ಠಾನ ಇಷ್ಟು ವಿಳಂಬವಾಯಿತು ಎಂದರು.

**ಆ.15ರ ಗಡುವು:** ಫಲಾನುಭವಿಗಳಿಗೆ ನೋಟೀಸ್ ಕಳುಹಿಸಿ, ಶೇ.10ರಷ್ಟು ಮುಂಗಡ ಪಾವತಿಸುವಂತೆ ತಿಳುವಳಿಕೆ ನೀಡಬೇಕು. ಎಲ್ಲರಿಗೂ ಹಣ ಹೊಂದಿಸುವುದು ಕಷ್ಟವಾಗುತ್ತದೆ. ಹಾಗಾಗಿ ಮುಂಗಡ ಪಾವತಿಗೆ ಆ.15ರವರೆಗೆ ಗಡುವು ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಪರಿಶೀಲಿಸಿ ಕ್ರಮ ಕೈಗೊಳ್ಳಿ:** ಯೋಜನೆಯ ಸ್ಥಳದ ಆಸುಪಾಸಿನಲ್ಲಿ ಕೆಲ ಖಾಸಗಿ ತುಂಡು ಭೂಮಿ ಇದ್ದು, ಸಂಪರ್ಕ ಮಾರ್ಗಕ್ಕೆ ತಡೆಯಾಗಿದೆ. ಸ್ವಚ್ಛತೆಗೆ ಎಂದು ನಗರ ಪಾಲಿಕೆ ವಲಯ ಕಚೇರಿ–3ರ ಸಹಾಯಕ ಆಯುಕ್ತ ಸತ್ಯಮೂರ್ತಿ ಸಭೆಯ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಜಿಟಿಡಿ, ಖಾಸಗಿ ಭೂಮಿ ಎಂದು ಹೇಳುತ್ತಿರುವ ಜಾಗಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ, ವಾಸ್ತವತೆಯನ್ನು ಖಚಿತಪಡಿಸಿಕೊಳ್ಳಿ. ಅಂತಹವರ ಭೂಸ್ವಾಧೀನ ಪಡಿಸಿಕೊಂಡು ಪರಿಹಾರ ನೀಡಲು ಕ್ರಮ ಕೈಗೊಳ್ಳಿ ಎಂದು ತಹಸೀಲ್ದಾರ್ ಗಿರೀಶ್ ಅವರಿಗೆ ತಿಳಿಸಿದರು.

**ಸಾಲ ಸೌಲಭ್ಯ:** ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ಫಲಾನುಭವಿಗಳು ಪಾವತಿಸುವ ಮುಂಗಡ, ಕೇಂದ್ರ ಸರ್ಕಾರದ ಸಬ್ಸಿಡಿ ಹೊರತುಪಡಿಸಿ ಉಳಿದ ಹಣಕ್ಕೆ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ಕಲ್ಪಿಸಬೇಕು. ಈ ನಿಟ್ಟಿನಲ್ಲಿ ಶಿಬಿರಗಳ ಮೂಲಕ ಫಲಾನುಭವಿಗಳಿಗೆ ಮಾಹಿತಿ ನೀಡಬೇಕು. ಯಾವ ಬ್ಯಾಂಕ್‌ಗಳಲ್ಲಿ ಸಾಲ ಸೌಲಭ್ಯ ದೊರೆಯಲಿದೆ ಎನ್ನುವುದನ್ನು ತಿಳಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಇದಕ್ಕೆ ಪೂರಕವಾಗಿ ಮಾತನಾಡಿದ ಜಿಟಿಡಿ, ಎಲ್ಲರೂ ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವುದಿಲ್ಲ. ಹಾಗಾಗಿ ಯಾವ ಬ್ಯಾಂಕ್‌ನಲ್ಲಿ ಸಾಲ ದೊರೆಯುತ್ತದೆಯೂ ಅಲ್ಲಿಯೇ ಫಲಾನುಭವಿಗಳ ಹೊಸ ಖಾತೆ ತೆರೆಯಲು ವ್ಯವಸ್ಥೆ ಮಾಡುವಂತೆ ಸೂಚನೆ ನೀಡಿದರು. ಪಾಲಿಕೆ ಹೆಚ್ಚುವರಿ ಆಯುಕ್ತೆ ರೂಪಾ, ಆಶ್ರಯ ಸಮಿತಿ ಕಚೇರಿ ಆಡಳಿತಾಧಿಕಾರಿ ಉಮೇಶ್ ಮತ್ತಿತರ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

### ಯೋಜನೆಯ ಪ್ರಮುಖ ಅಂಶಗಳು

ಮಂಡಕಳ್ಳಿ ವ್ಯಾಪ್ತಿಯ 40 ಎಕರೆ ಜಾಗದಲ್ಲಿ 159 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಒಟ್ಟು 2,446 ಮನೆಗಳನ್ನು ನಿರ್ಮಿಸಲಿದ್ದು, ಈಗಾಗಲೇ 1,732 ಫಲಾನುಭವಿಗಳ ಪಟ್ಟಿ ಅಂತಿಮಗೊಳಿಸಲಾಗಿದೆ. ಇದರಲ್ಲಿ 36 ಮಂದಿ ತೃತೀಯ ಲಿಂಗಿಗಳ ಅರ್ಜಿಗಳಿವೆ. ಇನ್ನುಳಿದ 700ಕ್ಕೂ ಹೆಚ್ಚು ಅರ್ಜಿಗಳು ದಾಖಲೆ ಪರಿಶೀಲನೆ ಹಂತದಲ್ಲಿವೆ. ನೆಲ ಮಹಡಿ ಹಾಗೂ ಮೊದಲ ಹಂತ(ಜಿ+1), ನೆಲ ಮಹಡಿ ಹಾಗೂ 2 ಹಂತ(ಜಿ+2)ಗಳಲ್ಲಿ ಮನೆ ನಿರ್ಮಾಣವಾಗಲಿವೆ. ಅಂಗನವಾಡಿ, ಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ ಇನ್ನಿತರ ಅತ್ಯವಶ್ಯಕ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. 1 ಮನೆಗೆ 6.89 ಲಕ್ಷ ರೂ. ಬೆಲೆ ನಿಗದಿಪಡಿಸಿದ್ದು, ಇದರಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ 3.50 ಲಕ್ಷ ರೂ. ಮತ್ತು ಸಾಮಾನ್ಯ ವರ್ಗದ ಫಲಾನುಭವಿಗಳಿಗೆ 2.70 ಲಕ್ಷ ರೂ. ಸಬ್ಸಿಡಿ ದೊರಕಲಿದೆ. ಒಟ್ಟು ಮೌಲ್ಯದ ಶೇ.10ರಷ್ಟು(70 ಸಾವಿರ) ಹಣವನ್ನು ಆ.15ರೊಳಗೆ ಪಾವತಿ ಮಾಡಬೇಕು. ಇನ್ನು ಪರಿಶಿಷ್ಟ ವರ್ಗದವರು 2.69 ಲಕ್ಷ ರೂ. ಹಾಗೂ ಸಾಮಾನ್ಯ ವರ್ಗದವರು 3.50 ಲಕ್ಷ ರೂ.ಗಳನ್ನು ಬ್ಯಾಂಕ್‌ಗಳಿಂದ ಸಾಲ ಪಡೆಯಬಹುದು. ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಎಜಿಜೆ ಕನ್‌ಸ್ಟ್ರಕ್ಷನ್ ಸಂಸ್ಥೆ ಮನೆಗಳ ನಿರ್ಮಾಣ ಆರಂಭಿಸಲಿದೆ.



ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ ಮೈಸೂರು ಜಿಲ್ಲೆ–571107

E-Mail: itstaff_ulb_periyapatna@yahoo.com ದೂರವಾಣಿ: 08223-273036

ಸಂ: ಪುಸಪಿಪ:/ಆ.ಶಾ/ಸಿ.ಆರ್/ಸಾ.ಪ್ರ/2022–23 ದಿನಾಂಕ: 30.06.2022

**ಸಾರ್ವಜನಿಕ ಪ್ರಕಟಣೆ**

**ಏಕ ಬಳಕೆಯ ಪ್ಲಾಸ್ಟಿಕ್ (SUP) ವಸ್ತುಗಳ ಉತ್ಪಾದನೆ, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆಯನ್ನು ನಿಷೇಧಿಸುವ ಸೂಚನೆ ಮತ್ತು ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ (ತಿದ್ದುಪಡಿ) ನಿಯಮಗಳ ಅನುಸರಣೆ 2021**

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ FEE 17 EPC 2012 ದಿನಾಂಕ:11/03/2016ರ ಪ್ರಕಾರ ಕೆಳಗಿನ ಏಕ ಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳನ್ನು 11/03/2016 ರಿಂದ ಈಗಾಗಲೇ ನಿಷೇಧಿಸಲಾಗಿದೆ ಅಂದರೆ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ ಪ್ಲಾಸ್ಟಿಕ್ ಬ್ಯಾನರ್ ಗಳು ಪ್ಲಾಸ್ಟಿಕ್ ಬಂಟಿಂಗ್ಸ್, ಪ್ಲಾಸ್ಟಿಕ್ ಫ್ಲೆಕ್ಸ್ , ಪ್ಲಾಸ್ಟಿಕ್ ಪ್ಲೆಟ್‌ಗಳು, ಪ್ಲಾಸ್ಟಿಕ್ ಧ್ವಜಗಳು, ಪ್ಲಾಸ್ಟಿಕ್ ಕಪ್‌ಗಳು, ಪ್ಲಾಸ್ಟಿಕ್ ಸ್ಪೂನ್ಗಳು, ಅಂಟಿಕೊಳ್ಳುವ ಫಿಲ್ಮ್‌ಗಳು, ಎಲ್ಲಾ ದಪ್ಪದ ಡೈನಿಂಗ್ ಟೇಬಲ್‌ನಲ್ಲಿ ಹರಡಲು ಬಳಸುವ ಪ್ಲಾಸ್ಟಿಕ್ ಹಾಳೆಗಳು, ಸ್ಟ್ರಾಗಳು ಥರ್ಮಾಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಮಣಿಗಳಿಂದ ಮಾಡಿದ ವಸ್ತುಗಳು.

ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ (MOEF ಮತ್ತು CC ) ನವದೆಹಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ (ತಿದ್ದುಪಡಿ) ನಿಯಮಗಳು, 2021 ರಲ್ಲಿ ಮೇಲಿನ ನಿಷೇದಿತ ಉತ್ಪನ್ನಗಳ ಜೊತೆಗೆ ಕೆಳಗಿನ ಹೆಚ್ಚುವರಿ ಏಕ ಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳನ್ನು 1 ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ನಿಷೇಧಿಸಿ 12 ಆಗಸ್ಟ್ 2021 ರಂದು ಅಧಿಸೂಚನೆ (G.S.R.No 571 (E)) ಯನ್ನು ಹೊರಡಿಸಿದೆ.

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳು 2016 ರ ನಿಯಮ 4(2) ರ ಪ್ರಕಾರ (ತಿದ್ದುಪಡಿಯಂತೆ) ಪಾಲಿಸ್ಟೈರಿನ್ ಮತ್ತು ವಿಸ್ತರಿತ ಪಾಲಿಸ್ಟೈರಿನ್ ಸೇರಿದಂತೆ ಕೆಳಗಿನ ಏಕ ಬಳಕೆಯ ಪ್ಲಾಸ್ಟಿಕ್ (SUP) ತಯಾರಿಕೆ ಆಮದು ಸಂಗ್ರಹಣೆ ವಿಸ್ತರಣೆ ಮಾರಾಟ ಮತ್ತು ಬಳಕೆಯನ್ನು ಜುಲೈ 01 2022 ರಿಂದ ಜಾರಿಗೆ ಬರುವಂತೆ ನಿಷೇಧಿಸಲಾಗಿದೆ.

**ಎ) ಪ್ಲಾಸ್ಟಿಕ್ ಸ್ಟಿಕ್‌ಗಳೊಂದಿಗೆ ಇಯರ್ ಬಡ್‌ಗಳು, ಬಲೂನ್‌ಗಳಿಗೆ ಬಳಸುವ ಪ್ಲಾಸ್ಟಿಕ್ ಸ್ಟಿಕ್‌ಗಳು, ಪ್ಲಾಸ್ಟಿಕ್ ಧ್ವಜಗಳು, ಪ್ಲಾಸ್ಟಿಕ್ ಕ್ಯಾಂಡಿ ಸ್ಟಿಕ್‌ಗಳು, ಪ್ಲಾಸ್ಟಿಕ್ ಐಸ್‌ಕ್ರೀಮ್ ಸ್ಟಿಕ್‌ಗಳು, ಅಲಂಕಾರಕ್ಕಾಗಿ ಬಳಸುವ ಪಾಲಿಸ್ಟೈರಿನ್ (ಥರ್ಮಕೋಲ್)**

**ಬಿ) ಪ್ಲಾಸ್ಟಿಕ್ ಪ್ಲೇಟ್‌ಗಳು, ಪ್ಲಾಸ್ಟಿಕ್ ಕಪ್‌ಗಳು, ಪ್ಲಾಸ್ಟಿಕ್ ಲೋಟಗಳು, ಫೋರ್ಕ್‌ಗಳು, ಪ್ಲಾಸ್ಟಿಕ್ ಚಮಚಗಳು, ಪ್ಲಾಸ್ಟಿಕ್ ಚಾಕುಗಳು, ಪ್ಲಾಸ್ಟಿಕ್ ಟ್ರೇಗಳಂತಹ ಕಟ್ಲರಿಗಳು, ಸ್ವೀಟ್ ಬಾಕ್ಸ್‌ಗಳ ಸುತ್ತ ಸುತ್ತುವ ಅಥವಾ ಪ್ಯಾಕಿಂಗ್ ಫಿಲ್ಮ್‌ಗಳು ಆಮಂತ್ರಣ ಪತ್ರಗಳು ಮತ್ತು ಸಿಗರೇಟ್ ಪ್ಯಾಕೆಟ್‌ಗಳು, 100 ಮೈಕ್ರಾನ್‌ಗಿಂತ ಕಡಿಮೆ ದಪ್ಪದ ಪ್ಲಾಸ್ಟಿಕ್ ಅಥವಾ PVC ಬ್ಯಾನರ್‌ಗಳು, ಪ್ಲಾಸ್ಟಿಕ್ ಸ್ಟಿರರ್‌ಗಳು.**

ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ (MOEF ಮತ್ತು CC ) ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಟೈಮ್ ಲೈನ್‌ಗಳ ಪ್ರಕಾರ ಮೇಲಿನ ಎಲ್ಲಾ ವಸ್ತುಗಳ ಉತ್ಪಾದಕರು, ದಾಸ್ತಾನುದಾರರು, ಚಿಲ್ಲರೆ ವ್ಯಾಪರಿಗಳು, ಅಂಗಡಿ ಮಾಲೀಕರುಗಳು, ಇ ಕಾಮರ್ಸ್ ಕಂಪನಿಗಳು, ಬೀದಿ ವ್ಯಾಪಾರಿಗಳು, ವಾಣಿಜ್ಯ ಸಂಸ್ಥೆಗಳು (ಮಾಲ್‌ಗಳು/ ಮಾರುಕಟ್ಟೆ ಸ್ಥಳ/ ಶಾಪಿಂಗ್ ಕೇಂದ್ರಗಳು/ಸಿನಿಮಾ ಮನೆಗಳು/ಪ್ರವಾಸೋದ್ಯಮ ಸ್ಥಳಗಳು/ಶಾಲೆಗಳು/ಕಾಲೇಜುಗಳು/ಕಚೇರಿ ಸಂಕೀರ್ಣಗಳು/ಆಸ್ಪತ್ರೆಗಳು ಇತರೇ ಸಂಸ್ಥೆಗಳು ಮತ್ತು ಸಾಮಾನ್ಯ ಸಾರ್ವಜನಿಕರಿಗೆ ಏಕ ಬಳಕೆಯ ಪ್ಲಾಸ್ಟಿಕ್ ಉತ್ಪಾದನೆ ಸಂಗ್ರಹಣೆ ವಿತರಣೆ ಮಾರಾಟ ಮತ್ತು ಬಳಕೆಯನ್ನು ನಿಲ್ಲಿಸುವಂತೆ ತಿಳಿಸಲು ಈ ಸೂಚನೆಯನ್ನು ನೀಡಲಾಗಿದೆ.

ಮೇಲಿನ ಆದೇಶವನ್ನು ಕೈಗಾರಿಗಳು ವಾಣಿಜ್ಯ ಸಂಸ್ಥೆಗಳಾದ ಮಾಲ್‌ಗಳು / ಮಾರುಕಟ್ಟೆ ಸ್ಥಳ / ಶಾಪಿಂಗ್ ಕೇಂದ್ರಗಳು / ಸಿನಿಮಾ ಮನೆಗಳು/ಪ್ರವಾಸಿ ಸ್ಥಳಗಳು / ಶಾಲೆಗಳು /ಕಾಲೇಜುಗಳು/ ಕಚೇರಿಗಳು ಆಸ್ಪತ್ರೆಗಳು ಮತ್ತು ಇತರೇ ಸಂಸ್ಥೆಗಳು ಉಲ್ಲಂಘಿಸಿದರೆ ಪರಿಸರ (ಸಂರಕ್ಷಣೆ) ಕಾಯ್ದೆ 1986 ರಡಿಯಲ್ಲಿ ನಿಷೇಧಿತ ಪ್ಲಾಸ್ಟಿಕ್ ಉತ್ಪನ್ನಗಳ ವಶಪಡಿಸಿಕೊಳ್ಳುವ ಮುಚ್ಚುವ ಆದೇಶವನ್ನು ನೀಡಲಾಗುವುದು ಹಾಗೂ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಹೊರಡಿಸಿದ ಮಾರ್ಗಸೂಚಿಯ ಪ್ರಕಾರ ಪರಿಸರ ಪರಿಹಾರವನ್ನು ಪ್ರತಿ ಟನ್ ಗೆ 5000/–ರೂಗಳನ್ನು ದಂಡ ವಿಧಿಸಲಾಗುವುದು.

| | | |
|---|---|---|
| ಸಹಿ/– ಅಧ್ಯಕ್ಷರು | ಸಹಿ/– ಉಪಾಧ್ಯಕ್ಷರು | ಸಹಿ/– ಮುಖ್ಯಾಧಿಕಾರಿ |
| ಪುರಸಭೆ, ಪಿರಿಯಾಪಟ್ಟಣ | ಪುರಸಭೆ, ಪಿರಿಯಾಪಟ್ಟಣ | ಪುರಸಭೆ, ಪಿರಿಯಾಪಟ್ಟಣ |

DIPR/DD-MYS/MCA/206/2022-23



**ಶಿವಗಣಾರಾಧನೆ ಆಹ್ವಾನ ಪತ್ರಿಕೆ**




ಇವರು ದಿ.27.06.2022 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಶಿವಗಣಾರಾಧನೆಯನ್ನು ದಿ:08.07.22 ನೇ ಶುಕ್ರವಾರ ಮೃತರ ಸ್ವಗೃಹ ಮೈಸೂರಿನ ಗಾಯತ್ರಿಪುರಂ, ವಿಶ್ವಕರ್ಮ ಕಾಲೋನಿಯಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು:
ಶ್ರೀಮತಿ ಲೀಲಾವತಿ ಮತ್ತು ಶ್ರೀ ಮಹದೇವಪ್ಪ ಹಾಗೂ ಕುಟುಂಬವರ್ಗದವರು

**ಮಹೇಶ್.ಎಂ**



**ನಾಲ್ಕನೇ ವರ್ಷದ ಸವಿನೆನಪು**



**ಶ್ರೀಮತಿ ಜಯಲಕ್ಷ್ಮಿ.ಎಂ**
(ಲೇಟ್ ಜವರಯ್ಯನವರ ಧರ್ಮಪತ್ನಿ)
ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷ ಕಳೆದರೂ ಸಹ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು:
ಪ್ರೀತಿಯ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು.



